Clause 30, as amended, was added to the Bill.

CLAUSE 31.

Mr. SPEAKER.—New amendment does not come in. It is barred. I will therefore put the rest of the clauses to the vote.

The question is:

"That clauses 31 to 34, both inclusive, standpart of the Bill."

The motion was adopted.

Clauses 31 to 34, both inclusive, were added to the Bill

Mr. SPEAKER.—Clause 1, the Title and the Preamble.

The question is :

"That Clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri B. D. JATTI.—Sir, I beg to move :

"That the Mysore Sales-tax (Amendment) Bill, 1963, as amended, be passed."

Mr. SPEAKER.—The question is:

"That the Mysore Sales-tax (Amendment) Bill, 1963, as amended, be passed."

The motion was adopted.

MYSORE AGRICULTURAL INCOME-TAX (AMENDMENT) BILL, 1963

Motion to consider.

Sri B. D. JATTI.—Sir, I beg to move :

"That the Mysore Agricultural Income-tax (Amendment) Bill, 1963, be taken into consideration."

Mr. SPEAKER.—Motion moved :

"That the Mysore Agricultural Income-tax (Amendment) Bill, 1963, be taken into consideration."

For the benefit of the Hon'ble Members, I say that I have asked the office to keep three books on the Table in the Reading Room relating to Sales-Tax (Amendment) Bill, the Agricultural Income-Tax (Amendment) Bill and other books—the Act of 1957 of Mysore, Act 1950 of Hyderabad and Act 1950 of Bihar.

Sri SANJEEVANATH AIKALA.—Those books will not help us.

SRI B. D. JATTI.—Sir, in the Bill that has been presented to this House, there are few provisions. Some of those provisions are proposed to be amended and some new clauses are being introduced. It is the intention of the Government and it is desirable to entrust the appellate powers to the Appellate Tribunal. Till now it was only the Departmental officers who were hearing appeals. Now, it is the Appellate Tribunal which has been constituted under the Sales-tax Act, which will hear all appeals ; and as I explained to the House while speaking about the provisions of the Sales-Tax (Amendment) Bill, the Tribunal consists of three persons—a Chairman who is of the status of a District Judge and two other Members. We have thought it better to allow these assesses to take the opportunity of going before such a tribunal in appeal.

It is necessary to divest the Commission of the appellate and revisional powers retaining with him only the powers to revise order prejudicial to the revenue.

Now, Sir, the assesses have got alternative reliefs ; one of going in appeal ; another of revision and many of the assesses prefer to go to the Commissioner in revision. The Commissioner of Commercial Taxes who happens to be the head of the department, cannot find time to supervise effectively the working of the administration of agricultural income-tax. It is better that he should find more time. That is why this power has been taken from him and it has been given to the Tribunal. So he will use his time for improving the working of the administration and he is also collecting more revenue from agricultural income tax. Thirdly, it has been held by the Supreme Court in A. I. R. 1957 Supreme Court 758-Government of Mysore *vs.* Vijayakumar, that the trees proved to be of spontaneous growth, not involving any human labour or skill in their planting or growth are not products of agriculture and income derived therefrom is not agricultural income, and that timber shall not include them. So it is proposed to include timber among the commercial crops with retrospective effect and Government propose to bring an amendment to this. As per the decision of the High Court, if it is accepted, Government will have to refund heavy sums of money to the persons from whom we want to collect because we have assessed their accounts. In view of the decision, in order to avoid paying or refunding the money and also to collect money on timber, a clause has been inserted and an amendment also is proposed to be moved by Government. Fourthly, it has become necessary to include caster, karad, mustard and nigar among the commercial crops with effect from the commencement of the present financial year. The object is to bring all the commercial crops under one category ; that is why this clause is introduced. In a recent decision of the High Court it has been held that in the case of a firm liable to tax, the amount paid as remuneration to a partner of the firm can be deducted from the agricultural income as expenditure incurred for the purpose of deriving the agricultural income under section 5 of the Act. In another decision it has been held by the High Court that the expenditure laid out or expended for the cultivation, upkeep or maintenance of immature plants can also be deducted from the agricultural income. So

(SRI B. D. JATTI)

necessary amendments are made in the Amending Bill, 1963. It is considered necessary to make it clear that for purposes of giving exemption from tax, amounts paid for a charitable purpose will include payments to institutions financed wholly or in part by Government or a local authority whether owned by the Government or a local authority or not. So in order to make the position of the persons who are running charitable institutions favourable, this clause has been introduced. There is no additional expenditure for implementing the provisions of the Act. These are the main provisions incorporated in the present Amending Bill.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಸ್ವಾಮಿ, ಸಭೆಯ ಮುಂದೆ ಬಂದಿರತಕ್ಕ ಈ ಅಗ್ರಿಕಲ್ಚರಲ್ ಇನ್‌ಕಂ-ಟ್ಯಾಕ್ಸ್ ಬಿಲ್ಲನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಸಾಮಾನ್ಯವಾಗಿ ಇದು ಮೈದಾನದಲ್ಲಿರತಕ್ಕ ಹೆಚ್ಚು ಜನ ರೈತರನ್ನು ಭಾಧಿಸದೇ ಇದ್ದಾಗ್ಯೂ ಮಲೆನಾಡಿನಲ್ಲಿರತಕ್ಕ ರೈತರನ್ನು ಹೆಚ್ಚಾಗಿ ಬಾಧಿಸುತ್ತದೆ ಎಂದು ಹೇಳಲು ವಿಷಾದಪಡುತ್ತೇನೆ. ಏಕೆಂದರೆ ಈ ತಿದ್ದುಪಡಿ ಮಸೂದೆಯಲ್ಲಿ ಕೊಟ್ಟಿರತಕ್ಕ ಧ್ಯೇಯ ಮತ್ತು ಉದ್ದೇಶಗಳನ್ನು ನೋಡುವಾಗ ಯಾವ ಉದ್ದೇಶದಿಂದ ಇದನ್ನು ತರಲಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಿರುತ್ತಾರೆ. ಕೋರ್ಟು ಏನೊಂದು ನಿರ್ಣಯ ಕೊಟ್ಟಿದೆಯೋ ಆ ನಿರ್ಣಯವನ್ನು ಅನುಸರಣೆ ಮಾಡುವುದಕ್ಕಾಗಿ ಈ ತಿದ್ದುಪಡಿಯನ್ನು ತಂದಿಲ್ಲ, ಆ ನಿರ್ಣಯಕ್ಕೆ ಅನುಕೂಲವಾಗುವಂತೆ ಕಾನೂನನ್ನು ತಿದ್ದುಪಡಿ ಮಾಡುವುದಕ್ಕೆ ಈ ಬಿಲ್ಲನ್ನು ಸಭೆಯ ಮುಂದಿಟ್ಟಿದ್ದಾರೆ. ಈ ಬಿಲ್‌ನಲ್ಲಿ ಕ್ಲಾಸ್ (3) ಅತಿ ಮುಖ್ಯವಾದದ್ದು. ಪ್ಲಾಂಟೇಷನ್ ಕ್ರಾಪ್‌ಗಳ ಬಗ್ಗೆ ಹೇಳುವುದಾದರೆ ಮೈಸೂರು ಸಂಸ್ಥಾನದಲ್ಲಿ 1959-60 ನೆಯ ಅಂಕಿಅಂಶಗಳ ಪ್ರಕಾರ 1,68,099 ಎಕರೆ ಪ್ರದೇಶದ ಜಮೀನಿನಲ್ಲಿ ಕಾಫಿ ಬೆಳೆ ಇದೆ. ಇದನ್ನು ನೋಡುವಾಗ ಇಡೀ ಹಿಂದೂಸ್ತಾನದಲ್ಲಿ ಮೈಸೂರು ಸಂಸ್ಥಾನದಲ್ಲಿಯೇ ಕಾಫಿ ಉತ್ಪಾದನೆ ಹೆಚ್ಚು ಎಂಬುದು ಗೊತ್ತಾಗುತ್ತದೆ. ನಾನು ಅಂಕಿ ಅಂಶಗಳನ್ನು ಹೇಳುವುದಾದರೆ :

1960-61ನೇ ಸಾಲಿಗೆ ಭಾರತದ ಉತ್ಪನ್ನದ ಶೇಕಡ 76 ಭಾಗ ಮೈಸೂರು ಸಂಸ್ಥಾನದ ಉತ್ಪನ್ನವಾಗಿದೆ. 1961-62ಕ್ಕೆ ಶೇಕಡಾ 69ಕ್ಕೆ ಇಳಿದಿದೆ, 1962-63ಕ್ಕೆ ಶೇಕಡ 72 ಇದೆ ಎಂದ ಮೇಲೆ ಈ ಮೂರು ವರ್ಷಗಳ ಉತ್ಪನ್ನವನ್ನು ನೋಡುವಾಗ ದಿನೇ ದಿನೇ ಕಡಮೆಯಾಗುತ್ತಾ ಇದೆಯೇ ವಿನಾ ಹೆಚ್ಚಾಗುತ್ತಾ ಇಲ್ಲ. ಇನ್ನು ಸಂಸ್ಥಾನದಲ್ಲಿರತಕ್ಕ ಎಸ್ಟೇಟುಗಳ ವಿಷಯವನ್ನು ತೆಗೆದುಕೊಂಡರೆ 100 ಎಕರೆಗೂ ಹೆಚ್ಚು ಇರತಕ್ಕ ಎಸ್ಟೇಟ್ 340 ಇವೆ. 100 ಎಕರೆಗಿಂತ ಕಡಮೆ ಇರತಕ್ಕ ಎಸ್ಟೇಟ್‌ಗಳು 15,087 ಇವೆ. ಒಟ್ಟು 16,420 ಎಸ್ಟೇಟುಗಳು ಇವೆ. ಈ ಒಂದು ವ್ಯವಸಾಯದ ಉದ್ಯಮವನ್ನವಲಂಬಿಸಿರತಕ್ಕ, ಕೂಲಿಯನ್ನು ಹೊಂದತಕ್ಕ ಒಂದು ಲಕ್ಷ ಜನ ಮೈಸೂರು ಸಂಸ್ಥಾನದಲ್ಲಿದ್ದಾರೆ. ಇಂಥಾ ಉದ್ಯಮಕ್ಕೆ ಮೈಸೂರು ಸಂಸ್ಥಾನದಲ್ಲಿ ಯಾವ ವಿಧವಾದ ಪ್ರೋತ್ಸಾಹ ವಿದೆ ಎಂಬ ಹಿನ್ನೆಲೆಯಿಂದ ಈ ಅಗ್ರಿಕಲ್ಚರಲ್ ಇನ್‌ಕಂ-ಟ್ಯಾಕ್ಸ್ ತಿದ್ದುಪಡಿ ಮಸೂದೆಯನ್ನು ನೋಡುವುದಾದರೆ, ಇದಕ್ಕೆ ಯಾವ ವಿಧವಾದ ಪ್ರೋತ್ಸಾಹ ಸಿಕ್ಕುತ್ತಿದೆ ಎಂಬುದನ್ನು ಅಂಕಿಅಂಶಗಳ ಅಧಾರದ ಮೇಲೆ ಹೇಳಬಯಸುತ್ತೇನೆ.

1960-61 ರಲ್ಲಿ	ಮೈಸೂರು	ಸಂಸ್ಥಾನದಲ್ಲಿ	51,561	ಟನ್ ಕಾಫಿ	ಬೆಳೆ ಆಗಿದೆ.
1961-62	,,	,,	31,900	,,	,,
1962-63	,,	,,	41,253	,,	,,

ಈ ಮೂರು ವರ್ಷಗಳ ಅಂಕಿಅಂಶಗಳನ್ನು ತೆಗೆದುಕೊಳ್ಳುವುದಾದರೆ ದಿನದಿನಕ್ಕೆ ಬೆಳೆ ಕಡಮೆ ಯಾಗುತ್ತಾ ಇದೆ; ಮತ್ತು ಪರದೇಶಕ್ಕೆ ಕಾಫಿ ಕಳುಹಿಸುವುದರಿಂದ ನಮಗೆ ಎಷ್ಟು ಸಂಪಾದನೆ ಯಾಗಿದೆ ಎಂದರೆ :

1960-61ಕ್ಕೆ	ಸುಮಾರು	7	ಕೋಟಿ	15	ಲಕ್ಷ ರೂಪಾಯಿ	ಸಂಪಾದನೆ ಆಗಿದೆ.
1961-62ಕ್ಕೆ	,,	8	,,	99	,,	,,
1962-63ಕ್ಕೆ	,,	7	,,	58	,,	,,

ಇಷ್ಟು ಹಣ ನಮಗೆ ಫಾರಿನ್ ಎಕ್ಸ್‌ಚೇಂಜ್ ಸಂಪಾದನೆ ಮಾಡತಕ್ಕ ಈ ಒಂದು ಉದ್ಯಮದ ಬಗ್ಗೆ ಸರ್ಕಾರದವರು ಯಾವ ವಿಧವಾದ ಉಪೇಕ್ಷೆಯನ್ನು ಮಾಡುತ್ತಾ ಇದ್ದಾರೆ ಎಂಬುದು ಬಹಳ ವಿಷಾದದ ಸಂಗತಿ. ಭಾರತ ಸರ್ಕಾರದವರು 3ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಹೆಚ್ಚಿನ ಮಹತ್ವದ ಸ್ಥಾನವನ್ನು ಕೊಡಬೇಕೆಂದು ಒತ್ತಿ ಹೇಳಿದ್ದಾರೆ.

ಇಂಥ ಒಂದು ಘನ ಉದ್ದೇಶವನ್ನು ಭಾರತ ಸರ್ಕಾರದವರಿಟ್ಟುಕೊಂಡಿದ್ದಾಗ್ಯೂ ಇಲ್ಲಿ ನಮ್ಮ ಸರ್ಕಾರದವರು ನಮ್ಮ ಸಂಸ್ಥಾನದಲ್ಲಿ ಶೇಕಡ 70 ರಷ್ಟು ಉತ್ಪತ್ತಿ ಕೊಡತಕ್ಕ—ಕಾಫಿ, ರಬ್ಬರ್, ಮತ್ತು ಟೀ ಬೆಳೆಗಳಿಗೆ ಯಾವ ಉತ್ತೇಜನವನ್ನೂ ಕೊಡದಿರುವುದು ಶೋಚನೀಯ. ಮೈಸೂರು ರಾಜ್ಯದ ಯೋಜನೆಯಲ್ಲಿ ಈ ಬೆಳೆಗಳನ್ನಿಡತಕ್ಕ ರೈತನಬಗ್ಗೆ ಒಂದು ಚಕಾರಕೂಡ ಹೇಳಿಲ್ಲ. ಇನ್ನು ಏಲಕ್ಕಿಯ ಬಗ್ಗೆ ಒಂದು ಸಂಶೋಧನಾ ಕೇಂದ್ರವನ್ನು ತೆರೆಯಲಾಗಿರುತ್ತದೆಂದು ಹೇಳಲಾಗಿದೆ. ಇನ್ನು ಮೆಣಸಿನ ಬೆಳೆಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳಲಾಗಿದೆ. ಆದರೆ ಕಾಫಿ, ರಬ್ಬರ್, ಟೀ ಬೆಳೆಗಳ ವಿಚಾರದಲ್ಲಿ ಇಷ್ಟು ತಾತ್ಸಾರಮನೋಭಾವನೆಯಿಂದ ಇರುವುದು ಸರಿಯಲ್ಲ. ಈಗ ಇವರು ತಂದಿರತಕ್ಕ ತಿದ್ದುಪಡಿಯು ಹೆಚ್ಚಿನ ವ್ಯವಸಾಯೋತ್ಪನ್ನ ಕೊಡತಕ್ಕ ಬೆಳೆಗಳನ್ನು ಈ ರಾಜ್ಯದಲ್ಲಿ ಕಡಮೆ ಮಾಡುವುದಕ್ಕೆ ಬಹಳ ಅನುಕೂಲವಾಗಿದೆ. ಇಲ್ಲಿ ಕ್ಲಾಜ್ (3)ರ ಪ್ರೊವೈಜೋನಲ್ಲಿ ಹೀಗೆ ಹೇಳಿದ್ದಾರೆ:

> "In the case of a firm, any payment of interest, salary, bonus, commission or remuneration made by the firm to any partner of the firm;"
>
> "(ii) in the case of a company, any expenditure which results directly or indirectly in the provision of any remuneration or benefit or amenity to a director or to a person who has substantial interest in the company or to a relative of the director, or of such person, as the case may be shall not be deemed to be expenditure laid out or expended for the purpose of deriving the agricultural income."

ಈ ರೀತಿ ತಾವು ಒಂದು ವ್ಯವಸ್ಥೆ ಮಾಡುವುದಾದರೆ ಈ ಪ್ಲಾಂಟೇಷನ್ನುಗಳು ನಾಲ್ಕಾರು ಜನ ಪಾಲುದಾರರ ಕೈಗೆ ಸಿಕ್ಕಿ ಅವರು ಈ ಉದ್ಯಮದ ಖರ್ಚುವೆಚ್ಚಗಳಿಗೆ ಡಿಡಕ್ಷನ್ ಕೊಡದೆ ಹೋದರೆ ಏನು ಮಾಡುವುದು? ಈಗ ಈ ಡಿವಿಡೆಂಡ್ ರೂಪದಲ್ಲಿ ಲಾಭ ಬಂದರೆ ಅದನ್ನು ನಾನು ಅಗ್ರಿಕಲ್‌ಚರಲ್ ಇನ್‌ಕಂ ಎಂದು ಭಾವಿಸಲು ವಿರೋಧವಿಲ್ಲ. ಇನ್ನೂ ಮುಂದೆ ಈ ಬಿಲ್ಲಿನಲ್ಲಿ ಹೆಚ್ಚು ಕರಾಳವಾದ ವಿಚಾರಗಳನ್ನು ಹೇಳಿದ್ದಾರೆ. ಈ ಬೆಳೆಯ ಆಯುಸ್ಸೆಲ್ಲ ಕೇವಲ 40 ವರ್ಷಮಾತ್ರ. ಈ ವಿಚಾರವನ್ನು ರಿಸೋರ್ಸಸ್ ಅಂಡ್ ಎಕಾನಮಿ ಕಮಿಟಿಯವರು ಹೇಳಿದ್ದಾರೆ. ಆ ರೈತ ಈ ಗಿಡಗಳು ಬಿದ್ದುಹೋಗುವುದರೊಳಗಾಗಿ ಮತ್ತೆ ಹೊಸ ಗಿಡಗಳನ್ನು ಬೆಳೆಯುವುದು ಬೇಡವೆ ಆ ಖರ್ಚನ್ನಾದರೂ ಅವನಿಗೆ ಬಿಡುವುದು ಬೇಡವೆ? ಈ ದಿವಸ ಟೆಕ್ಸ್‌ಟೈಲ್ ಇತ್ಯಾದಿ ಕೈಗಾರಿಕೆಗಳಿಗೆ ಸರ್ಕಾರ ಯಾವ ರೀತಿ ಪ್ರೋತ್ಸಾಹವನ್ನು ತೋರಿಸುತ್ತಿದೆಯೋ ಅದೇ ರೀತಿ ಇವರಿಗೂ ಏಕೆ ತೋರಿಸಬಾರದು? ಬೆಳೆ ಹಾಳಾಗುವ ಪರಿಸ್ಥಿತಿಗೆ ಬಂದಾಗ ದಿನ ದಿನಕ್ಕೂ ವಯಸ್ಸು ಕಡಮೆಯಾಗುತ್ತಾ ಉತ್ಪತ್ತಿ ಸಹಾ ಕಡಮೆಯಾಗುತ್ತದೆ. ಇಂಥವರಿಗೆ ಉತ್ತೇಜನ ಕೊಡದೆ ಹೋದರೆ...

2–30 P.M.

ಶ್ರೀ ಬಿ. ಡಿ. ಜತ್ತಿ.—ತಾವು ದಯವಿಟ್ಟು ಎರಡನೆಯ ಕ್ಲಾಜನ್ನು ನೋಡಿ?

ಶ್ರೀ ಕೆ. ಎಚ್. ರಂಗನಾಥ್.—ಮದ್ರಾಸಿನಲ್ಲಿ ಈ ಬೆಳೆ ಇರುವುದೆಲ್ಲ 20 ಪರ್ಸೆಂಟ್. ನಮ್ಮ ರಾಜ್ಯದಲ್ಲಿ 70 ಪರ್ಸೆಂಟಿದೆ. ಆದರೂ ಅವರು ಅಲ್ಲಿ ಆ ಬೆಳೆತೆಗೆಯತಕ್ಕವರಿಗೆ ಹೆಚ್ಚಿನ ಸಹಾಯವನ್ನು ನೀಡುತ್ತಿದ್ದಾರೆ. ತಾವೂ ಇಲ್ಲಿ ಇವರಿಗೆ ಸಹಾಯ ನೀಡಿದರೆ ಈ ದಾವಾಪಷ ಪ್ರಕಾರ ಅನುಕೂಲ ದೊರೆತೇ ದೊರೆಯುತ್ತದೆ. ಈ ವಿಚಾರವಾಗಿ ನಾನಾಗಲೇ ತಮಗೆ 3 ವರ್ಷದ ಅಂಕಿ ಅಂಶಗಳನ್ನು ತಿಳಿಸಿರುತ್ತೇನೆ. ಇದರಿಂದ ಸರ್ಕಾರಕ್ಕೇನೂ ನಷ್ಟವಾಗುವುದಿಲ್ಲ. ಆದುದರಿಂದ ಈಗ ಈ ಬೆಳೆಗಳ ಮೇಲೆ ಇಷ್ಟು ನಿರ್ಬಂಧಹಾಕುವುದು ಸರಿಯಲ್ಲ. ಈ ನಾಲ್ಕು ವರ್ಷಗಳಿಗೆ ಮಾಫಿ ಮಾಡಿದರೆ 40 ವರ್ಷಕಾಲ ಸರ್ಕಾರಕ್ಕೆ ಉತ್ಪತ್ತಿ ಬರುತ್ತದೆ. ರೈತನಿಗೂ ಅನುಕೂಲವಾಗುತ್ತದೆ. ಈ ಕಾರ್ಯಗಳಿಂದ ರೈತರಿಗೆ ಹೆಚ್ಚಿನ ಉತ್ಪನ್ನ ಕೊಡತಕ್ಕ ಈ ಬೆಳೆಗಳ ಬಗ್ಗೆ ಸರ್ಕಾರ ಇಷ್ಟು ತಾತ್ಸಾರಭಾವನೆ ತಾಳಬಾರದೆಂದು ಹೇಳುತ್ತೇನೆ. ನಮ್ಮಲ್ಲಿ 15 ಎಕರೆಗಳಿಗಿಂತ ಕಡಮೆ ಆಸ್ತಿಯಿರತಕ್ಕ ಸಂದರ್ಭ

(ಶ್ರೀ ಕೆ. ಎಚ್. ರಂಗನಾಥ್)

ಗಳು 15 ಸಾವಿರಕ್ಕೂ ಮೇಲಿವೆ. ನಮ್ಮಲ್ಲಿ 25-30 ಎಕರೆ ಇರುವಂಥ ಎಸ್ಟೇಟುಗಳೇ ಜಾಸ್ತಿ ಇವೆ. ಈ ರೈತರ ವಿಚಾರ ಬಹಳ ಕಳವಳ ಪರಿಸ್ಥಿತಿಯಲ್ಲಿದೆ. ಸಾಲದುದಕ್ಕೆ ಭೂಕಂದಾಯ ಈಗ ಒಂದಕ್ಕೆ ಎರಡರಷ್ಟಾಗಿದೆ. ಅವರು ಈ ದಿವಸ ಸಾಲ-ಸೋಲ ಮಾಡಿ ಆಸ್ತಿಗಳನ್ನು ಅಭಿವೃದ್ಧಿ ಪಡಿಸುತ್ತಿರುವಾಗ ಅವರ ಉತ್ಸಾಹವನ್ನು ಮೊಟಕು ಮಾಡುವುದು ಖಂಡಿತ ಸರಿಯಲ್ಲ. ಈ ನೀತಿಯೇ ಮುಂದುಬಂದಲ್ಲಿ ಮೈಸೂರು ರಾಜ್ಯದಲ್ಲಿ ಈ ಉದ್ಯಮ ಖಂಡಿತ ಬೆಳೆಯುವುದಿಲ್ಲ ಎಂದು ನಾನು ಹೇಳುತ್ತೇನೆ.

ಏಲಕ್ಕಿಗೆ ಈ ಹಿಂದೆ ಬಹಳ ರಿಯಾಯಿತಿ ಇತ್ತು. ಇವತ್ತು ಇದೊಂದು ದೊಡ್ಡ ಕರಾಳಪ್ರಶ್ನೆ ಯಾಗಿದೆ. 400 ರೂಪಾಯಿಗಳಿದ್ದದ್ದು ಈ ದಿವಸ 150 ರೂಪಾಯಿಗಳಿಗಿಳಿದಿದೆ. ಸಂಶೋಧನೆ ಯೇನೋ ನಡೆಯುತ್ತಿದೆ. ಆದರೆ ಉತ್ತಮ ಬೀಜಗಳಿನ್ನೂ ಬಂದಿಲ್ಲ. ರೋಗಕ್ಕೆ ಸರಿಯಾದ ಔಷಧಿ ಗಳನ್ನು ಕಂಡುಹಿಡಿದಿಲ್ಲ. ಈ ದಿವಸ ಹತ್ತಾರು ರೂಪಾಯಿಗಳ ಉಳಿತಾಯಕ್ಕೆ ಇಂಥ ಬೆಳೆಯನ್ನು ಮೊಟಕು ಮಾಡಲು ಇಂಥ ಒಂದು ಕಾನೂನನ್ನು ತರುವುದು ಅಂಥ ಒಂದು ಬುದ್ಧಿವಂತಿಕೆಯ ಕೆಲಸ ವಲ್ಲ ಎಂದು ಹೇಳುತ್ತೇನೆ. ಇದರಿಂದ ನಮ್ಮಲ್ಲಿ ಲಕ್ಷಾಂತರ ಜನ ಹಾಳಾಗುತ್ತಾರೆ. ಈ ವಿಚಾರ ವನ್ನು ಆ ಎಕಾನಮಿ ಕಮಿಟಿಯವರು ಚೆನ್ನಾಗಿ ಹೇಳಿದ್ದಾರೆ.

ಮೊದಲಿನಿಂದಲೂ ರೈತರಿಗೆ ಯಾವ ವಿಧವಾದ ಪ್ರೋತ್ಸಾಹವನ್ನೂ ಕೊಡುತ್ತಿಲ್ಲ. ರೈತರು ಕಷ್ಟಪಟ್ಟು ಬೆಳೆಸಿಕೊಂಡು ಬಂದಿರತಕ್ಕ ಸಮಯದಲ್ಲಿ ಇದನ್ನು ಮೊಟಕು ಮಾಡತಕ್ಕದ್ದು ಸರಿಯಾದ ಒಂದು ಕಾರ್ಯಕ್ರಮವಲ್ಲ ಎಂದು ನಾನಿಲ್ಲಿ ಹೇಳಬಯಸುತ್ತೇನೆ. ಮರ ಮುಟ್ಟುಗಳು ಈಕಾನೂನಿ ನೊಳಗೆ ಬರಲಿಲ್ಲ; ಅದಕ್ಕೆ ಒಂದು ಅಮೆಂಡುಮೆಂಟನ್ನು ತರಲಾಗಿದೆ ಎಂದು ಹೇಳಿದ್ದಾರೆ. ಸರಕಾರ ವನ್ನು ಒಂದು ಪ್ರಶ್ನೆ ಈ ಬಗ್ಗೆ ಕೇಳಬೇಕಾಗಿದೆ. ಮೊದಲಿನಿಂದಲೂ ಈ ದೇಶದಲ್ಲಿ ಮರಮುಟ್ಟುಗಳನ್ನು ಬೆಳೆಸಿಕೊಂಡು ಬಂದಿರುವ ಎಷ್ಟು ಟಿಂಬರ್ ಪ್ಲಾಂಟೇಷನ್ನುಗಳಿವೆ ಎನ್ನುವುದರ ಬಗೆಗೆ ಏನಾದರೂ ಅಂಕೆ ಸಂಖ್ಯೆಗಳೇನಾದರೂ ಇವೆಯೇ ಎಂದರೆ ಅದೂ ಇಲ್ಲಿಲ್ಲ. ಅಂತಹ ಅಂಕೆ ಸಂಖ್ಯೆಗಳೇನಾದರೂ ಇದ್ದರೆ ಅವನ್ನು ಇಲ್ಲಿ ವಿಚಾರ ಮಾಡಬಹುದಾಗಿತ್ತು. ಮಲೆನಾಡಿನಲ್ಲಿ ಪ್ಲಾಂಟೇಷನ್ನಿನಲ್ಲಿ ವ್ಯವಸಾಯ ಮಾಡತಕ್ಕ ಜನ, ಮರ ಮುಟ್ಟು ಮಾಡತಕ್ಕವರು ಎಷ್ಟಿದ್ದಾರೆ? 15 ಎಕರೆ, 20 ಎಕರೆ ಗಳಷ್ಟು ಇರುವ ಕಾಫೀ ಮತ್ತು ಕಾರ್ಡಮಂ ಪ್ಲಾಂಟೇಷನ್ನುಗಳಲ್ಲಿ ರೈತರಿಗೋಸ್ಕರ ಎಷ್ಟು ಹಣ ಖರ್ಚು ಮಾಡುತ್ತಿದ್ದಾರೆ ಎನ್ನುವ ಅಂಕೆ ಸಂಖ್ಯೆಗಳೂ ಇಲ್ಲಿಲ್ಲ. ಅಥವಾ ಬೇರಾವ ವಿವರಗಳನ್ನು ಕೊಡುವ ಪಟ್ಟಿಯೂ ಕೂಡ ಇಲ್ಲಿಲ್ಲ. ಮೈಸೂರು ದೇಶದಲ್ಲಿ ಇದರಿಂದ ಎಷ್ಟು ದುಡ್ಡು ಬರುತ್ತದೆ ಎನ್ನುವುದನ್ನೂ ಮಂತ್ರಿಗಳು ಇದನ್ನು ಮಂಡಿಸುವಾಗ ಹೇಳಲಿಲ್ಲ. ಇಂತಹ ಒಂದು ಅಮೆಂಡು ಮೆಂಟನ್ನು ತಂದು ಕಾನೂನು ಮಾಡುವಾಗ ಎಷ್ಟು ಸಾವಿರ ಎಕರೆಗಳಲ್ಲಿ ಎಷ್ಟು ಜನ ರೈತರು ಈ ಮಸೂದೆಯೊಳಗೆ ಬರುತ್ತಾರೆ ಎನ್ನುವ ವಿವರಗಳು ಇದರಲ್ಲಿ ಸ್ಪಷ್ಟವಾಗಿ ತೋರಿಸಿಲ್ಲ. ಅಲ್ಲದೇ ಈ ಕಾನೂನನ್ನು ಮಾಡಿ ಅವಿದ್ಯಾವಂತರಾಗಿರುವ ರೈತರನ್ನು ಕೋರ್ಟಿಗೆ ಸಿಕ್ಕಿಸಿ ಇಲ್ಲದ ವ್ಯವಹಾರ ಗಳಿಗೆ ಅವಕಾಶ ಮಾಡಿಕೊಡುತ್ತಿದ್ದೀರಿ. ಇದರಲ್ಲಿರುವ ಸ್ಟೇಟುಮೆಂಟ್ ಅಫ್ ಆಬ್ಜೆಕ್ಟ್ಸ ಮತ್ತು ರೀಸನ್ಸ್‌ಗಳಲ್ಲಿ ಈ ಹೊಸ ಕಾನೂನು ಮಾಡುವುದರಿಂದ ನಮಗೆ ಎಷ್ಟು ದುಡ್ಡು ಬರುತ್ತದೆ, ಪ್ರೈಮರಿ ಪ್ಲಾಂಟೇಷನ್ನುಗಳಿಂದ ಬರುವ ಆದಾಯವೇನು, ಖರ್ಚು ಎಷ್ಟು ಬರುತ್ತದೆ ಎನ್ನುವ ನಿಖರವಾದ ಅಂಕೆ ಸಂಖ್ಯೆಗಳೂ ಇಲ್ಲ. ಇವೊತ್ತು ಇರುವ ಪ್ಲಾಂಟೇಷನ್ನು ಉದ್ಯಮ ವ್ಯಾಪಾರಸ್ಥರ ಹಾಗೆ ರಾಮನ ಲೆಕ್ಕ ಇದು, ಕೃಷ್ಣನ ಲೆಕ್ಕ ಇದು ಎಂದು ಇಡುವುದಕ್ಕೆ ಸಾಧ್ಯವಿಲ್ಲ. ರೈತರ ಬಗ್ಗೆ ಸರಕಾರ ಯಾವ ವಿಧವಾದ ನೆರವು ಕೊಡಬೇಕು ಎನ್ನುವುದನ್ನು ನೋಡದೆ ಅವನಿಗೆ ತೊಂದರೆಯಾಗುವಂತಹ ಕಾನೂನನ್ನು ತರಬಾರದು. ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದನ್ನು ಸರಿಯಾಗಿ ವಿಚಾರ ಮಾಡಿಲ್ಲ. 1962ನೇ ಇಸವಿಯಲ್ಲಿ ಅಗ್ರಿಕಲ್ಚರು ಇನ್‌ಕಂ-ಟ್ಯಾಕ್ಸು ಕೊಡದೇ ಇರುವಾಗ ಹೈಕೋರ್ಟಿಗೆ ಹೋಗಿ ಒಂದು ತೀರ್ಮಾನವಾಯಿತು ಎನ್ನುವುದರ ಆಗುಹೋಗುಗಳನ್ನು ನೋಡದೆ ಇಂತಹ ಒಂದು ಅಮೆಂಡ್ ಮೆಂಟನ್ನು ತರುವ ಪದ್ಧತಿ ಸರಿಯಾದುದಲ್ಲ. ಇದರಿಂದ ಜನಗಳಿಗೆ ಆಗುವ ತೊಂದರೆಗಳೇನು ! ಇದರ ಆಗುಹೋಗುಗಳೇನು ಎನ್ನುವುದೊಂದನ್ನೂ ವಿಚಾರ ಮಾಡಿಲ್ಲ. ಸುಮ್ಮನೆ ಅವಸರವಸರ ವಾಗಿ ಅಮೆಂಡುಮೆಂಟನ್ನು ತಂದರೇನು ಪ್ರಯೋಜನ ? ರೈತರ ಉತ್ಸಾಹವನ್ನು ಮೊಟಕು ಮಾಡು ವುದಕ್ಕಾಗಿ ಇದನ್ನು ತಂದಿದ್ದಾರೆ ಎಂದು ಹೇಳಬೇಕಾಗಿದೆ. ಎಷ್ಟು ಎಕರೆಗಳಷ್ಟು ಭೂಮಿ ಇದೆ, ಎಷ್ಟು ಉತ್ಪತ್ತಿ ಬರುತ್ತದೆ, ರೀಪ್ಲಾಂಟೇಷನ್ನು ಮಾಡಲು ಎಷ್ಟು ಖರ್ಚು ಬರುತ್ತದೆ, ಎನ್ನುವ ವಿವರಗಳೊಂದೂ ಇದರಲ್ಲಿಲ್ಲ.

ಶ್ರೀ ಬಿ. ಡಿ. ಜತ್ತಿ.—ಇದನ್ನು ಇನ್ನೂ ಕ್ಯಾಲ್ಕುಲೇಷನ್ನು ಮಾಡಬೇಕು. ಒಂದು ವರ್ಷದ ಎಕ್ಸ್‌ಪೀರಿಯನ್ಸನ್ನು ನೋಡಿಕೊಂಡು ಮಾಡಬೇಕಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ಯಾವ ಐಟಂಗಳನ್ನು ತೆಗೆದುಕೊಂಡು ಹೆಚ್ಚಿನ ಉತ್ಪತ್ತಿ ಏನು ಬರುತ್ತದೆ ಎನ್ನುವುದನ್ನು ನೋಡಿದರೆ ಕೋಟ್ಯಾಂತರ ರೂಪಾಯಿಗಳೂ ಇದರಿಂದ ಬರುವ ಸ್ಥಿತಿಯೂ ಇಲ್ಲ. ಹಾಗಿರುವಾಗ ಅವಸರವಸರವಾಗಿ ಇಂತಹ ಕಾರ್ಯಕ್ರಮವನ್ನೇಕೆ ತೆಗೆದುಕೊಳ್ಳುತ್ತೀರಿ ! ದಯವಿಟ್ಟು ಈ ಬಿಲ್ಲನ್ನು ವಾಪಸು ತೆಗೆದುಕೊಳ್ಳಿ ಎಂದು ಹೇಳುತ್ತೇನೆ. ಮಲೆನಾಡನ್ನು ಬಿಜಾಪುರದ ಬಯಲನ್ನಾಗಿ ಮಾಡಬೇಡಿ, ಇರತಕ್ಕ ಹಳೆಯ ಪ್ಲಾಂಟೇಷನ್ನುಗಳು ಅಷ್ಟೇನೂ ಹೆಚ್ಚಾಗಿಲ್ಲ. ಇದರೊಳಗಿರುವ ರೈತರಿಗೆ ಉತ್ತೇಜನ ಕೊಡದೇ ಹೋದರೆ ಸರಿಯಾಗಿರುವುದಿಲ್ಲ, ಈಗಾಗಲೆ ಎಷ್ಟೋ ಕಡೆ ಬೀಟಿ ಮರಗಳು ಹಾಳಾಗಿ ಹೋದವು, ಅವಸರವಸರವಾಗಿ ಇಂತಹ ಕಾನೂನನ್ನು ತರುವುದು ಒಳ್ಳೆಯದಲ್ಲ, ಮಾನ್ಯ ಮಂತ್ರಿಗಳು ಇದನ್ನೆಲ್ಲಾ ವಿಚಾರ ಮಾಡಿ ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†SRI A. P. APPANNA (Virajpet).—While lending my support to this Bill, I would like to offer some comments on its provisions. It is an accepted fact that a business or industrial undertaking is on a much better footing today than agriculture. A person going on a business venture commands more finance and prestige than a person undertaking agriculture. That is the reason why the Governments at the Centre and in the States have come to the rescue of agriculture and are devoted to give all sorts of encouragement and fill upto agriculture. Keeping this background in mind, we have to study whether this Bill would confer benefits on agriculture so as to make it attractive.

In considering problems of agriculture, we have to compare it with the trends in industry. There are certain provisions in the Income Tax Act as applicable to companies, which are designed to give an impetus to business and industry. The act provides for developmental rebate, depreciation, etc. Unfortunately such concessions, as would encourage the growth and prosperity of agriculture, are conspicuous by their absence. Agriculture is the foundation, the bedrock of survival of this country. A large majority of our people depend upon agriculture and it is our duty to give them at least the concessions and privileges which industries and companies enjoy.

Sir, why I am telling this is, if any expansion in the industry or in the business is done, that expansion is taken into account in the general Income-Tax Act. The same principle must be extended in the agricultural income-tax also. Keeping in view, the expansion that is proposed to be brought into section 5 of the original Act, I want to impress upon the Government that any new cultivation or replanting must be treated as an expansion of the industry. It is an accepted fact that whether it is coffee, or tea or cardomum, after certain years the entire plantation must be renovated and that too under the existing conditions when the scientific cultivation has come into vogue. When most of the plantations have been brought up under the unscientific cultivation and now-a-days when scientific cultivation is being introduced, we cannot lay down the restrictions that only 200 or 100 acres must be renovated. I want to bring to the notice of the Government that there are scientific methods of cultivation in regard to other commercial crops which bring in four times the yield obtainable

(SRI A. P. APPANNA)

under unscientific cultivation. There are places where certain plantations yield only one candy of coffee per acre whereas in some other areas, plantations yield four candies per acre. That is the difference between scientific and unscientific cultivation. Suppose a person owns one hundred acres of estate and to-day he feels that he must switch over to scientific cultivation and plant coffee in all the 100 acres through scientific cultivation, I must say that it is to the best advantage of the State as well as to the person who does it.

Sri M. C. BASAPPA (Chamarajnagar).—Nothing prevents the planters from doing so.

Sri A. P. APPANNA.—Yes. The expenditure allowed is only to the extent of 2½ acres. I am talking of replanting. So, whether it is replanting or whether it is the expansion of the industry which is new planting, I do not say that all the expenditure must be immediately deducted and in that particular year some sort of depreciation or accelerated depreciation or developmental rebate must be provided because it is provided in the general Income-Tax Act for persons who are in a better position economically. Why not that be extended to the agricultural community in which the Government is interested and which it wishes to encourage in all possible manner? So far as the life of the commercial crops is concerned, we have got various reports of the Commission which say coffee must be replanted again after 40 years. Now, under the existing amendment, I would like to place before the House, what would be the picture. To-day suppose I take one hundred acres of land for coffee cultivation. As per this amendment Act, I must go on planting 2½ acres every year. After 40 years I complete my one hundred acres. After 40 years, the time has come for replanting the first 2½ acres.

Sri B. D. JATTI.—What about small estates having 20 to 25 acres?

Sri A. P. APPANNA.—Even for 25 acres, I am allowed less than one acre to plant because 2½ acres is allowed for one hundred acres. For 25 acres, it must be ¼th of it. You must plant only in those areas in a particular year which are allowed under this amendment. I feel, Sir, the Government must think that the benefits that are given to the industrial undertakings, to the business community, must be extended at least to the agriculturists because it is a known fact that unless those facilities are given we cannot bring this agricultural producer on a par with the people who are engaged in industries or business.

Regarding immature plants I find, that the expenditure can be deducted so far as tea plants are concerned. I do not know why this exemption is given so far as tea plants are concerned. If an immature tea plant is maintained by the estate and the expenditure is incurred for the tea plants, that may be deducted from the revenue expenditure, whereas for other plants it is not provided for. The tea plant and the coffee plant are on the same footing. I do not find any difference in it.

According to the amendment, timber has been included in the definition of plantation crops. I would like to bring to the notice of the Hon'ble Minister, that suppose there is one hundred acres of timber cultivation, according to this explanation at what stage this timber is considered immature or mature ? Suppose, I take to timber cultivation, here the amendment says that no expenditure for the maintenance of the immature plant can be taken into account. As we all know, some timber will take a number of years to become full-fledged and fit for removing and selling. If during this period timber becomes mature, till what stage it is to be considered as immature is not known. If timber is to be treated as immature till it is removed, then all the expenditure that has been incurred for maintaining is not brought in. So, that would cause hardship to a person who has spent money for maintaining the plantation because that is not allowed to be included in the expenditure, and I do not think we will be thereby encouraging those people. It is a fact that in big estates owned by certain companies, recently there has been a sale of timber to the extent of Rs. 50 to 60 lakhs. Of course, it takes place once in 400 or 500 years. Most probably, the Government has an eye on that also, I do not grudge that. But, the principle of taxation is not adhered to here. If the principle of Agriculture Income-Tax Act is to tax the income derived from agriculture, the sale of timber cannot be taken as an income from agricultural production. Under the existing conditions, timber can be treated as a part of the capital. Suppose, a land is to be bought, every one of us will look into the value of the land as well as the value of the timber. If the value of the land is Rs. 20 lakhs and the value of the timber is Rs. 20 lakhs, I buy it for Rs. 40 lakhs. To buy the same, I am selling a portion of my property. So, it is a sale capital. Whether that would come under the principles of taxation or not, so far as income is concerned, I would like to bring it to the notice of the Hon'ble Minister.

Then Sir, I would like to bring to the notice of the Government that certain expenditure incurred by the producers is not allowed. Suppose, three or four people join together and form a partnership Firm, and one among the partners who is not otherwise engaged works as Manager. Is it not in the interest of the estate to have their own partner as a Manager instead of having somebody else from outside as Manager ? This amendment will not provide for the partners who engage themselves in the service of the estate, who engage any one of the partners to be in charge of the estate and who will efficiently manage that partnership firm. That means that persons who are interested in the development of the Estate are not allowed to take charge, but Government would like that somebody from outside must be brought in there.

3-00 P.M.

Sir, I would also like to bring to the notice of the Hon'ble Minister that while under the general income-tax, insurance premium is allowed

(SRI A. P. APPANNA)

as an item of expenditure, why under the Agricultural income-tax insurance premium is not allowed. Insurance premium paid by the owners of the estate must be allowed to be deducted from the income because they have no other source to get it deducted. Suppose a person engages himself in business as well as agricultural production. Then that is different matter. He has got a chance of getting it exempted under the general Income-tax Act. But a person who is solely engaged in agriculture alone, if he is paying any insurance premium, that must be allowed as a legitimate expenditure.

With these observations, I request the Hon'ble Minister that in the levying of this tax, one thing must be taken into account that the producer of the agricultural products must be given equal treatment with the people who are engaged in industry or business pursuits. Unless this is done, whatever we say about the production of agriculture, we cannot achieve the target we desire.

With these words, I conclude, Sir.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಈ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಅಮೆಂಡ್‌ಮೆಂಟ್ಸ್ ಬಿಲ್ಲನ್ನು ಈಗ ತಿದ್ದುಪಡಿ ಮಾಡಬೇಕೆಂದು ತಂದಿರುವ ರೀತಿಯಲ್ಲಿ ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಹಣಕಾಸಿನ ಮಂತ್ರಿಗಳಾದ ಜತ್ತಿಯವರಿಗೆ ಮತ್ತು ಅವರಂತೆ ಯೋಚನೆ ಮಾಡತಕ್ಕ ಇತರ ಕೆಲವು ಮಾನ್ಯ ಸದಸ್ಯರುಗಳಿಗೆ ವ್ಯವಸಾಯದ ಪರಿಚಯವೇ ಇಲ್ಲವೆಂದು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಈ ಸಮಾಜದ ಇತರೆ ಬಾಬುಗಳಲ್ಲಿರತಕ್ಕಂಥ ಕಸಬುಗಳು ಎಂದರೆ ಮಿಲ್ಲುಗಳು, ಸಣ್ಣಪುಟ್ಟ ಕೈಗಾರಿಕೆಗಳು ಇವಕ್ಕೂ ಭೂಮಿಯ ಮೇಲೆ ಅವನ ಸರ್ವಸ್ವ ಶಕ್ತಿಯನ್ನೂ, ಬುದ್ಧಿಯನ್ನೂ ವಿನಿಯೋಗಿಸಿ ಕೆಲಸ ಮಾಡತಕ್ಕ ರೈತನ ವ್ಯವಸಾಯಕ್ಕೂ ಹೋಲಿಸಿ ನೋಡಿದರೆ ವ್ಯವಸಾಯಗಾರನ ಪಾಡು ನಾಯಿಪಾಡಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬಹಳ ಕಡೆ ಮಂತ್ರಿಗಳು "ನಾನು ವ್ಯವಸಾಯಗಾರ" ಎಂದು ಹೇಳುತ್ತಾರೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಹೇಳುತ್ತಾರಷ್ಟೆ. ನಮ್ಮ ದೇಶದಲ್ಲಿ ಒಂದು ಎಕರೆಯಿಂದ ನೂರು ಎಕರೆಯವರೆಗೆ ಜಮೀನನ್ನು ಇಟ್ಟುಕೊಂಡಿರುವವರು ಇದ್ದಾರೆ. ಸಾವಿರ ಎಕರೆಗಳನ್ನು ಇಟ್ಟುಕೊಂಡಿರುವವರು ಯಾರೂ ಇಲ್ಲ. ಶ್ರೀ ರಂಗನಾಥ್ ಅವರು ಹೇಳಿದ ಹಾಗೆ ನೂರು ಎಕರೆಗಳಿಗೆ ಮೇಲ್ಪಟ್ಟು ಆಸ್ತಿಪಾಸ್ತಿಗಳನ್ನಿಟ್ಟುಕೊಂಡಿರುವ ವ್ಯಕ್ತಿಗಳು ನಮ್ಮ ಸಂಸ್ಥಾನದಲ್ಲಿ 340 ಜನ ಮಾತ್ರ ಇದ್ದಾರೆ. ನನಗೆ ಕಾಫಿ ಮತ್ತು ಟೀ ತೋಟಗಳ ಅನುಭವ ಸ್ವಲ್ಪಮಟ್ಟಿಗೆ ಇದೆ. ನಮ್ಮ ತಂದೆಯ ಕಾಲದಲ್ಲಿ ಆರಾಣೆ ಕೂಲಿ ತೆಗೆದುಕೊಂಡು ಕೆಲಸ ಮಾಡುತ್ತಿದ್ದ. ಒಬ್ಬ ಕೂಲಿಕಾರ ಇವೊತ್ತು ಎರಡೂವರೆ ರೂಪಾಯಿ ತೆಗೆದುಕೊಂಡರೂ ಅವತ್ತು ಮಾಡುತ್ತಿದ್ದಂಥ ಕೆಲಸದಲ್ಲಿ ಹತ್ತನೆಯ ಒಂದು ಭಾಗವನ್ನು ಸಹಿತ ಮಾಡುತ್ತಾ ಇಲ್ಲ ಎನ್ನತಕ್ಕದ್ದು ಅನುಭವದ ಮಾತು. ಇವತ್ತು ಜೀವನದಲ್ಲಿ ನಾನಾ ರೀತಿಯ ಏರುಪೇರಾಗಿರತಕ್ಕ ಈ ಪರಿಸ್ಥಿತಿಯಲ್ಲಿ ಯಾವದೇ ಒಬ್ಬ ಭೂಮಾಲೀಕ ತನ್ನ ಹಿಡುವಳಿಯನ್ನು ಲಾಭದಾಯಕವಾಗಿ ನಡೆಸುವುದಕ್ಕೆ ಸಾಧ್ಯವಿಲ್ಲವೆನ್ನುವುದು ನಮಗೆ ಮನದಟ್ಟಾಗಿದೆ. ವ್ಯವಸಾಯದ ಕಸಬನ್ನು ಮಾಡತಕ್ಕ ಎಲ್ಲರಿಗೂ ಇದರ ಅನುಭವವಿದೆ ಎಂದು ನಾನು ನಂಬುತ್ತೇನೆ. ಶ್ರೀಮಾನ್ ಕೃಷ್ಣಪ್ಪನವರು ನಿನ್ನೆ ಈ ಸಭೆಯಲ್ಲಿ ಮಾತನಾಡುತ್ತ ಒಂದು ಎಕರೆ ಜಮೀನಿನಲ್ಲಿ ರಾಗಿಯನ್ನು ಬೆಳೆಯುವುದಕ್ಕೆ 464 ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದರು. ರೈತನು ಯಾವುದೇ ರೀತಿಯಲ್ಲಿ ಶಾಸ್ತ್ರೀಯವಾಗಿ ಬೆಳೆದರೂ ನಮಗೆ ಗೊತ್ತಿರುವ ಮಟ್ಟಿಗೆ ಒಂದು ಎಕರೆಯಲ್ಲಿ ಆರು ಪಲ್ಲ, ಎಂಟು ಪಲ್ಲಕ್ಕೆ ಮೇಲೆ ನಮ್ಮ ದೇಶದ ಭೂಮಿಯಲ್ಲಿ ಬೆಳೆಯುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕದನ್ನು ಎಲ್ಲರೂ ಒಪ್ಪುತ್ತಾರೆ. ಇವತ್ತು ಮಾರುಕಟ್ಟೆಯಲ್ಲಿ ರಾಗಿಗೆ ಸಿಕ್ಕತಕ್ಕ ಬೆಲೆ 30 ರಿಂದ 33 ರೂಪಾಯಿ. ಅಗ ಎಂಟು ಪಲ್ಲ ರಾಗಿಗೆ ಹತ್ತು ಪಲ್ಲ ರಾಗಿ ಬರುತ್ತದೆ ಎಂದು ಲೆಕ್ಕ ಹಾಕಿದರೂ 330 ರೂಪಾಯಿ ಬರುತ್ತದೆ. 460 ರೂಪಾಯಿಗಳನ್ನು ಖರ್ಚು ಮಾಡಿ 330 ರೂಪಾಯಿಗಳನ್ನು ತೆಗೆದುಕೊಂಡು ಹೋಗುವಾಗ

ರೈತನ ಉದ್ಧಾರ ಮಾಡುತ್ತೇವೆ, ರೈತನಿಗೆ ಎಲ್ಲ ಸೌಲಭ್ಯಗಳನ್ನೂ ಕೊಡುತ್ತೇವೆ ಎಂದು ಹೇಳತಕ್ಕ ಸರ್ಕಾರ ನಗೆಪಾಟಲು ಮಾಡುವುದಾಗಿದೆಯೇ ವಿನಾ ರೈತನ ಕಷ್ಟವನ್ನು ಅವರು ಅರಿತುಕೊಂಡಿಲ್ಲ.

ಯಾವ ಯಾವ ಭೂಮಿಯಲ್ಲಿ ಏನೇನು ಬೆಳೆಯುತ್ತಾನೆಯೋ ಅದಕ್ಕೆ ಅನುಗುಣವಾಗಿ ಒಂದು, ಎರಡು, ಮೂರು, ನಾಲ್ಕು ಎಂದು ವಿಭಾಗ ಮಾಡಿ ಭೂಮಿಯನ್ನು ವಿಂಗಡಿಸಿದಾರೆ. ಅದರಲ್ಲಿಯೂ ಅಡಿಕೆ ತೆಂಗು ಬೆಳೆಯುವವರ ಕಷ್ಟ ಹೇಳಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಇದೆ. ಸಕಲೇಶಪುರ ಮುಂತಾದ ಮಲೆನಾಡು ಪ್ರದೇಶದಲ್ಲಿಯ ಕೆಲವು ಭಾಗಕ್ಕೆ ಹೋಗಿ ನೋಡಿದರೆ ನಿಜವಾದ ಪರಿಸ್ಥಿತಿ ಏನಿದೆ ಎಂಬುದು ಅರ್ಥವಾಗುತ್ತದೆ. ಇಲ್ಲಿಯ ಎಸ್ಟೇಟುಗಳಿಗೆ ಒಂದು ದೊಡ್ಡ ಗೌರವದ ಹೆಸರು ಕೊಟ್ಟಿದ್ದಾರೆ. ಪ್ಲಾಂಟರ್ಸ್ ಅಂದರೆ ಅವರು ಕುಬೇರನ ಮಕ್ಕಳು ಎಂದು ಹೇಳತಕ್ಕಂಥ ಪರಿಪಾಠ ಬಂದಿದೆ. ನಾಳೆ ಬೆಳಿಗ್ಗೆ ಹೇಗೆ ಎಂದು ಯೋಚನೆ ಮಾಡತಕ್ಕಂಥ ಪರಿಸ್ಥಿತಿ ಅವರಿಗೆ ಬಂದಿದೆ. ಕಾಫಿ, ಅಡಿಕೆ, ಯಾವುದೇ ಆಗಲಿ ಮನುಷ್ಯನಿಗೆ ನಿತ್ಯ ಜೀವನಕ್ಕೆ ಬೇಕಾಗುವ ಯಾವುದೇ ಪದಾರ್ಥವಾಗಲಿ ಅವುಗಳನ್ನು ಇವತ್ತಿನ ದಿವಸ ಹೆಚ್ಚಾಗಿ ಬೆಳೆಯಬೇಕಾಗಿದೆ. ದೇಶದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯನ್ನು ನೋಡಿದರೆ ಇನ್ನು ಮೇಲೆ ಯಾವ ಹೊಸ ತೆರಿಗೆ ಹಾಕತಕ್ಕಂಥಾದ್ದು ಸೂಕ್ತವಲ್ಲ. ಜಮೀನಿನಿಂದ ಬರತಕ್ಕ ಈ ಬಾಬಿನ ಉತ್ಪತ್ತಿ ನಾಲ್ಕು ಕೋಟಿ ರೂಪಾಯಿ ಸರಕಾರ ಬೇರೆ ರೀತಿಯಲ್ಲಿ ಸಂಪಾದನೆ ಮಾಡಲು ಬೇಕಾದಷ್ಟು ಅವಕಾಶವಿದೆ. ಭೂಕಂದಾಯ ಪೂರ್ತಿಯಾಗಿ ಮಾಫ್ ಮಾಡುವುದಕ್ಕೆ ಸರಕಾರ ಗಟ್ಟಿ ಮನಸ್ಸು ಮಾಡಬೇಕು. ವ್ಯವಸಾಯಗಾರನ ಮೇಲೆ ಹೆಚ್ಚಿನ ಹೊರೆ ಹಾಕಬಾರದು. ಆದರೆ ಅಭಿವೃದ್ಧಿ ಕೆಲಸ ಮಾಡಲು ಹಣ ಬೇಡವೇ ಎಂದು ಹಣಕಾಸಿನ ಸಚಿವರು ಕೇಳಬಹುದು. ಅವರು ಇಂಥಾ ಪ್ರಶ್ನೆಯನ್ನು ಮಾಡಬಾರದು ಎಂದು ಹೇಳುತ್ತೇನೆ. ಇದನ್ನು ಸರಿಯಾಗಿ ತಿಳಿದುಕೊಳ್ಳುವ ಮನಸ್ಸು ಇದ್ದರೆ ಅವರು ವ್ಯವಸಾಯವನ್ನೇ ಕಸುಬು ಆಗಿ ಇಟ್ಟುಕೊಂಡಿರತಕ್ಕಂಥ ಕೆಲವು ಸದಸ್ಯರು ಏನು ಇದ್ದಾರೆಯೋ ಅವರ ಜೊತೆಗೆ ಹೋಗಿ ಅವರ ಸ್ಥಿತಿಗತಿ ಏನಿದೆ, ಕಷ್ಟ ಸುಖ ಏನಿದೆ ಎಂಬುದನ್ನು ನೋಡಿದರೆ ಅದು ಅವರಿಗೆ ಅರ್ಥವಾಗುತ್ತದೆ. ಮೊನ್ನೆ ಶ್ರೀಮಾನ್ ರೇವಣ್ಣ ಸಿದ್ದಪ್ಪನವರು ಒಂದು ಮಾತನ್ನು ಹೇಳಿದರು. ಪುಸ್ತಕದ ಬದನೇಕಾಯಿ ಪಾಠದ ಹಾಗೆ ಕೆಲವು ಅಧಿಕಾರಿಗಳು ಕೊಡುವ ಸಲಹೆ ಮೇಲೆ ಇಂಥ ಕಾನೂನು ತರತಕ್ಕಂಥಾದ್ದು ಸರ್ವಥಾ ನ್ಯಾಯವಲ್ಲ.

ಶ್ರೀ ಬಿ. ಡಿ. ಜತ್ತಿ.—ಟ್ಯಾಕ್ಸ್ ಜಾಸ್ತಿ ಮಾಡಿರುವ ಬಾಬು ಯಾವುದು ಎಂಬುದನ್ನು ತೋರಿಸುತ್ತೀರಾ ?

ಶ್ರೀ ಟಿ. ಎನ್. ಮಾದಪ್ಪಗೌಡ.—ಈ ಮಸೂದೆ ತಂದಿರುವ ಉದ್ದೇಶ ಏನು ಎಂಬುದನ್ನು ಹೇಳುತ್ತಿದ್ದೇನೆ. ದಯವಿಟ್ಟು ಈ ಮಸೂದೆಯನ್ನು ವಾಪಸ್ ತೆಗೆದುಕೊಂಡು ರೈತನಿಗೆ ತೆರಿಗೆ ಭಾರ ಹೆಚ್ಚಿಗೆ ಆಗದ ಹಾಗೆ ಪರಿಸ್ಥಿತಿ ಉಂಟು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ರೈತನಿಗೆ ಹೆಚ್ಚು ಅನುಕೂಲ ಒದಗಿಸುವ ಕಾನೂನು ಮಾಡುವುದು ಅಗತ್ಯ. ಆದ್ದರಿಂದ ಮಾನ್ಯ ಆರ್ಥಿಕ ಸಚಿವರು ಈ ತಿದ್ದುಪಡಿ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಈಗ ಸಭೆಯ ಮುಂದೆ ಚರ್ಚೆಗೆ ಬಂದಿರುವ ಈ ವ್ಯವಸಾಯ ವರಮಾನ ತೆರಿಗೆ ಮಸೂದೆಯ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತೇನೆ. ಬಹುಶ : ಈ ವ್ಯವಸಾಯ ವರಮಾನ ತೆರಿಗೆ ಮಸೂದೆಯ ಮೇಲೆ ಚರ್ಚೆ ಆಗಬೇಕಾದ ಅಗತ್ಯವಿರಲಿಲ್ಲ. ರೈತನ ವಿಚಾರದಲ್ಲಿ ಇನ್ನೂ ಹೆಚ್ಚು ಕನಿಕರ ತೋರಿಸಿದ್ದರೆ ಚೆನ್ನಾಗಿತ್ತು, ಈಗಾಗಲೇ ವ್ಯವಸಯ ವರಮಾನ ತೆರಿಗೆ ಹಾಕಬೇಕೆಂಬ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆ.

Sri C. J. MUCKANNAPPA.—He was tutored by the Minister for Finance just before he got up.

Sri M. C. BASAPPA.—I will take the advice of even Sri Muckannappa, if it carries some sense. ಈ ದಿವಸ ಮಂಡಿಸಿರುವ ತಿದ್ದುಪಡಿ ಮಸೂದೆ ಏನು ಇದೆಯೋ, ಇದು ವ್ಯವಸಾಯ ವರಮಾನ ತೆರಿಗೆ ಕಾನೂನಿಗೆ ಕೆಲವು ತಿದ್ದುಪಡಿಗಳನ್ನು ಮಂಡಿಸಿದ್ದಾರೆ. ಇಷ್ಟೇ ಅಲ್ಲದೆ ಈ ಮಸೂದೆಯನ್ನು ನಾವು ಕೂಲಂಕಷವಾಗಿ ಪರಿಶೀಲನಬೇಕಾದುದು ಬಹಳ ಅಗತ್ಯವಾಗಿದೆ ಎಂದು ನಾನು ಅಭಿಪ್ರಾಯಪಡುತ್ತೇನೆ. ಟಿಂಬರ್ ಎಂದರೆ ಮರ. ಇದನ್ನು ವ್ಯವಸಾಯ ವರಮಾನ ತೆರಿಗೆ ವ್ಯಾಪ್ತಿಯೊಳಗೆ ತಂದಿರುವುದು ಸರಿಯಿಲ್ಲ. ಇದು ವ್ಯವಸಾಯದೊಳಗೆ ಬರತಕ್ಕ ವಸ್ತು ಅಲ್ಲ ಎಂದು ನಮ್ಮ ಸುಪ್ರೀಂ ಕೋರ್ಟು ಒಂದು ತೀರ್ಮಾನ ಕೊಟ್ಟಿರುವುದರಿಂದ ಸರಕಾರ ಅದನ್ನು ಪರಿಶೀಲನೆ ನಡೆಸಿ ಬಹುಶಃ ಇದನ್ನು ವ್ಯವಸಾಯ ವರಮಾನದ ವ್ಯಾಪ್ತಿಯೊಳಗೆ ಬರುವಂತೆ ತಿದ್ದುಪಡಿ ತಂದಿದ್ದಾರೆ. ಇದರ ಮೇಲೆ ವರಮಾನ ತೆರಿಗೆ ಸರಕಾರಕ್ಕೆ ಬೇಕಾದುದು ಅಗತ್ಯವಿರುವ

(SRI M. C. BASAPPA)

ದರಿಂದ ಅದನ್ನು ಇದರಲ್ಲಿ ಸೇರಿಸಿದ್ದಾರೆ. ಇದು ಒಂದು ವರ್ಷದಲ್ಲಿ ಬರತಕ್ಕ ಆದಾಯವಲ್ಲ. ಮರ ಬೆಳಸಲು ವ್ಯವಸಾಯ ಮಾಡತಕ್ಕಂಥ ಮನುಷ್ಯ ಪ್ರಯತ್ನವಿಲ್ಲ. ಇದು ವ್ಯವಸಾಯದಲ್ಲಿ ಬರುವುದಿಲ್ಲ ಎಂಬ ಒಂದು ವಾದವನ್ನು ಮುಂದೆ ಇಡಬಹುದು. ಕೆಲವು ಕಡೆ ಟಿಂಬರ್ ಪ್ಲ್ಯಾಂಟೇಷನ್‌ಅನ್ನು ನಾವು ನೋಡಿದ್ದೇವೆ. ಅವುಗಳಿಂದ ಲಕ್ಷಾಂತರ ರೂಪಾಯಿ ವರಮಾನ ತೆಗೆದು ಕೊಳ್ಳತಕ್ಕಂಥ ರೈತರು ಇದ್ದಾರೆ. ಆದರೆ ಟಿಂಬರ್ ಪ್ಲ್ಯಾಂಟೇಷನ್ ಫಸಲು ಯಾವ ರೀತಿ ಬರುತ್ತದೆ ಎಂಬುದನ್ನು ನೋಡಬೇಕು, ಇದನ್ನು ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ. ಇದೂ ಒಂದು ವರಮಾನ ಬರತಕ್ಕ ಬಾಬು ಆಗಿದೆ. ಆದರೆ ಆಹಾರ ಪದಾರ್ಥ ಮತ್ತು ಕಮರ್ಷಿಯಲ್ ಕ್ರಾಪ್ ಜೊತಗೆ ಸೇರಿಸಿ ತೆರಿಗೆ ಕೊಡಬೇಕೆಂದು ಹೇಳುವುದು ಸರಿಯಲ್ಲ. ಟಿಂಬರದಿಂದ ಕೋಟ್ಯಂತರ ರೂಪಾಯಿ ಸಂಪಾದನೆ ಮಾಡತಕ್ಕಂಥವರ ಸ್ವತ್ತು ಇದು ಆಗಿದೆ. ಆದ್ದರಿಂದ ಇದನ್ನು ಮಸೂದೆಯಲ್ಲಿ ಅಡಕ ಮಾಡತಕ್ಕದ್ದು ಸೂಕ್ತ ಸಲಹೆಯಾಗಿದೆ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಬಹುಶಃ ನಮಗೆಲ್ಲರಿಗೂ ಈ ರೀತಿ ಕೊಡದಿದ್ದರೆ ರೈತರಿಗೆ ತೊಂದರೆಯಾಗುತ್ತದೆ ಎಂಬ ಅಭಿಪ್ರಾಯ ಪಡತಕ್ಕ ಸಂದರ್ಭ ಇತ್ತು. ಆದರೆ ಇವತ್ತು ತಿದ್ದುಪಡಿ ತಂದಿರತಕ್ಕ ಪ್ರಕಾರ ರಬ್ಬರ್, ಕಾಫಿ ಮುಂತಾದ ಪ್ಲಾಂಟೇಷನ್‌ನ್ನು ತೆಗೆದುಕೊಳ್ಳುವುದಾದರೆ 100 ಎಕರೆ ಇದ್ದ ಪಕ್ಷದಲ್ಲಿ 2½ ಎಕರೆ ರಿಯಾಯಿತಿ ಕೊಡಬಹುದು. ಅದನ್ನು ಸ್ವಲ್ಪ ತಪ್ಪು ತಿಳಿದುಕೊಂಡಹಾಗೆ ಕಾಣುತ್ತದೆ, ನಮ್ಮ ಮಾನ್ಯ ಮಿತ್ರರು: 100 ಎಕರೆ ಪ್ಲ್ಯಾಂಟೇಷನ್ ಮಾಡಬೇಕಾದರೆ 40 ವರ್ಷ ಹಿಡಿಯುತ್ತದೆ, 2½ ಎಕರೆ ಸಾಲದು ಎಂದು ವಾದ ಮಾಡಿದರು. ನನ್ನ ಅಭಿಪ್ರಾಯವನ್ನು ಸಭೆಯ ಮುಂದೆ ಇಡುತ್ತೇನೆ ಅದೇ ನೆಂದರೆ ಇದು ಹೊಸದಾಗಿ ಹಾಕತಕ್ಕದ್ದಾಗಲಿ ಅಥವಾ ಹಳೇ ತೋಟ ಕಿತ್ತುವುದಕ್ಕಾಗಲಿ ಸೇರಿದ್ದಲ್ಲ. ಏಕೆಂದರೆ ಈ ವ್ಯವಸಾಯದ ವರಮಾನದ ತೆರಿಗೆ ಏನಿದೆಯೋ ಇದು ವರಮಾನ ಕೈಗೆ ಬಂದ ಮೇಲೆ ವಿಧಿಸತಕ್ಕ ತೆರಿಗೆ. ಈ ಎರಡೂವರೆ ಎಕರೆ ಏಕೆ ಬಿಡುತ್ತಾರೆ ಎಂದರೆ 10 ಎಕರೆ ತೋಟ ತೆಗೆದು ಕೊಂಡರೆ ಅದರಲ್ಲಿ ರೋಗ ಬಿದ್ದು ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ಗಿಡ ಕೆಟ್ಟು ಹೋದರೆ-25 ಅಥವಾ 30 ಗಿಡಗಳು ಕೆಟ್ಟು ಹೋಗಬಹುದು ಆಗ ಅಂತಹ ಸಂದರ್ಭದಲ್ಲಿ ಎರಡೂವರೆ ಪರ್ಸೆಂಟ್ ತೆಗೆದುಕೊಳ್ಳುವುದು ಬೇಡ ಎಂದು ಹೇಳಿದ್ದಾರೆ. ಎರಡೂವರೆ ಪರ್ಸೆಂಟ್ ಕಾಫೀ ಮತ್ತು ರಬ್ಬರ್ ಪ್ಲ್ಯಾಂಟೇಷನ್ ನಲ್ಲಿ, ಒಂದೂ-ಮೂರನೆ ಎರಡು ಭಾಗ, ಆರೇಂಜ್ ಮತ್ತು ಅರೆಕನಟ್ ಮತ್ತು ಎಂಟೂ ಮೂರನೇ ಒಂದು ಪರ್ಸೆಂಟ್ ಕಾರ್ಡಮಮ್ ಪ್ಲಾಂಟೇಷನ್ ಎಂದು ಮಾಡಿದ್ದಾರೆ. ಇದನ್ನು ತಜ್ಞರ ಮತ್ತು ಇಲಾಖೆಯವರ ಅಭಿಪ್ರಾಯ ತೆಗೆದು ಕೊಂಡೇ ಮಾಡಿದ್ದರೆ ಪ್ರತಿಯೊಂದು ಕ್ರಾಪ್ ನಲ್ಲೂ ಎಷ್ಟೆಷ್ಟು ಪ್ಲ್ಯಾಂಟ್ ನಷ್ಟವಾಗುತ್ತದೆ ಹಾಗೂ ಎಷ್ಟು ರಿಯಾಯಿತಿ ಕೊಡುವುದು ಸಾಧು ವಾದದ್ದು ಎಂದು ಒಂದು ಆಧಾರದ ಮೇಲೆ ಇದನ್ನು ತಂದು ಹಿಡಿದಿದ್ದಾರೆ. ಇದು ಖಾಯಂ ಆಗಿರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ನಾಲ್ಕೈದು ವರ್ಷಗಳ ಅನುಭವದ ಮೇಲೆ ಕಾಫಿ ಮತ್ತು ರಬ್ಬರ್‌ಗೆ 5 ಎಕರೆ ಕೊಡಬೇಕಾಗಿ ಬರಬಹುದು—10 ಎಕರೆ ಕೊಡಬೇಕಾಗಿ ಬರಬಹುದು. ನೆರೆ ಪ್ರಾಂತ್ಯವಾದ ಮದ್ರಾಸ್‌ನಲ್ಲಿ ಏನು ಮಾಡಿದ್ದಾರೆ ಎಂಬುದನ್ನು ನೋಡಿ ಅದನ್ನು ನಮ್ಮ ಆಕ್ಟ್‌ನಲ್ಲಿ ಸೇರಿಸಿದ್ದಾರೆ. 3—4 ವರ್ಷದ ಅನುಭವ ಬಂದ ಮೇಲೆ ಇದು ತಿದ್ದುಪಡಿಯಾಗಬೇಕೆಂದು ಕಂಡುಬಂದರೆ ಆಗ ತಿದ್ದುಪಡಿಮಾಡುವುದಕ್ಕೆ ಯಾವ ಅಭ್ಯಂತರವು ಇಲ್ಲ. ಅದನ್ನು ಬಿಟ್ಟು ಎರಡೂವರೆ ಎಕರೆ ಮಾತ್ರ ರೀಪ್ಲ್ಯಾಂಟ್ ಮಾಡಿದರೆ ಲೆಕ್ಕಕ್ಕೆ ತೆಗೆದುಕೊಳ್ಳಕೂಡದು ಎಂದು ಹೇಳುವುದು ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಆದ್ದರಿಂದ ಸೆಕ್ಷನ್ 5 ರಲ್ಲಿ ಅವರು ಕೊಟ್ಟಿರತಕ್ಕ ವಿವರಣೆ ಏನಿದೆ ಅದನ್ನು ಸ್ಥಿರಪಡಿಸಿದಾರೆ, ಸ್ವಲ್ಪ ರಿಯಾಯತಿಯನ್ನು ಪ್ಲ್ಯಾಂಟೇಷನ್‌ಗೆ ಕೊಟ್ಟಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಸೆಕ್ಷನ್ 14 ಕ್ಕೆ ಪ್ರಪೋಸ್ ಮಾಡಿರತಕ್ಕ ಅಮೆಂಡ್‌ಮೆಂಟನ್ನು ನೋಡೋಣ. ಮೊದಲು ಏನಿತ್ತು ಎಂದರೆ:

> Power to withhold refund in certain cases.—"Where an order giving rise to a refund is the subject matter of an appeal or further proceeding or where any other proceeding under this Act is pending ....the Agricultural Income-tax Officer may, with the previous approval of the Deputy Commissioner, withhold the refund till such time as the Deputy Commissioner may determine."

ಅಪೆಲೇಟ್ ಅಥಾರಿಟಿ ತೀರ್ಮಾನಮಾಡುವವರೆಗೂ ದುಡ್ಡನ್ನ ಎಷ್ಟು ದಿವಸವಾದರೂ ನಿರ್ದಿಷ್ಟವಾದ ವೇಳೆಗೆ ಕೊಡದೆ ತಡೆ ಹಿಡಿಯುವುದಕ್ಕೆ ಒಂದು ಅವಕಾಶವನ್ನು ಮಾಡಿದ್ದರು. ಇದನ್ನು

ನೋಡಿದ ಪಕ್ಷದಲ್ಲಿ ಅನೇಕ ಸಂದರ್ಭಗಳಲ್ಲಿ ಅಧಿಕಾರಿಗಳು ಬಹುಶಃ ಅದನ್ನು ಮರೆತುಬಿಡಬಹುದು, ರೀಫಂಡ್ ಮಾಡುವುದು ಬೇಡ ಎಂದು ಹೇಳಬಹುದು. ಅದನ್ನು ಯೋಚನೆ ಮಾಡಿ ಈ ಒಂದು ತಿದ್ದುಪಡಿಯನ್ನು ಸೂಚನೆ ಮಾಡಿದ್ದಾರೆ:

> "Where a refund is withheld under the provisions of sub-section (1) State Government shall pay to the assessee simple interest at four per cent per annum on the amount of refund ultimately determined to be due as a result of the appeal or further proceeding for the period commencing after the expiry of six months from the date of the order referred to in sub-section (1) to the date the refund is granted."

ಆ ರೀತಿ ಅನಿರ್ದಿಷ್ಟಕಾಲದವರೆಗೂ ಕಾಯಬೇಕಾದ ಸಂದರ್ಭದಲ್ಲಿ ಸರ್ಕಾರದ ಅಥವಾ ಅಧಿಕಾರಿಗಳ ತಪ್ಪಿದ್ದರೂ ಆ ಹಣವನ್ನು ಶೇಕಡಾ 4 ರಂತೆ ಬಡ್ಡಿ ಕೂಡ ಸೇರಿಸಿ ಕೊಡಬೇಕೆಂದು ಒಂದು ಅವಕಾಶವನ್ನು ಮಾಡಿದ್ದಾರೆ. ಅದು ನಿಜವಾಗಿಯೂ ಒಂದು ಸಾಧುವಾದ ಅಭಿಪ್ರಾಯ. ಸೆಂಟ್ರಲ್ ಆಕ್ಟ್ ಏನಿದೆಯೋ ಅದರ ಒಂದು ತತ್ವವನ್ನು ಅನುಸರಿಸಿ ಈ ಒಂದು ತಿದ್ದುಪಡಿಯಲ್ಲಿ ಅದನ್ನು ನಮೂದಿಸಿದ್ದಾರೆ.

ಇವುಗಳಲ್ಲದೇ ಇನ್ನೊಂದು ಮುಖ್ಯವಾದ ವಿಷಯವೇನೆಂದರೆ ಇಲ್ಲಿಯತನಕ ಈ ವ್ಯವಸಾಯದ ವರಮಾನ ತೆರಿಗೆಯನ್ನು ರೆವಿನ್ಯೂ ಇಲಾಖೆ ಅಥವಾ ಇತರ ಇಲಾಖೆಯಿಂದ ವಸೂಲು ಮಾಡಿಸುತ್ತಾ ಇದ್ದರು ಈಗ ಇದಕ್ಕೇ ಒಂದು ಇಲಾಖೆ ಮಾಡಿ ಅವರ ಮೂಲಕ ವಸೂಲು ಮಾಡಬೇಕೆಂದು ಮತ್ತು ಬೇರೆ ಬೇರೆ ಹಂತಗಳಲ್ಲಿ ಯಾವ ಯಾವ ಅಧಿಕಾರಿಗಳು ಇರಬೇಕು, ಯಾರ್ಯಾರಿಗೆ ಅಪೀಲು ಹೋಗಬೇಕು ಯಾರ್ಯಾರು ರಿವಿಷನ್ ಮಾಡಬೇಕು ಎಂದು ಇದೆ, ಹೈಕೋರ್ಟಿಗೂ ಕೂಡ ಅಪೀಲು, ರಿವಿಷನ್‌ಗೆ ಹೋಗಲು ಅವಕಾಶವಾಗಬೇಕೆಂದು ಹೇಳಿ ಈ ಎಲ್ಲಾ ಬದಲಾವಣೆಗಳನ್ನೂ ಮಾಡಿ ರೈತರಿಗೆ ಹೆಚ್ಚಿನ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ಈ ತಿದ್ದುಪಡಿಯನ್ನು ಇವತ್ತು ಸಭೆಯ ಮುಂದೆ ಇಟ್ಟಿದ್ದಾರೆ. ಈ ಎಲ್ಲಾ ತಿದ್ದುಪಡಿಗಳೂ ಸಾಧುವಾಗಿವೆ, ಇವುಗಳಿಗೆ ಮಾನ್ಯ ಸಭೆಯವರು ಒಪ್ಪಿಗೆ ಕೊಡಬಹುದೆಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಪತಿಗಳೇ ಈಗ ನಮ್ಮ ಮುಂದೆ ಇರತಕ್ಕ ವ್ಯವಸಾಯದ ಆದಾಯದ ತೆರಿಗೆ ತಿದ್ದುಪಡಿಯ ಮಸೂದೆಯನ್ನು ನಾನು ವಿರೋಧಿಸುತ್ತೇನೆ. ಸಂಸ್ಥಾನದಲ್ಲಿ ವ್ಯವಸಾಯ ಎನ್ನುವುದು ಅತಿ ಕಷ್ಟವಾದ ಉದ್ಯೋಗ. ನಾನೂ ಸಹ ವ್ಯವಸಾಯದ ಆದಾಯದ ತೆರಿಗೆ ಕೊಡತಕ್ಕ ಒಬ್ಬ ಮನುಷ್ಯ ಮತ್ತು ಬೇರೆ ಉದ್ಯೋಗದಿಂದ ಆದಾಯದ ತೆರಿಗೆಯನ್ನೂ ಸಹ ಕೊಡತಕ್ಕ ಮನುಷ್ಯ. ಈ ಎರಡನ್ನೂ ಅರಿತು ಕೊಂಡಿರುವವನಾಗಿ ನಾನು ಹೇಳುವುದಾದರೆ ನನಗೆ ವ್ಯವಸಾಯದ ಮೇಲೆ ಹಾಗತಕ್ಕ ಆದಾಯದ ತೆರಿಗೆಗೆ ಯಾವ ಆಧಾರವು ಇಲ್ಲ. ಯಾರು ಏನಾದರೂ ಹೇಳಲಿ ವ್ಯವಸಾಯಗಾರನಿಗೆ ಏನಾದರೂ ವರಮಾನ ಬರಲಿ ಎಕರೆಗೆ ಅವನಿಗೆ ಒಂದು ಸಾವಿರ ರೂಪಾಯಿ ಆದಾಯ ಇದೆ ಎಂದು ನಿಮ್ಮ ನಿರ್ಧಾರವಾದರೆ ಆಯಿತು. ಅದಕ್ಕೆ ಆಧಾರವೇನು ಎಂದರೆ ಅದೊಂದನ್ನೂ ಕೇಳಬೇಡಿ ಎನ್ನುತ್ತೀರಿ. ಏನು ಆಧಾರ ಎಂದರೆ ನಿರಾಧಾರವೇ ಆಧಾರ. ಆದ್ದರಿಂದ ನಮ್ಮ ಹಣಕಾಸಿನ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಮೊದಲು ವ್ಯವಸಾಯಕ್ಕೆ ಆಗತಕ್ಕ ವೆಚ್ಚ ಏನೆಂಬುದನ್ನು ಕಂಡು ಹಿಡಿದು, ಇಷ್ಟೇ ಆದಾಯ ಎಂದು ಗೊತ್ತು ಮಾಡದೇ ಆದಾಯ ತೆರಿಗೆ ಹಾಕುವುದು ಸರಿಯಲ್ಲ. ಹಿಂದೆ ಈ ಮಸೂದೆಯನ್ನ ಅವರು ತರುವಾಗ ಕೂಡ ಹೇಳಿದ್ದೆ ಈಗಲೂ ಕೂಡ ಈ ಮಸೂದೆಯನ್ನು ಮನ್ನಾ ಮಾಡಬೇಕೆಂದು ಅವರಲ್ಲಿ ನನ್ನ ಪ್ರಾರ್ಥನೆ. ಏಕೆಂದರೆ ಇಲ್ಲಿಗೆ ಬಂದು ತಮ್ಮಲ್ಲಿ ಹೇಳಿಕೊಳ್ಳತಕ್ಕ ಶಕ್ತಿ ವ್ಯವಸಾಯಗಾರರಲ್ಲಿ ಇಲ್ಲದೇ ಇರುವುದರಿಂದ ಅದು ನಿಮ್ಮ ಮನಸ್ಸಿಗೆ ಬರಲಿಲ್ಲ ಎಂದು ಕಾಣುತ್ತದೆ. ಸೇಲ್ಸ್‌ಟ್ಯಾಕ್ಸ್ ಮಸೂದೆ ತಂದರೆ ನೂರಾರು ಜನ ನಿಮ್ಮ ಕಚೇರಿ ಮುಂದೆ ಓಡಾಡುತ್ತಾ ಇರುತ್ತಾರೆ. ಆದೇ ಈ ವ್ಯವಸಾಯದ ಆದಾಯ ತೆರಿಗೆ ಸಂಬಂಧವಾಗಿ ಬಂದು ಕೇಳಿಕೊಳ್ಳತಕ್ಕ ಶಕ್ತಿ ಅವರಲ್ಲಿ ಇಲ್ಲದೇ ಇರುವುದರಿಂದ ಇದರಲ್ಲಿ ಯಾವ ಬದಲಾವಣೆ ಮಾಡುವುದಕ್ಕೂ ಮಾನ್ಯ ಮಂತ್ರಿಗಳಿಗೆ ಮನಸ್ಸು ಬರುವುದಿಲ್ಲ ಎಂದು ಕಾಣುತ್ತದೆ.

3-30 P.M.

ಅವರದು ಸರಳ ಜೀವನ. ಅವರು ಈ ವ್ಯವಸಾಯದಲ್ಲಿ ನಿಂತು ಹತ್ತಾರು ವರ್ಷ ಕೆಲಸ ಮಾಡಿ ಇದರಲ್ಲಿ ಲಾಭವಿದೆ ಎಂದು ಹೇಳಿದರೆ ಆಗ ನಾನು ಒಪ್ಪುತ್ತೇನೆ. ಇನ್ನು ನಮ್ಮ ವ್ಯವಸಾ

(ಶ್ರೀ ಜಿ. ರಾಜೇಗೌಡ)

ಯದ ಮಂತ್ರಿಗಳಿಗೆ ಈ ಬಾಬಿನಲ್ಲಿ ಲಾಭವೇ, ನಷ್ಟವೇ ಎನ್ನತಕ್ಕ ವಿಚಾರವೇ ಗೊತ್ತಿಲ್ಲ. ಈ ದಿವಸ ಸರ್ಕಾರದವರಿಗೆ ಆದಾಯ ಕಂಡುಹಿಡಿಯುವ ಒಂದು ಬೇಸಿಸ್ಸೇ ಗೊತ್ತಿಲ್ಲದಿರುವಾಗ ಇವರು ಇದನ್ನು ಗಂಭೀರವಾಗಿ ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ. ಈಗಲ್ಲದಿದ್ದರೂ ಮುಂದೆಯಾದರೂ ಇದನ್ನು ವಾಪಸ್ಸು ಪಡೆಯುವರೆಂದು ನಾನು ಆಶಿಸುತ್ತೇನೆ. ಈಗಾಗಲೆ ನಮ್ಮ ರಾಜ್ಯದಲ್ಲಿ 1—2 ತಿಂಗಳುಗಳಿಂದ ಮಳೆಬೆಳೆಗಳಿಲ್ಲ. ಜನರಿಗೂ, ದನಕರುಗಳಿಗೂ ಕುಡಿಯಲು ನೀರಿಲ್ಲ. ಇಂಥ ಕಾಲದಲ್ಲಿ ವ್ಯವಸಾಯದ ಆದಾಯದ ಮೇಲೆ ತೆರಿಗೆ ಹಾಕಬೇಕೆಂದು ಆಲೋಚನೆ ಮಾಡುತ್ತಿದ್ದೇವೆ. ಆದರೆ ಈಗ ಈ ಆಕ್ಟಿನ ಬಗ್ಗೆ ಮಾಡಿರತಕ್ಕ ರೂಲ್ಸ್ ಏನಿವೆಯೋ ಅವು ಸರಿಯಾಗಿಲ್ಲ. ಈಗ ಈ ತಿದ್ದುಪಡಿಯೇನಾದರೂ ಜಾರಿಗೆ ಬಂದರೆ ಈ ವಿಚಾರವನ್ನು ರೂಲ್ಸಿನಲ್ಲಿ ಸರಿಯಾಗಿ ಅಳವಡಿಸಬೇಕೆಂದು ಹೇಳುತ್ತೇನೆ. ಇಲ್ಲಿ ದ್ರಾಕ್ಷಿ ತೋಟದಿಂದ ವರ್ಷಕ್ಕೆ 10ಸಾವಿರ ರೂಪಾಯಿಗಳ ವರಮಾನ ಬರುತ್ತದೆಂದು ಹೇಳಲಾಗಿದೆ. ಇದರ ಲೆಕ್ಕಾಚಾರ ಹೇಗಿದೆ ಎಂದರೆ— ಒಬ್ಬ ರೆವಿನ್ಯೂ ಇನ್‌ಸ್ಪೆಕ್ಟರು ಒಂದು ತೋಟಕ್ಕೆ ಹೋಗಿ ಅಲ್ಲಿ ಆತನು ಅವನನ್ನು ವಿಚಾರಿಸಿ ಆ ತೋಟದಿಂದ ಅವನಿಗೆ 10ಸಾವಿರ ರೂ. ಆದಾಯ ಬಂದಿದೆ ಎಂದು ಒಂದು ರಿಪೋರ್ಟನ್ನು ಕೊಟ್ಟರೆ, ನಾವು ಅಸಿಸ್ಟೆಂಟ್ ಕಮಿಷನರ ಹತ್ತಿರ ಅಪೀಲು ಹೋದರೆ ಆಗ ಅವರು ಅದನ್ನು 5ಸಾವಿರಕ್ಕಿಳಿಸುತ್ತಾರೆ. ಈ ವಿಚಾರದಲ್ಲಿ ಅವರಿಗೆ ತಿಳಿದಿರತಕ್ಕ ಬೇಸಿಸ್ ಇಷ್ಟೆ. ನಾನು ಈಗ ವ್ಯವಸಾಯಗಾರನಾಗಿ ಹೇಳುತ್ತಿದ್ದೇನೆ. ಈ ದ್ರಾಕ್ಷಿಯನ್ನು ಯಾವ ಭೂಮಿಯಲ್ಲಿ ಬೇಕಾದರೂ ಬೆಳೆಯಬಹುದು. ಗೋಮಾಳದ ಜಮೀನಿನಲ್ಲೂ ಬೆಳೆಯಬಹುದು ಆದಾಗ್ಯೂ ಅವರು ಈ ದ್ರಾಕ್ಷಿ ಬೆಳೆಯುವ ಜಮೀನನ್ನು ಒಂದನೆ ದರ್ಜೆ ಜಮೀನೆಂದು ಲೆಕ್ಕಹಾಕಿದ್ದಾರೆ. ಅಡಕೆ ಮರ ಬೆಳೆಯುವ ಭೂಮಿಯನ್ನು ಎರಡನೆ ದರ್ಜೆ ಜಮೀನೆಂದು ಹೇಳಿದ್ದಾರೆ. ಇವರಿಗೆ ಯಾವ ಜಮೀನು ಎಂಥದು ಎಂಬುದನ್ನು ವಿಂಗಡಿಸತಕ್ಕ ರೀತಿನೀತಿಯೇ ಗೊತ್ತಿಲ್ಲ. ಈ ರೀತಿ ಭೂಮಿಯನ್ನು ವಿಂಗಡಿಸತಕ್ಕದ್ದು ಅಕ್ರಮ. ಆದರೆ ಮಂತ್ರಿಗಳು ಈಗಾಗಲೆ ಇದು ಅಂಗೀಕಾರವಾಗಿದೆ ಎಂದು ಹೇಳಿಬಿಡುತ್ತಾರೆ. ಇನ್ನು ಇವರು ಟ್ರಿಬ್ಯುನಲ್‌ಗಳನ್ನು ಮಾಡಿದ್ದಾರೆ. ಆದರೆ ಅಲ್ಲಿರತಕ್ಕವರು ಯಾರು ? ಅವರೆಲ್ಲರೂ ಒಂದೇ. ಈ ಟ್ರಿಬ್ಯುನಲ್‌ನಲ್ಲಿ ರೈತನಿಗೆ ನ್ಯಾಯ ದೊರೆಯಬೇಕಾಗಿದ್ದರೆ ಅಲ್ಲಿ ಯಾರು 20ವರ್ಷಗಳಕಾಲ ವ್ಯವಸಾಯ ಮಾಡಿ, ಅನುಭವಪಡೆದಿರುತ್ತಾನೋ ಅಂಥ ವ್ಯಕ್ತಿ ಅಲ್ಲಿದ್ದರೇನೆ ನ್ಯಾಯ ದೊರೆಯುತ್ತದೆ ಎಂದು ನಾನು ಹೇಳುತ್ತೇನೆ. ಈ ದಿವಸ ರಾಗಿ ಪೈರಿಗೂ ಅಡಕೆ ಮರಕ್ಕೂ ವ್ಯತ್ಯಾಸ ತಿಳಿಯದಂಥ ಜನರಿದ್ದಾರೆ. ಮಂತ್ರಿಗಳಿಗೂ ಈ ವಿಚಾರಗೊತ್ತಿದೆ. ಅವರು ಏನೋ ಒಂದು ರೀತಿ ಅನುಸರಿಸಿಕೊಂಡು ಹೋಗಬೇಕೆಂದು ಹೇಳುತ್ತಿದ್ದಾರೆ.

ಇನ್ನು ಈ ಮಸೂದೆಯಲ್ಲಿ ಎಳ್ಳು, ಸಾಸಿವೆ, ಹರಳುಬೀಜ ಇತ್ಯಾದಿಗಳನ್ನೆಲ್ಲ ಕಮರ್ಷಿಯಲ್ ಕ್ರಾಪುಗಳೆಂದು ಸೇರಿಸಿರುತ್ತಾರೆ. ರಾಗಿ ಬೆಳೆಯ ಖರ್ಚುವೆಚ್ಚಗಳು ಈಗ 500 ರೂಪಾಯಿಗಳ ಮೇಲೆ ಹೋಗಿದೆ. ರೈತನಿಗೆ ಈಗ ಜ್ಞಾನೋದಯವಾಗಿದೆ. ಆತನಿಗೆ ಎಷ್ಟು ಅವಶ್ಯಕವಿರುವುದೋ ಅಷ್ಟನ್ನು ಮಾತ್ರ ರಾಗಿ ಬೆಳೆದು ಇನ್ನುಳಿದ ಜಮೀನಿನಲ್ಲೆಲ್ಲ ಕಮರ್ಷಿಯಲ್ ಕ್ರಾಪುಗಳನ್ನು ಬೆಳೆಯಬೇಕೆಂಬ ಭಾವನೆ ಬಂದುಹೋಗಿದೆ. ರೈತನು ಏನೇನು ಮಾಡುವುದಕ್ಕೆ ಹೋದರೂ ಅದನ್ನು ಸರ್ಕಾರದವರು ಗ್ರಹಿಸಿ ಇಂಥ ಕಾನೂನುಗಳನ್ನು ತರುತ್ತಿದ್ದಾರೆ. ಆದರೆ ಯಾವರೈತನೇ ಆಗಲಿ ವರ್ಷದಲ್ಲಿ 2,400 ರೂಪಾಯಿಗಳ ಉತ್ಪತ್ತಿ ಹೊಂದಿದ್ದರೆ ಅಂಥವರ ಮೇಲೆ ಈ ತೆರಿಗೆ ಹಾಕತಕ್ಕದ್ದು ಸರಿ ಎಂದು ಹೇಳಬಹುದಾಗಿತ್ತು. ಒಂದು ತೆಂಗಿನ ತೋಟದ ಆದಾಯ ಎರಡುಸಾವಿರ ರೂಪಾಗಳಿದ್ದರೆ, ಅದರಲ್ಲಿ ಹರಳುಗಿಡಗಳಿದ್ದುವು ಎಂದು 400 ರೂಪಾಯಿ ಆದಾಯವನ್ನು ಜಾಸ್ತಿಮಾಡಿ ತೆರಿಗೆ ಹಾಕಲು ದಾರಿ ಹುಡುಕುತ್ತಾರೆ. ನಮ್ಮಲ್ಲಿ ಇಂಥ ಅಧಿಕಾರಿಗಳಿದ್ದಾರೆ. ಈ ಎಣ್ಣೆಬೀಜಗಳನ್ನು ಬೆಳೆಯುತಕ್ಕ ಪ್ರಕೃತಿ ನಮ್ಮ ಜನರಲ್ಲಿಲ್ಲ. ತಾವೀಗ ಈ ತೆರಿಗೆ ಹಾಕಿದರೆ ವ್ಯವಸಾಯಗಾರರಿಗೆ ಬಹಳ ಉಪಕಾರಮಾಡಿದ ಹಾಗಾಯಿತು. ಅಲ್ಲಿಗೆ ಈ ಬೆಳೆ ಸಹ ಸಂಪೂರ್ಣವಾಗಿ ತಪ್ಪಿಹೋಗುತ್ತದೆ. ಸೆಕ್ಷನ್ 5ಕ್ಕೆ ತಂದಿರತಕ್ಕ ತಿದ್ದುಪಡಿಯಲ್ಲಿ ಸಾದಲ್ವಾರ್ ಖರ್ಚು, ಸಂಬಳ ಇತ್ಯಾದಿಗಳನ್ನು ಆದಾಯದಲ್ಲಿ ವಜಾಮಾಡಬಾರದೆಂದು ಹೇಳಿದ್ದಾರೆ. ಈ ದಿವಸ ಒಬ್ಬ ವ್ಯಕ್ತಿ ಸಾಲಮಾಡಿ ಒಂದು ಕಾಫಿ ತೋಟಮಾಡಿದ್ದರೆ, ಆ ಸಾಲಕ್ಕೆ ಕೊಡತಕ್ಕ ಬಡ್ಡಿಯನ್ನು ಈ ಉತ್ಪತ್ತಿಯಲ್ಲಿ ವಜಾಮಾಡಬಾರದೆಂದು ಹೇಳಿದರೆ ಏನಿದು ? ಇದು ಖಂಡಿತ ಸರಿಯಲ್ಲ. ಇದರಿಂದ ಮುಂದೆ ಬಹಳ ಕಷ್ಟಬರುತ್ತದೆ. ಒಂದು ವರ್ಷದ ಖರ್ಚುವೆಚ್ಚಗಳನ್ನು ಪರಿಶೀಲನೆ ಮಾಡದೆ ಹೇಗೆ ಆದಾಯವನ್ನು ಕಂಡುಹಿಡಿಯುತ್ತೀರಿ ? ಯಾವ ಬೆಳೆಯನ್ನಾದರೂ ತೆಗೆದುಕೊಳ್ಳಿ. ತೆಂಗಿನ ಬೆಳೆ ತೆಗೆದುಕೊಂಡರೆ, ಅದಕ್ಕೆ ಎಂಟು ವರ್ಷದವರೆಗೆ ಖರ್ಚು ಮಾಡಬೇಕು. ದ್ರಾಕ್ಷಿ ಬೆಳೆಯನ್ನು ನೋಡಿದರೆ, ಮೂರುವರ್ಷಗಳವರೆಗೆ, ಅದಕ್ಕೆ ಖರ್ಚುಮಾಡಬೇಕು. ಸಪೋಟಾದ ವ್ಯವಸಾಯವನ್ನು ನೋಡಿದರೆ ಅದಕ್ಕೆ ನಾಲ್ಕು

ವರ್ಷಗಳ ವರೆಗೆ ಖರ್ಚು ಮಾಡಬೇಕು. ಹೀಗಿರುವಾಗ ಇದರಲ್ಲಿ ಬರುವ ಆದಾಯವೇನು ಎನ್ನುವುದನ್ನು ಯೋಚನೆ ಮಾಡಬೇಕು. ಇದಕ್ಕೆಲ್ಲಾ ವೆಚ್ಚಮಾಡುವಾಗ ರೈತರಿಗೆ ನ್ಯಾಯ ದೊರಕಿಸುವಂತೆ ಮಾಡಿದರೆ ಅನುಕೂಲವಾಗುತ್ತದೆ. ರೈತರಿಗೆ ಅನುಕೂಲಗಳನ್ನು ಕಲ್ಪಿಸಿಕೊಡುವುದಾದರೆ ಅವರು ಆದಾಯಕೊಡುವುದಕ್ಕೆ ಸಿದ್ಧರಾಗಿದ್ದಾರೆ.

New Clause 34.—Appeal to the Appellate Tribunal.—ಇದರಲ್ಲಿರುವ sub-clause 6 (b) ನಲ್ಲಿ.

> "Provided that if application for review is preferred within ninety days from the date on which the order to which the application relates is communicated to the applicant, the application shall be accompanied by half the fee which had been paid in respect of the appeal."

ಇದು ಬಹಳ ಅನ್ಯಾಯ. ಆರು ತಿಂಗಳೊಳಗೆ ಅಪೀಲು ಹಾಕಿದರೆ ಸುಮಾರು 5ರಿಂದ 250 ರೂಪಾಯಿಗಳಷ್ಟು ಖರ್ಚಾದರೆ 5 ರೂಗಳಷ್ಟು ಕಡಿಮೆ ಕೊಡಬಹುದು. 90 ದಿನದೊಳಗೆ ಅಪೀಲು ಹಾಕಿದರೆ ಅದರ ಅರ್ಧದಷ್ಟು ಎಂದು ಇಲ್ಲಿ ಹೇಳಿ ಇದರಲ್ಲೇಕೆ ವ್ಯತ್ಯಾಸ ಮಾಡಿದ್ದೀರಿ ? ಇಲ್ಲಿ ಅಪೀಲು ಅರೋವಮಾಡುವಾಗ ಶೇಕಡಾ ಎರಡರಷ್ಟು ಎಂದಿರುವುದನ್ನು ಖಂಡಿತ ವಜಾಮಾಡಬೇಕು. ಅಪೀಲಗಾಗಿ ಕೋರ್ಟಿಗೆ ರೈತಾಪಿ ಜನರು ಹೋಗುವುದೇ ಇಲ್ಲ. ಅವರಲ್ಲಿ ಅಷ್ಟು ಶಕ್ತಿಯೂ ಇರುವುದಿಲ್ಲ. ಪಂಚಾಯತಿಯವರು ಏನಾದರೂ ಒಂದು ತೀರ್ಮಾನವನ್ನು ಹಳ್ಳಿಯಲ್ಲಿ ಹೇಳಿದರೆ ಅದನ್ನೇ ಒಪ್ಪಿಕೊಂಡು ಹೋಗುತ್ತಾರೆ. ಇದರ ಮೇಲೆ ಅಪೀಲು ಹೋಗಬೇಕೆಂದಾಗ ಅವರು ಶೇಕಡಾ ಎರಡರಷ್ಟು ಕೊಡಬೇಕು. ಅದಾದಮೇಲೆ ಆರು ತಿಂಗಳಲ್ಲಿ ಅಪೀಲುಮಾಡುವಾಗ 90 ದಿನದೊಳಗೆ ಶೇಕಡ ಐವತ್ತರಷ್ಟು ಕೊಡಬೇಕೆಂದು ಹೇಳುವುದು ಇವು ಯಾವುದೂ ಸರಿಯಲ್ಲ. ಅಪೀಲುಗಳನ್ನು ರೆವ್ಯೂ ಮಾಡುವಾಗ ಆರು ತಿಂಗಳಲ್ಲಾಗಲೀ, 90 ದಿನಗಳಲ್ಲಾಗಲೀ ಹಾಕುವ ಫೀಸನ್ನು ವಜಾಮಾಡಿ ಅಪೀಲಿಗೆ ಅವಕಾಶ ಮಾಡಿಕೊಡಬೇಕೆಂದು ನನ್ನ ಪ್ರಾರ್ಥನೆ. 55ನೇ ಸೆಕ್ಷನ್ನಿನಲ್ಲಿ ಹೈಕೋರ್ಟಿಗೆ ಒಂದು ಸಜೆಷನ್ನನ್ನು ಕೊಟ್ಟಿದ್ದಾರೆ. ಹೈ ಕೋರ್ಟಿನಲ್ಲಿ ಅಪೀಲು ಇದ್ದರೆ ಅವರು ಅದರ ಮೇಲೆ ಟ್ರಿಬ್ಯುನಲ್ಲಿಗೇಕೆ ಡೈರೆಕ್ಷನ್ನು ಕೊಡಬೇಕು !

ಸೆಕ್ಷನ್ 55 (5) ರಲ್ಲಿ ಅವರಿಗೇಕೆ ಡೈರೆಕ್ಷನ್ನು ಕೊಡಲು ಅವಕಾಶ ಕೊಡಬೇಕು. ಈ ಆಕ್ಟಿನಲ್ಲಿ ಡಿಸ್‌ಮಿಸ್ ಮಾಡಿ ಎಂದು ಅವರೇಕೆ ಹೇಳಬೇಕು! ಟ್ರಿಬ್ಯುನಲ್ಲಿಗೆ ಅಪೀಲು ಕೊಟ್ಟಿರುವಾಗ ಈ ರೀತಿ ಹೈಕೋರ್ಟು ಡೈರೆಕ್ಷನ್ನು ಕೊಡುವುದು ಖಂಡಿತ ಬೇಡ.

Amendment to Section 63 2 (a) ನಲ್ಲಿ, "Any rule under this Act may be made to have effect retrospectively" ಎಂದಿದೆ. ಇದು ಬಹಳ ಕಷ್ಟ, ಎರಡು ವರ್ಷಗಳ ಹಿಂದೆ ಆ ರುವ ಒಂದು ಆಕ್ಟಿನಲ್ಲಿ ರೂಲ್ಸುಮಾಡಿ ಈಗಿರುವುದನ್ನು ಸರಿಪಡಿಸುವಾಗ ಈರೀತಿ retospective effect ಕೊಡಬೇಕೆಂದಿರುವುದನ್ನು ಖಂಡಿತ ತೆಗೆಯಬೇಕು. ಮದರಾಸು ಹೈಕೋರ್ಟಿನಲ್ಲಿ retospective effect ಎಂದು ಇರಕೂಡದು ಎಂದು ಹೇಳುವಾಗ ನಮ್ಮಲ್ಲಿ ಖಂಡಿತ ಇದು ಇರಕೂಡದು. ಆ ರೀತಿ ಏಕೆ ತಂದಿದ್ದೀರಿ ? ಈಗಲಾದರೂ ಅದನ್ನು ತೆಗೆದು ಸರಿಪಡಿಸಿದರೆ ಅಷ್ಟೇ ಸಂತೋಷ. ಅಲ್ಲದೆ ಇದನ್ನು ಇನ್ನೂ ಉತ್ತಮ ಪಡಿಸುವ ಸಲುವಾಗಿ ಈ ಬಿಲ್ಲನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಇನ್ನೂ ಉತ್ತಮವಾದ ರೀತಿಯಲ್ಲಿ ಈ ಕಾನೂನು ಬರಲು ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

Sri SANJEEVANATH AIKALA (Suratkal).—Mr. Speaker, Sir. I do not propose to go into the various provisions of this amending Bill. I only wish to make a few general observations. It is very regrettable that the Government brings very hasty legislation and latter on every year goes on bringing amendments. Consequently, they have to face various civil cases in the High Court or Supreme Court. In order to circumvent the ruling of the High Court, they bring in amendment clauses and thus get the provisions amended. The five or six amendments which have been proposed here, I feel, are a result of not a deep thinking on the part of the concerned drafting officers.

(SRI SANJEEVANATH AIKALA)

I very much regret to note that timber is considered to be one of the commodities of agricultural produce. I do not know what kind of agricultural produce it is. This particular amendment, as the Hon'ble Minister just now told us, is a result of the decision of the High Court. The decision of the High Court went against the Government and consequently Government had to refund a large amount of money. In order to get away from paying that amount as directed by the High Court, this amendment has been brought here. It is very unfortunate that the decision of the High Court has been so violently disobeyed.

SRI B. D. JATTI.—It is a wrong statement. Government has not disobeyed and it is not going to disobey the decision of the High Court. The Hon'ble Member puts it in a different way altogether.

SRI SANJEEVANATH AIKALA.—The Hon'ble Minister told that in order to evade payment of certain amount this amendment was brought and that the wording of a particular section or provision was interpreted in a different way by the High Court.

SRI B. D. JATTI.—Are we not here to accept the decision of the High Court?

SRI SANJEEVANATH AIKALA.—How does the Hon'ble Minister think that it is interpreted in a different way!

SRI B. D. JATTI.—We are not going against the decision of the High Court. We are going according to the decision of the High Court. The Hon'ble Member is going in a wrong way.

SRI SANJEEVANATH AIKALA.—Now, since they had to refund a large amount of money, they have brought this amendment.

Sir, especially certain provisions of this agricultural income-tax hit hard the coffee growers I refer to coffee which can be considered as ಕಾಮ ಧೇನು;ಕಲ್ಪವೃಕ್ಷ''. Coffee is earning dollars as forein exchange. Coffee not only earns dollars, but also earns rubles. Whatever foreign exchange we can have, we are earning through coffee. The provisions of this Act, as already pointed out by the previous speakers, hit the very agricultural improvements and production. That Government which kills the individual enterprise in the matter of agricultural produce, does not deserve to be called the People's Government. And this Government is doing that. I will say this is not an Agriculturists Act of a People's Government. Because day in and day out, every time they say that they are for the agriculturists, and that agriculturists are the backbone of the country and so on. On the other hand, every legislative enactment they bring in here suppresses and kills the initiative of the agriculturists. That is the position of the agriculturist today. So, I say that clauses of the original Act itself should be amended in order to give certain reliefs to the agriculturists.

SRI G. V. GOWDA.—You must bring a non-official Bill for this urpose and get the relief. You should take the init ative.

Sri SANJEEVANATH AIKALA.—If it means that we should take the initiative, I will certainly take the initiative and I will say that my very good friends who are representing the agriculturist-class on the other side will certainly support me.

Un-yielding plants are not excluded for the payment of agricultural income-tax. This is very unjustified and I say that this particular word should be removed so that whatever expenses are incurred in the matter of plants also should be considered while the tax is calculated.

These are the few suggestions that I have to make and I hope these suggestions would be properly incorporated in the Bill.

† ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಮಾನ್ಯ ಅಧ್ಯಕ್ಷರೆ, ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಮಸೂದೆಯನ್ನು ನೋಡಿದರೆ ಅಷ್ಟು ಹೆಚ್ಚಾಗಿ ಏನೂ ಉತ್ಸಾಹ ಕಾಣುತ್ತಾ ಇಲ್ಲ

ಶ್ರೀಮಾನ್ ಬಿ. ಡಿ. ಜತ್ತಿ.—ಮಾತನಾಡುವವರಿಗೆ !

ಶ್ರೀ ಎಚ್. ಆರ್. ಕೇಶವಮೂರ್ತಿ.—ಮಾತನಾಡುವವರಿಗೂ ಮತ್ತು ದೇಶಕ್ಕೂ ಕೂಡ. ಹಿಂದೆಯೇ ಒಂದು ಗಾದೆ ಹೇಳಿದ್ದೇನೆ. ಅದೇನೆಂದರೆ 'Marry in haste and repent at leisure' ಎಂದು. ಹೀಗೆ ಅವಸರದಲ್ಲಿ ಒಂದು ಕಾನೂನು ಮಾಡಿ ಬಿಟ್ಟರೆ, ನಾಳೆ ಈಗಿನ ಹಾಗೆಯೇ, ಅದನ್ನು ಸರಿಮಾಡಬೇಕಾಗುತ್ತದೆ.

Mr. SPEAKER.—I do not agree with the comparison of passing legislation to marriage;

Sri H. R. KESHAVA MURTHY.—It has got an indirect bearing, Sir. ಮೊದಲನೆಯ ಬಿಲ್ಲಿನಲ್ಲಿರತಕ್ಕಂಥ ಕ್ಲಾಜುಗಳನ್ನು ಸ್ವಲ್ಪ ರಿಫಾರಂ ಮಾಡಿ, ಅವುಗಳಿಗೆ ಅರ್ಥ ಬರುವ ಹಾಗೆ ಒಂದು ಪರಿಷ್ಕಾರ ಮಾಡಿದ್ದಾರೆ. ಈಗ ನಮ್ಮ ಮುಂದಿರುವ ಮಸೂದೆಯನ್ನು ಚೆನ್ನಾಗಿ ಪರಿಷ್ಕಾರ ಮಾಡಿ ನಿಧಾನವಾಗಿ ಈ ಸಭೆಯ ಮುಂದೆ ತಂದು, ಪಾಸ್ ಮಾಡಿಸಬಹುದಾಗಿತ್ತು. ಈಗ ತಂದಿರುವ ಅಮೆಂಡ್‌ಮೆಂಟೇ ಕೊನೆ ಎಂದು ಭಾವಿಸುವುದಕ್ಕೆ ಆಗುವುದಿಲ್ಲ. ಈ ಹಂತದಲ್ಲಿ ಈ ಮಸೂದೆಯನ್ನು ಪರಿಶೀಲಿಸುವುದು ಬೇಡ. ಇದರಲ್ಲಿರುವ ಪ್ರಾವಿಷನ್ನುಗಳನ್ನೆಲ್ಲಾ ಕ್ಲಾಸ್ ಬೈ ಕ್ಲಾಸ್, ಸಬ್‌ಕ್ಲಾಸ್ ಬೈ ಸಬ್ ಕ್ಲಾಸ್ ಒಂದು ಸಮಿತಿ ಪರೀಕ್ಷಿಸಿ, ಸರಿಮಾಡಿ, ಪರಿಷ್ಕರಿಸಿದ ಮೇಲೆ ಇದು ಈ ಸಭೆಯ ಮುಂದೆ ಬರುವುದು ಒಳ್ಳೆಯದು. ಇದರಲ್ಲಿ ಇನ್ನೂ ಎಷ್ಟು ಕ್ಲಾಸುಗಳು ಪರಿಷ್ಕಾರವಾಗಬೇಕಾಗಿದೆಯೋ, ಅವುಗಳನ್ನೆಲ್ಲಾ ಸೆಲೆಕ್ಟ್ ಕಮಿಟಿ ಪರಿಷ್ಕರಿಸಿದ ಮೇಲೆ ಈ ಸಭೆಗೆ ತಿದ್ದುಪಡಿ ಮಸೂದೆಯನ್ನು ತಂದರೆ ಈ ಸಭೆಯ ಕಾಲವೂ ಉಳಿಯುತ್ತದೆ, ಸರ್ಕಾರದ ಖರ್ಚೂ ಉಳಿಯುತ್ತದೆ ಎಂದು ನಾನು ಭಾವಿಸುತ್ತೇನೆ.

ಪ್ಲಾಂಟೇಷನ್ ಕ್ರಾಪಿನಲ್ಲಿ, ಕಾರ್ಡಮಮ್, ಕಾಫಿ, ಆರೆಂಜ್, ಪೆಪ್ಪರ್, ರಬ್ಬರ್ ಮತ್ತು ಟೀಯನ್ನು ಸೇರಿಸಿದ್ದೀರಿ. ಆದರೆ ಕೋಕೋನಟ್ ಸೇರಿಸಿಲ್ಲ. ಇದನ್ನು ಪ್ಲಾಂಟೇಷನ್ ಕ್ರಾಪ್ ಎಂಬ ಡೆಫಿನಿಷನ್ನಿನಲ್ಲಿ ಸೇರಿಸಿ ಎಂದು ಎಷ್ಟು ಸಲ ಸಲಹೆ ಮಾಡಿದರೂ, ಅದು ನಮ್ಮ ಅರ್ಥ ಸಚಿವರ ಗಮನಕ್ಕೆ ಬಂದಿಲ್ಲ. ದಯವಿಟ್ಟು ಈ ಅಮೆಂಡ್‌ಮೆಂಟ್ ಮಸೂದೆಯಲ್ಲಿ ಕೋಕೋನಟ್ಟನ್ನು ಪ್ಲಾಂಟೇಷನ್ ಕ್ರಾಪಿನಲ್ಲಿ ಸೇರಿಸಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Amendment to section 5ರಲ್ಲಿ, ಕಮಿಷನ್ ಕೊಟ್ಟದ್ದು ಎಕ್ಸ್‌ಪೆಂಡಿಚರ್ ಅಲ್ಲವೆಂದು, ಪ್ರಾವಿಸೊನಲ್ಲಿ ಸೇರಿಸಿದ್ದಾರೆ. ಶ್ರೀ ರಾಮೇಗೌಡರು ಹೇಳಿದ ಹಾಗೆ, ಸಾಮಾನ್ಯವಾಗಿ ಬೇಸಾಯಕ್ಕೆ ಗಾಡಿಗಳು, ಎತ್ತುಗಳು ಬೇಕಾಗುತ್ತವೆ. ಗಾಡಿಗಳು, ಎತ್ತುಗಳು ಬೇಕಾದರೆ ಕಮಿಷನ್ನಿಗೆ ವೆಚ್ಚ ಮಾಡಬೇಕು, ಅದಕ್ಕೆ ಲೆಕ್ಕ ಕೊಡಬೇಕು ಅಂದರೆ ಸಾಧ್ಯವೇ ! ಆದರೆ ಅವುಗಳನ್ನು ಕೊಂಡುಕೊಳ್ಳಬೇಕಾದರೆ ಕಮಿಷನ್ ಕೊಟ್ಟೇ ಕೊಡಬೇಕಾಗುತ್ತದೆ. ಈ Commision ಪದವನ್ನು ಈ ಪ್ರಾವಿಸೋನಿಂದ ತೆಗೆದು ಹಾಕಿ ಬಿಡಿ ; ಅದು ಇರಕೂಡದು.

Sri S. M. KRISHNA.—I would like to bring to your notice that whenever Ministers have to be briefed by their Secretaries, it is necessary that they should be on their seats. Every time, I have been observing during last few days, the Ministers walk up to that part of the official gallery and they stand up. I do not think it is necessary. They can

(SRI S. M. KRISHNA)

brief Ministers sitting. They would be unnecessarily drawing the attention of the House also if they stand up. We certainly are not against Secretaries briefing Ministers.

MR. SPEAKER.—The Hon'ble Member has said that. It may please be left to the Chair.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸೆಕ್ಷನ್ 5ರಲ್ಲಿ, Explanation 2ರಲ್ಲಿ ಕಾಫಿ ಪ್ಲಾಂಟ್ಸನ್ನೂ ಸೇರಿಸಬೇಕು. ಟೀ ಪ್ಲಾಂಟ್ ನಂತೆಯೇ, ಕಾಫಿ ಗಿಡವೂ ಬೆಳೆದು ಫಸಲು ಬಿಡುವತನಕ ಪ್ರತಿ ವರ್ಷವೂ ಬಹಳ ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ಕಾಫಿ ವ್ಯವಸಾಯಕ್ಕೆ ಖರ್ಚನ್ನೂ ಈ Explanation ನಲ್ಲಿ ಸೇರಿಸಬೇಕು.

Amendment to Section 12.—ಇದರಲ್ಲಿ ಹೇಳಿರುವಂತೆ ಸುಮ್ಮನೆ ಒಂದು ಇನ್‌ಸ್ಟಿಟ್ಯೂಷನ್, ಅದು charitable purposeಗೆ ಸ್ಥಾಪನೆಯಾಗಿದೆ ಎಂದು ಹೇಳಿಬಿಟ್ಟರೆ ಸಾಲದು. ಸುಮ್ಮನೆ charitable institution ಎಂದು ಬೋರ್ಡು ಹಾಕಿಕೊಂಡಿದ್ದ ಮಾತ್ರಕ್ಕೆ, ಇನ್‌ಕಂಟ್ಯಾಕ್ಸ್ ಅಸೆಸ್‌ಮೆಂಟಿನಿಂದ ವಿನಾಯಿತಿ ಕೊಡಬಾರದು. ಪರೋಪಕಾರದ ಕೆಲಸ ಅವುಗಳಿಂದ ನಡೆಯುತ್ತಿದೆಯೇ ಎಂದು ನೋಡಿ ತಿಳಿದುಕೊಂಡು ಎಕ್ಸೆಂಪ್ಷನ್ ಕೊಡಬೇಕು.

MR. SPEAKER.—What are the views of the Hon'ble Member with regard to educational institutions being helped?

ಶ್ರೀ ಎಚ್. ಆರ್. ಕೇಶವಮೂರ್ತಿ.—ಕೆಲವು education institutionಗಳು ಯಾವ ಉದ್ದೇಶಗಳನ್ನೂ ನೆರವೇರಿಸುತ್ತಿರುವುದಿಲ್ಲ. ಹಾಗೆಯೇ ಕೆಲವು "ಸೇವಾ ಸಂಘ" ಎಂದು ಬೋರ್ಡು ಹಾಕಿಕೊಂಡಿರುತ್ತವೆ. ಏನು ಸೇವೆಯನ್ನೂ ಸಮಾಜಕ್ಕೆ ಮಾಡುತ್ತಾ ಇರುವುದಿಲ್ಲ ಆದ್ದರಿಂದ charitable purpose serve ಮಾಡುತ್ತಾ ಇವೆಯೇ ಎಂದು ವೆರಿಫೈ ಮಾಡಿಕೊಂಡು, ಆ ಮೇಲೆ ಎಕ್ಸೆಂಪ್ಷನ್ ಕೊಡಬೇಕು.

Amendment to Section 32 ಸಬ್‌ಕ್ಲಾಜ್ ಸಬ್‌ಸೆಕ್ಷನ್ (2)ರಲ್ಲಿ ಏನು ಮಾಡಿದ್ದಾರೆ ಎಂದರೆ, sufficient security ಕೊಟ್ಟ ಮೇಲೆ, ಅಪೀಲ್ ಮಾಡಿಕೊಳ್ಳಬಹುದು ಎಂದು ಹೇಳಿದ್ದಾರೆ. ನಾನು ಕೇಳುವುದು ಇಷ್ಟೆ. ತಾವು ಇನ್‌ಕಂಟ್ಯಾಕ್ಸ್ ಹಾಕಬೇಕಾದರೆ, ಪ್ರಾಪರ್ಟಿ ಇದ್ದೇ ಇರುತ್ತದೆ. ಆ ಪ್ರಾಪರ್ಟಿ ಸೆಕ್ಯೂರಿಟಿ ಇರುವಾಗ, ಅಪೀಲು ಹಾಕಬೇಕಾದರೆ, ಹೊಸದಾಗಿ ಸೆಕ್ಯೂರಿಟಿ ಏಕೆ ಕೊಡಬೇಕು? ಗಟ್ಟಿ ಆಸಾಮಿ ಮೇಲೆಯೇ ಟ್ಯಾಕ್ಸ್ ಹಾಕುವುದು. ಜೊಳ್ಳು ಆಸಾಮಿಗಳು ಯಾರೂ ತೆರಿಗೆ ಕೊಡುವಹಾಗೆಯೇ ಇಲ್ಲ. ಆದ್ದರಿಂದ ಅಪೀಲು ಹಾಕುವುದಕ್ಕೆ security furnish ಮಾಡಬೇಕೆಂದು ಷರತ್ತು ಹಾಕಿರುವುದನ್ನು ಬಿಟ್ಟು ಬಿಡಬೇಕು.

ಸೆಕ್ಷನ್ 34ರಲ್ಲಿ "........may appeal to the Appellate Tribunal within sixty days from the date on which the notice of such order was communicated to the assessee" ಎಂದಿದೆ. ಸಾಮಾನ್ಯವಾಗಿ ರೈತನಿಗೆ 60 ದಿನಗಳ ಅವಕಾಶ ಸಾಲದು. ಕೆಲವು ಸಂದರ್ಭಗಳಲ್ಲಿ ಆರ್ಡರ್ ಮಾಡಿ ಹಾಗೆಯೇ ಇಟ್ಟುಕೊಂಡಿದ್ದು ಯಾವುದಕ್ಕೋ ರುಜು ಮಾಡಿಸುವಂತೆ ಅದಕ್ಕೂ ರುಜು ಹಾಕಿಸಿಕೊಂಡು ಅಪೀಲು ಮಾಡುವ ಅವಧಿ ಕಳೆದಮೇಲೆ ಅದನ್ನು communicate ಮಾಡುತ್ತಾರೆ. ಅಷ್ಟರಲ್ಲಿ ಅಪೀಲು ಮಾಡುವ ಅವಧಿ ಮುಗಿದಿರುತ್ತದೆ. ಆದುದರಿಂದ ಕೊನೆ ಪಕ್ಷ 90 ದಿವಸವಾದರೂ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಸಬ್‌ಕ್ಲಾಜ್ 3 ಪೂರ್ತಿಯಾಗಿ ಬಿಟ್ಟರೆ ಸಂತೋಷ. ಇಲ್ಲದೆ ಇದ್ದರೆ "provided that the sum payable shall in no case be less than five rupees or more than 200 rupees" ಎನ್ನುವುದನ್ನು ಬಿಡಬೇಕು. ಇದರಲ್ಲಿ ಧನಿಕರಿಗೆ ಉಪಕಾರ ಮಾಡಿದ ಹಾಗೆ ಮತ್ತು ರೈತನಿಗೆ ತೊಂದರೆ ಮಾಡಿದಹಾಗೆ ಆಗುತ್ತದೆ.

4-00 P.M.

ಸೆಕ್ಷನ್ 35 ಅನ್ನು ತೆಗೆದುಕೊಂಡರೆ ತಮ್ಮ view one-sided ಆಗಿದೆ ಎಂದು ಗೊತ್ತಾಗುತ್ತದೆ. Original sectionನಲ್ಲಿ ಹೀಗಿದ್ದಿತು.

> "The Commissioner may of his own motion or on application by an assessee call for the record of, any proceeding under this Act which has been taken by authority subordinate to him and may make such enquiry................"

ಆದರೆ ಈಗ ತಂದಿರುವ ತಿದ್ದುಪಡಿಯಲ್ಲಿ ಏನು ಮಾಡಿದ್ದಾರೆಂದರೆ "........so far as it is prejudicial to the interest of the revenue,............" ಎಂದು ತಮ್ಮ ಹಿಂದಿನ ಆದಾಯವನ್ನೇ ನೋಡಿಕೊಳ್ಳುವುದಕ್ಕೆ ಅಧಿಕಾರ ಮಾಡಿಕೊಂಡಿದ್ದಾರೆ. ನಿಷ್ಪಕ್ಷಪಾತವಾಗಿ ರೈತನ ಪರ ಮತ್ತು ಸರ್ಕಾರದ ಪರ ಎರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು ಈ ಸೆಕ್ಷನನ್ನು ಮಾರ್ಪಾಡು ಮಾಡಬೇಕು.

ಸೆಕ್ಷನ್ 37—Rectification of mistake. ಇದರಲ್ಲಿ

> "(a) the Agricultural Income-tax Officer may amend any order of assessment or of refund or any other order passed by him;"

ಎಂದಿದೆ. ಅಧಿಕಾರಿಗಳು ನಿಧಾನವಾಗಿ ಯೋಚನೆ ಮಾಡಿ, ಕೂಲಂಕಷವಾಗಿ ವಿಮರ್ಶೆ ಮಾಡಿ ಒಂದು ಆರ್ಡರ್ ಮಾಡಿದರೆ. ಅಂಥ ಆರ್ಡರನ್ನು ಅವರು ಮಾಡಿದುದನ್ನು ಅವರೇ revise ಮಾಡುವುದೆಂದರೆ ಅರ್ಥವೇನು ? It should not be revised by himself.

ಆದುದರಿಂದ ಅಧಿಕಾರಿಗಳು ಆರ್ಡರ್ ಮಾಡಬೇಕಾದರೆ ಕೂಲಂಕಷವಾಗಿ ಯೋಚನೆಮಾಡಿ ಆರ್ಡರ್ ಮಾಡಲಿ. ಅದರ ಮೇಲೆ Appellate Authority ಅಂಥ ಆರ್ಡರನ್ನು ವಿಮರ್ಶೆ ಮಾಡಿ revise ಮಾಡಲಿ, set aside ಮಾಡಲಿ. ಆದರೆ ಅಧಿಕಾರಿಯಾದವರು ಅವರೇ ಒಂದು ಆರ್ಡರ್ ಮಾಡಿ ಸ್ವಲ್ಪ ಕಾಲಾನಂತರ ಅದನ್ನು ಅವರೇ revise ಮಾಡುವುದು ಅಷ್ಟೊಂದು ಸಾಧುವಾದುದಲ್ಲ.

Mr. SPEAKER.—Suppose there is a clerical mistake ; Even then should it not be revised ?

ಶ್ರೀ ಎಚ್. ಆರ್. ಕೇಶವಮೂರ್ತಿ.—ಆರ್ಡರು ಮಾಡುವಾಗಲೇ ಕೂಲಂಕಷವಾಗಿ ವಿಚಾರ ಮಾಡಿ ವಿಮರ್ಶೆ ಮಾಡಿ ಆರ್ಡರ್ ಮಾಡಲಿ. ಆದರೆ ಅದನ್ನು ಅವರು ಪುನರ್ವಿಮರ್ಶೆ ಮಾಡುವ ಅಧಿಕಾರವಿರಬಾರದು. ಅವರು ಮಾಡಿದ್ದನ್ನು ಮೇಲಿನವರು ಸರಿಮಾಡಲಿ.

ಸೆಕ್ಷನ್ 37 (7)ರಲ್ಲಿ "No amendment under this section shall be made after the expiry of four years from the date of the order sought to be amended." Parent Actನಲ್ಲಿ ಮೂರು ವರ್ಷ ಎಂದು ಇತ್ತು. ಇದರಲ್ಲಿ ನಾಲ್ಕು ವರ್ಷ ಎಂದು ಮಾಡಿದ್ದಾರೆ. ಇದರ ಉದ್ದೇಶವೇನೆಂದರೆ ಹಿಂದಿನ ಬಾಕಿ ಯಾವುದಾದರೂ ಇದ್ದರೆ ಅದನ್ನು ವಸೂಲ್ಮಾಡಬಹುದು ಎಂದು. ಹಳ್ಳಿಯ ಕಡೆ ಒಂದು ಗಾದೆ ಇದೆ "ಹೊಟ್ಟೆಗಿಲ್ಲದ ಶ್ವಾನುಭೋಗ ಹಳೇಲೆಕ್ಕ ಹುಡುಕಿದ" ಎಂದು. ಇವರು ಮಾಡುವುದೂ ಹಾಗೆಯೇ ಕಾಣುತ್ತದೆ. ಹಳೆಯ ಬಾಕಿ ಯಾವುದಾದರೂ ಇದ್ದರೆ ಮೂರು ವರ್ಷಗಳಲ್ಲಿ ಆ ತಪ್ಪನ್ನು ಸರಿಪಡಿಸಿಕೊಳ್ಳಬೇಕು ಎಂದು ಇದ್ದುದಕ್ಕೆ ನಾಲ್ಕು ವರ್ಷ ಅವಕಾಶವನ್ನು ಕೊಟ್ಟಿದ್ದಾರೆ. ಇದು ಸರಿಯಿಲ್ಲ. ಇದನ್ನು ಮೊದಲಿದ್ದಂತೆಯೇ ಮೂರು ವರ್ಷ ಮಾಡಬೇಕು.

45A ನಲ್ಲಿ power to withhold refund in certain cases ಎಂದು ಹೇಳಿದ್ದಾರೆ. Parent Actನಲ್ಲಿ Refunds ಎಂದು ಮಾತ್ರವಿತ್ತು. ಈಗ ತಂದಿರುವ ತಿದ್ದುಪಡಿಯಿಂದ ವಾಪಸು ಬರಬೇಕಾದ ಹಣ ಕನ್ನಡಿಯೊಳಗಿನ ಗಂಟಿನ ಹಾಗೆ ಆಗುತ್ತದೆ. Refund ಎಂದು ತೋರಿಸುತ್ತೀರಿ ಆದರೆ ಆದನ್ನು ತಡೆ ಹಿಡಿಯುವುದರಿಂದ "ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ" ಎನ್ನುವ ಹಾಗೆ ಆಗುತ್ತದೆ. ಕನ್ನಡಿಯೊಳಗಿನ ಗಂಟಿನ ಹಾಗೆ ಆಗುತ್ತದೆ. ಇದು ವಿಮರ್ಶೆ ಯಾಗುವುದರಲ್ಲಿ Appellate Authority, Revision Court, High Court ನಲ್ಲಿ ಸುತ್ತುವುದರಲ್ಲಿ ರೈತನಿಗೆ ಸಾವಿರಾರು ರೂಪಾಯಿ ಖರ್ಚಾಗುತ್ತದೆ. Refund ಕೊಟ್ಟರೂ ಅದರ ಪ್ರತಿಫಲ ಮಾತ್ರ ಸಿಕ್ಕುವುದಿಲ್ಲ. ಆದುದರಿಂದ Parent Actನಲ್ಲಿ ಹೇಗೆ ಇದೆಯೋ ಹಾಗೆಯೇ ಇರಬೇಕು. 45A ಹೊಸದಾಗಿ ಸೇರಿಸಬಾರದು, ಇದನ್ನು ವಿಚಾರ ಮಾಡಬೇಕು ಎಂದು ನನ್ನ ಪ್ರಾರ್ಥನೆ.

ಒಟ್ಟಿನಲ್ಲಿ ಈ ತಿದ್ದುಪಡಿ ಮಸೂದೆ ರೈತರ ಪರವಾಗಿಲ್ಲ. ಸರ್ಕಾರದ ಪರವಾಗಿದೆ. ರೈತರು ಈಗಾಗಲೇ ಬಹಳ ಕಷ್ಟ ಪಡುತ್ತಿದ್ದಾರೆ. ಅವರ ಮೇಲೆ ಇನ್ನೂ ಹೆಚ್ಚಿನ ಹೊರೆಯನ್ನು ಹಾಕಿ

(ಶ್ರೀ ಎಚ್. ಆರ್. ಕೇಶವಮೂರ್ತಿ)

ವ್ಯವಸಾಯ ವರಮಾನ ತೆರಿಗೆಯಿಂದ ಹೆಚ್ಚಿನ ಆದಾಯವನ್ನು ಪಡೆಯಬೇಕೆಂಬ ಅರ್ಥ ಸಚಿವರ ಉದ್ದೇಶ ಸರಿಯಲ್ಲ. ರೈತರಿಂದ ಬಲವಂತವಾಗಿದುಡ್ಡನ್ನು ಕಿತ್ತುಕೊಂಡು ಸರ್ಕಾರದ ಬೊಕ್ಕಸಕ್ಕೆ ತುಂಬುವುದು ಸರಿಯಲ್ಲ ದಯುವಿಟ್ಟು ಪುನಃ ವಿಮರ್ಶವಾಡಿ, ತೊಳಲಿ ಬಳಲುತ್ತಿರುವ ರೈತನ ಬಗ್ಗೆ ಕನಿಕರ ತೋರಿಸಿ ಇದನ್ನು ಇನ್ನು ಸ್ವಲ್ಪ ಸಡಿಲಮಾಡಿ ರೈತನಿಗೆ ಉಪಕಾರ ಮಾಡುವ ರೀತಿಯಲ್ಲಿ ತಿದ್ದುಪಾಟುಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ಅರ್ಥ ಸಚಿವರು ಈ ಸಭೆಯ ಮುಂದೆ ಇಟ್ಟಿರತಕ್ಕ ತಿದ್ದುಪಡಿ ಮಸೂದೆಯನ್ನು ನಾನು ಸ್ವಾಗತಿಸುತ್ತ ಕೆಲವು ಮಾತುಗಳನ್ನು ತಿಳಿಸಲು ಅಪೇಕ್ಷೆ ಪಡುತ್ತೇನೆ.

ಸ್ವಾಮಿ, ನೂರಾರು ಜನ ಕೂಲಿಕಾರರಿಗೆ ಕೆಲಸವನ್ನು ಒದಗಿಸಿಕೊಟ್ಟು ಅನೇಕ ಕೋಟಿ ರೂಪಾಯಿಗಳ ವಿದೇಶ ವಿನಿಮಯವನ್ನು ಭಾರತ ಸರ್ಕಾರಕ್ಕೆ ಒದಗಿಸಿ ಕೊಡತಕ್ಕ, ಹಿಂದೂಸ್ತಾನದಲ್ಲಿ ಬೆಳೆಯತಕ್ಕ ಕಾಫಿ ಬೆಳೆಯಲ್ಲಿ ನಮ್ಮ ಮೈಸೂರು ದೇಶದಲ್ಲಿ ಸೇಕಡ 70ರಷ್ಟು ಭಾಗ ಬೆಳೆಯುತ್ತದೆ ಎನ್ನುವುದನ್ನು ಹೇಳಲು ಸಂತೋಷ ಪಡುತ್ತೇನೆ. ಸುಮಾರು 175 ಸಾವಿರ ಎಕರೆ ಪ್ರದೇಶದಲ್ಲಿ ಮೈಸೂರು ದೇಶದಲ್ಲಿ ಕಾಫಿ ವ್ಯವಸಾಯ ನಡೆಯುತ್ತಿದೆ. ಈಗ ಹಿಂದೂಸ್ತಾನ ಸರ್ಕಾರದವರು ನೇಮಿಸಿರತಕ್ಕ 'ದುಬಾಸಿ ಕಮಿಷನ್' ಕಾಫಿ ತೋಟಗಳ ವಿಚಾರದಲ್ಲಿ ಒಂದು ವರದಿಯನ್ನು ಸಲ್ಲಿಸಿ, ಈಗಿರತಕ್ಕ ಕಾಫಿ ತೋಟಗಳಲ್ಲಿ ಸುಮಾರು ಶೇಕಡ 50ರಷ್ಟು ತೋಟಗಳು ಹಳೆಯದಾಗಿರುವುದರಿಂದ replantation ಮಾಡಬೇಕು, ಇಲ್ಲದೆ ಹೋದರೆ ರಷ್ಯ ಅಮೆರಿಕ ರಾಷ್ಟ್ರಗಳಿಗೆ ಕಳಿಸಲು 60 ಸಾವಿರ ಟನ್ ಕಾಫಿ ಬೆಳೆ ಒಂದು ಲಕ್ಷ ಟನ್ನಿಗೆ ಏರಬೇಕೆನ್ನತಕ್ಕ ಉದ್ದೇಶವೇನಿದೆ. ಅದನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲ; ಆದುದರಿಂದ ಕಾಫಿ ಬೆಳೆಗಾರರಿಗೆ ಒಂದು ಎಕರೆಗೆ 250 ರೂಪಾಯಿ ಪ್ರಕಾರ ವ್ಯವಸಾಯಕ್ಕೆ ಕೊಡಬೇಕು ಅದಕ್ಕಾಗಿ 27 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರಿಸಿ ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದಾರೆ. ಇಂಥ ಸಮಯದಲ್ಲಿ ನಮ್ಮ ಸರ್ಕಾರದವರು ಈ ತಿದ್ದುಪಡಿ ಮಸೂದೆಯನ್ನು ತಂದು ಶೇಕಡ ಎರಡೂವರೆಗೆ ಮೇಲ್ಪಟ್ಟು replantation ಮಾಡುವುದಕ್ಕೆ ಅವಕಾಶ ಇಲ್ಲದಂತೆ ಮಾಡಿದ್ದಾರೆ-ಇದನ್ನು ನೋಡಿದರೆ ನಿಜವಾಗಿಯೂ ಕಾಫಿ ಬೆಳೆಯುವವರಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟಂತೆ ಆಗುವುದಿಲ್ಲ. ನೂರಕ್ಕೆ ಹತ್ತರಷ್ಟಾದರೂ replantation ಮಾಡಿದರೆ ಅದರಿಂದ ನಿಜವಾದ ಪ್ರಯೋಜನವಾದೀತು ಅದರಿಂದ ರೈತರಿಗೆ ಅನುಕೂಲವಾದೀತು ಎಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಕಾಫಿ ಉದ್ಯಮ ಒಂದು ಕಡೆ ರೈತನ ವ್ಯವಸಾಯಕ್ಕೆ ಸಂಬಂಧಪಟ್ಟದ್ದು, ಇನ್ನೊಂದು ಕಡೆ ಕಾರ್ಖಾನೆಗಳ ಕಾನೂನಿಗೆ ಸಂಬಂಧಪಟ್ಟ ಕೈಗಾರಿಕೆ ಎಂದು ತೀರ್ಮಾನ ಮಾಡಿ ಎರಡು ಕಡೆಯೂ ಎಳೆದಾಟಕ್ಕೆ ಸಿಕ್ಕಿದ ಉದ್ಯಮವಾಗಿದೆ. ಕೈಗಾರಿಕೆಗಳಲ್ಲಿ ಪ್ರಾರಂಭದಲ್ಲಿ ಏನಾದರೂ ಹೆಚ್ಚು ಉತ್ಪತ್ತಿ ಬಾರದೆ ಹೋದರೆ ಏನುಮಾಡುತ್ತಾರೆಂದರೆ, ಮೊದಲು ಪ್ರೋತ್ಸಾಹ ಕೊಡತಕ್ಕ ಕಾಲದಲ್ಲಿ Development rebate ಎಂದು ಸಹಾಯ ಮಾಡುತ್ತಾರೆ, ಹಾಗೆ ಆ ಕೈಗಾರಿಕೆ ಅಭಿವೃದ್ಧಿಗೆ ಬಾರದೆ ಹೋದರೆ ಅದಕ್ಕೆ ಬೇರೆ ರೀತಿಯಲ್ಲಿಯೂ ಸಹಾಯ ಮಾಡುತ್ತಾರೆ. ಆದರೆ ಕಾಫಿ ಉದ್ಯಮವನ್ನು ಒಂದು ಕಡೆ ಕೈಗಾರಿಕೆ ಎಂದು ಭಾವಿಸಿ, ಮತ್ತೊಂದು ಕಡೆ ವ್ಯವಸಾಯ ಎಂದು ಭಾವಿಸಿ ಎರಡು ಕಡೆಯಿಂದಲೂ ಬೆಂಬಲವನ್ನು ಕೊಡದೆ ಹೋದರೆ ಕಾಫಿ ಬೆಳೆ ಮತ್ತು ಕಾಫಿಯನ್ನು ಬೆಳೆಯತಕ್ಕ ರೈತರಿಗೆ ನಾವು ಏನು ಸಹಾಯ ಮಾಡಿದಂತಾಗುತ್ತದೆನ್ನುವುದನ್ನು ಮೊದಲು ಯೋಚನೆ ಮಾಡತಕ್ಕದ್ದು ಬಹಳ ಮುಖ್ಯವಾದ ವಿಷಯ. ಕಾಫಿ ಬೆಳೆಯತಕ್ಕಂಥ ತಜ್ಞರ ಒಂದು ಸಮಿತಿಮಾಡಿ ಅವರು ಏನು ಹೇಳುತ್ತಾರೆ ಎನ್ನುವುದನ್ನು ತಿಳಿದುಕೊಳ್ಳಬೇಕು. ದೇಶದ ಹಿತದೃಷ್ಟಿಯಿಂದ ಈ ವಿಷಯ ಯೋಚನೆ ಮಾಡತಕ್ಕದ್ದು ಅಗತ್ಯವಾಗಿದೆ.

ಸ್ವಾಮಿ, ಇದರಲ್ಲಿ ಇನ್ನೊಂದು ವಿಷಯ ತಂದಿದ್ದಾರೆ. ಅದು ಮರಗಳ ವಿಷಯ. ತನ್ನಿಂದ ತಾನೇ ಬೆಳೆದ ಮರಗಳು ಮತ್ತು ಬೆಳೆಸಿದಂಥ ಮರಗಳು ಎಂದು ವಿವರಣೆ ಇದೆ. ಮರಗಳು ಮತ್ತು ತೋಟಕ್ಕೆ ಇರುವ ಸಂಬಂಧ ಹೇಗಿದೆ ಎಂದರೆ ಮರ ಬಿಟ್ಟು ತೋಟ ಇಲ್ಲ, ತೋಟ ಬಿಟ್ಟು ಮರ ಇಲ್ಲ. 2 ಲಕ್ಷ ಬೆಲೆ ಬಾಳುವ ತೋಟದಲ್ಲಿಯ 5000 ಮರ ಕಡಿದು ಕೊಟ್ಟುಬಿಟ್ಟರೆ, ಆ ತೋಟದ ಬೆಲೆ ಒಂದು ಲಕ್ಷ ರೂಪಾಯಿಯಷ್ಟು ಇಳಿದು ಹೋಗುತ್ತದೆ. ಆದುದರಿಂದ ತೋಟ ಬೇರೆ, ಮರ ಬೇರೆ ಎಂದು ವಿಂಗಡಣೆ ಮಾಡಿರುವುದು ಸರಿಯಾಗಿಲ್ಲ. ಕಾಫಿ ತೋಟ ಮಾಡತಕ್ಕಂಥಾದು ಅಷ್ಟು ಸುಲಭವಾದ ವ್ಯವಸಾಯವಲ್ಲ. ಯಾಲಕ್ಕಿ ಮೆಣಸು ಅಡಿಕೆ ತೋಟ ಮಾಡುವುದು ಸಹ ಅಷ್ಟು ಸುಲಭವಲ್ಲ. ಮೂರು ನಾಲ್ಕು ವರ್ಷದಿಂದ ಯಾಲಕ್ಕಿ ಬೆಳೆಗೆ ರೋಗ ಬಂದು ಒಂದು ತೋಟದಲ್ಲಿ ಸಾವಿರ ಮಣ

ಬೆಳೆಯಾಗುವ ಕಡೆ ಒಂದು ನೂರು ಮಣಕ್ಕೆ ಇಳಿದು ಹೋಯಿತು. ಇಂಥ ಸಂದರ್ಭದಲ್ಲಿ ಯಾರೂ ಸಹಾಯಕ್ಕೆ ಬರಲಿಲ್ಲ. ಮರ ಕಡಿದು ವ್ಯವಸಾಯ ಮಾಡತಕ್ಕ ಉತ್ಪತ್ತಿಯು ಆದಾಯ ತೆರಿಗೆಗೆ ರಿಟ್ರೋಸ್ಪೆಕ್ಟಿವ್ ಆಗಿ ಉಪಯೋಗಿಸಿದರೆ ರೈತನ ಪರಿಸ್ಥಿತಿ ತುಂಬಾ ಕಷ್ಟವಾಗುತ್ತದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದುದು ಪ್ರಾಮುಖ್ಯವಾದ ಒಂದು ವಿಷಯವಾಗಿದೆ. 1958ನೇ ಇಸವಿಯಲ್ಲಿ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕಾನೂನು ಜಾರಿಗೆ ತಂದು ಟ್ಯಾಕ್ಸ್ ವಸೂಲು ಮಾಡಬೇಕೆಂದು ತೀರ್ಮಾನ ಮಾಡಿದರು. ಅದೇ ರೀತಿ ವಸೂಲ್ಮಾಡಿದರು. ಪ್ಲಾಂಟರ್ಸ್ ಹೋಗಿ ಅಪೀಲು ಮಾಡಿದ ಮೇಲೆ ಹಣ ವಾಪಸ್ಸು ಕೊಡಬೇಕೆಂದು ತೀರ್ಮಾನವಾಯಿತು. ಆದರೆ ಇದುವರೆಗೆ ರೈತರಿಗೆ ಹಣ ವಾಪಸು ಕೊಟ್ಟಿಲ್ಲ. ಆ ಹಣವನ್ನು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ ವಸೂಲ್ಮಾಡುವುದರಲ್ಲಿ ವಜಾ ಮಾಡಿದರೂ ಸಹ ರೈತರಿಗೆ ತುಂಬಾ ಸಹಾಯವಾಗುತ್ತದೆ. ಈಗ ಒಂದು ತಿದ್ದುಪಡಿ ತಂದು ಅಂಥ ಹಣದ ಬಗ್ಗೆ ಶೇಕಡ ನಾಲ್ಕರಷ್ಟು ಬಡ್ಡಿ ಸೇರಿಸಿ ಕೊಡಬೇಕು ಎಂದು ಮಾಡಿರುವುದು ಬಹಳ ಉಪಕಾರ ಮಾಡಿದ್ದಾರೆ. ಇದು ತುಂಬಾ ಶ್ಲಾಘನೀಯವಾದ ವಿಷಯ. ರೈತರಿಗೆ ತುಂಬಾ ಸಂತೋಷವಾಗಿದೆ ಎಂದು ನಾನು ನಂಬಿದ್ದೇನೆ.

ಇನ್ನು ತೋಟಬಲ್ಲಿ ಮರಗಳನ್ನು ಬೆಳೆಸಿದವರು ಯಾರು ? ರೈತ ಮರ ಬೆಳೆಸಿದ್ದಾನೆಂದು ಹೇಳಲಾಗುವುದು. ಮಲೆನಾಡಿನಲ್ಲಿ ಹಲಸಿನ ಮರ ಬೇಳೆಯಬೇಕಾದರೆ ಒಂದು ಹಲಸಿನ ಬೀಜ ಬಿದ್ದು ಮರ ಬೆಳೆದಿರುತ್ತದೆ. ಅದು ಹಾಗೆ ಹುಟ್ಟಿದ್ದು ಎಂದು ಸರಕಾರ ಒಪ್ಪುವುದಿಲ್ಲ. ಅಂಥ ಸಂದರ್ಭದಲ್ಲಿ ರೈತ ಪೇಚಾಟಕ್ಕೆ ಸಿಕ್ಕುತ್ತಾನೆ. ಮತ್ತು ಅವನಿಗೆ ಕಷ್ಟವಾಗುತ್ತದೆ. ಯಾಕಂದರೆ ರೈತನು ವಿದ್ಯಾವಂತನಾಗಿಲ್ಲ. ಅವನಿಗೆ ಇದನ್ನು ತಿಳಿಸಿ ಹೇಳುವುದಕ್ಕೆ ಬರುವುದಿಲ್ಲ ಆದ್ದರಿಂದ ರೈತನ ಹಿತ ದೃಷ್ಟಿಯನ್ನಿಟ್ಟುಕೊಂಡು ತೆರಿಗೆ ಹಾಕಬೇಕು. ಒಂದು ಉದಾಹರಣೆ ಹೇಳುವುದಾದರೆ ಮನೆಯಲ್ಲಿ ಮಕ್ಕಳಿಗೆ ಒಳ್ಳೇ ಹಾಲು ಕೊಡಬೇಕಾದರೆ ಉತ್ತಮ ಹಸು ಇರಬೇಕು. ತೆರಿಗೆ ವಸೂಲ್ಮಾಡಬೇಕು ಅಂದರೆ ಒಳ್ಳೇ ಹಾಲು ಕೊಡುವ ಹಸು ಇದ್ದ ಹಾಗೆ ರೈತರು ಇದ್ದಾರೆ. ಆದಕಾರಣ ರೈತನ ಹಿತ ದೃಷ್ಟಿ ಇರಬೇಕಾದುದು ಮುಖ್ಯ. ಈ ಮಸೂದೆಗೆ ನಾನು ಬೆಂಬಲ ಕೊಡುತ್ತೇನೆ. ನಾನು ಸೂಚಿಸಿರುವ ಅಂಶಗಳನ್ನು ವಿಮರ್ಶೆ ಮಾಡಬೇಕು. ಕೊನೆಯದಾಗಿ ಹೇಳುವುದಾದರೆ, ಶೇಕಡ ಎರಡೂವರೆ ಇದ್ದುದನ್ನು ಶೇಕಡ 10 ಎಂದು ಮಾಡಬೇಕು. ಅದರಿಂದ ರೈತರಿಗೆ ಸಹಾಯವಾಗುತ್ತದೆ. ಮತ್ತು ರಿಟ್ರೋಸ್ಪೆಕ್ಟಿವ್ ಆಗಿ ಮಾಡಿರುವುದನ್ನು ತೆಗೆದು ಹಾಕಬೇಕು, ಅಲ್ಲದೆ ರೈತರಿಗೆ ಬರತಕ್ಕದ್ದಕ್ಕೆ ಸಹಾಯ ಮಾಡಬೇಕು. ಈ ಮಸೂದೆಗೆ ಬೆಂಬಲ ಕೊಟ್ಟು ಸ್ವಾಗತಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸ್ವಾಮಿ, ಈಗ ನಮ್ಮ ಮುಂದೆ ಇರತಕ್ಕಂಥ ಈ ವ್ಯವಸಾಯ ತೆರಿಗೆ ತಿದ್ದುಪಡಿ ಮಸೂದೆ ಬಗ್ಗೆ ಹೆಚ್ಚು ಕಾಲ ತೆಗೆದುಕೊಳ್ಳದೆ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಸ್ವಾಮಿ, ಇವತ್ತಿನ ದಿವಸ ರೈತನ ಮೇಲೆ ಹೊರಿಸಿದಂಥ ತೆರಿಗೆಭಾರ ಎಷ್ಟಿದೆ ಎಂಬುದನ್ನು ಯೋಚನೆ ಮಾಡಬೇಕು. ಈಗ ಪುನಃ ತಿದ್ದುಪಡಿ ಮಸೂದೆ ತಂದು ತೆರಿಗೆ ಹೊರೆ ಹೊರಿಸುತ್ತಿದ್ದೀರಿ. ನಿಜವಾಗಿಯೂ ತೆರಿಗೆ ಹೊರೆ ಭಾರದಿಂದ ರೈತ ಕಷ್ಟಕ್ಕೆ ಸಿಕ್ಕಿದ್ದಾನೆ. ಈ ಭಾರ ಹೊರುವ ಶಕ್ತಿ ಇಲ್ಲದೇ ಇರುವ ಮೂಲಕ ಬಹಳ ಕಷ್ಟದಿಂದ ಜೀವನ ಮಾಡುತ್ತಿದ್ದಾನೆ. ಸೇಲ್ಸ್‌ಟ್ಯಾಕ್ಸ್ ಬಿಲ್ಲು ಪಾಸು ಮಾಡಿ ತೆರಿಗೆ ಭಾರ ಹೆಚ್ಚು ಮಾಡಲಾಯಿತು. ಸ್ವಾಮಿ, ಕ್ಲಾಜು 3 ರಲ್ಲಿ ತಿದ್ದುಪಡಿ ಮಾಡಿರುವುದನ್ನು ನೋಡಿದರೆ, ಒಂದು ಎಕರೆಗೆ ಇಷ್ಟು ಖರ್ಚಾಗುತ್ತದೆ ಎಂದು ಯಾವ ಆಧಾರದ ಮೇಲೆ ನಿಗದಿ ಮಾಡಿದ್ದೀರಿ, ಎಂಬುದು ಅರ್ಥವಾಗುವುದಿಲ್ಲ. ಅನುಭವವಿಲ್ಲದವರು ಇದನ್ನು ನಿಗದಿ ಮಾಡಿದ್ದಾರೆಂದು ಅರ್ಥವಾಗುತ್ತದೆ. ಎಗ್ಸೆಂಪ್ಷನ್ ಕೊಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ರಿಸರ್ಚ್ ಸ್ಟೇಷನ್ನಿನಲ್ಲಿ ವಿಚಾರ ಮಾಡಿಲ್ಲ ಎಂದು ಕಾಣುತ್ತದೆ. ಯಾಕಂದರೆ ಶೇಕಡ 30 ರಷ್ಟು ಹೊರಟು ಹೋಗುತ್ತದೆ. ಸರಿಯಾದ ಅಂಕಿಅಂಶಗಳ ಆಧಾರವಿಲ್ಲದೆ ಇದನ್ನು ನಿರ್ಣಯ ಮಾಡಲಾಗಿದೆ. ಆದ್ದರಿಂದ ಇದನ್ನು ಪುನಃ ಪರಿಶೀಲನೆಮಾಡಿ ನಿಗದಿ ಮಾಡುವುದು ಸೂಕ್ತ ಎಂದು ಹೇಳುತ್ತೇನೆ.

ಎಂದಿನಿಂದ ಟ್ಯಾಕ್ಸ್ ಲೆವಿ ಮಾಡುತ್ತೀರಿ ? ಅಡಿಕೆ ತೋಟ ಕನಿಷ್ಠಪಕ್ಷ ಬೆಳೆ ಬರಬೇಕಾದರೆ 8 ವರ್ಷವಾದರೂ ಬೇಕಾಗುತ್ತದೆ. ಆದ್ದರಿಂದ ಯಾವತ್ತಿನಿಂದ ಟ್ಯಾಕ್ಸ್ ವಸೂಲು ಮಾಡುತ್ತೀರಿ ಎಂಬುದನ್ನು ವಿಶದಪಡಿಸಬೇಕು. ಒಂದು ಎಕರೆ ಅಡಿಕೆ ತೋಟ ಮೇನ್‌ಟೇನ್ ಮಾಡಬೇಕಾದರೆ ಮಿನಿಮಂ 6 ಸಾವಿರ ರೂಪಾಯಿ ಬೇಕಾಗುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ಆಗತಕ್ಕ ಖರ್ಚನ್ನು ಕಳೆಯದಿದ್ದರೆ ರೈತನಿಗೆ ಬಹಳ ಕಷ್ಟವಾಗುತ್ತದೆ. ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಈ ರೀತಿ ಆತುರದಿಂದ ಮಾಡಿದರೆ ಅವರಿಗೆ ನೋವಾಗಬಹುದು ಎಂದು ನಾನು ತಮ್ಮಲ್ಲಿ ಹೇಳಿಕೊಳ್ಳುತಿದ್ದೇನೆ.

ಟಿಂಬರ್ ಬಗ್ಗೆ ರಿಟ್ರಾಸ್ಪೆಕ್ಟೀವ್ ಇಫೆಕ್ಟ್ ಕೊಡುತ್ತೇವೆ ಎಂದು ಹೇಳಿದಿರಿ, ಅದು ಸರಿಯಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಂ. ದೇವಯ್ಯ (ಪೆರಿಯಾಪಟ್ಟಣ).—ಮಾನ್ಯ ಅಧ್ಯಕ್ಷರೇ, ನಾನು ನಿಮ್ಮ ಈ ಮಸೂದೆಗೆ ಒಪ್ಪಿಗೆ ಕೊಡುತ್ತಾ ಕೆಲವು ಸಲಹೆಗಳನ್ನು ಕೊಡಬೇಕೆಂದು ಅಪೇಕ್ಷೆಪಡುತ್ತೇನೆ. ಏಕೆಂದರೆ ನಾವು ಸಲಹೆ ಕೊಟ್ಟಿದ್ದೇ ಆದರೆ ಅರ್ಥಿಕ ಮಂತ್ರಿಗಳು ಅವನ್ನು ಒಪ್ಪಿಕೊಳ್ಳುತ್ತಾರೆ ಎಂಬ ನಂಬಿಕೆ ನನಗಿದೆ. ತಮ್ಮ ತಿದ್ದುಪಡಿಯಲ್ಲಿ ಇಂಪೆಚ್ಯೂರ್ ಪ್ಲ್ಯಾಂಟ್ಸ್‌ನಲ್ಲಿ ಟೀಗೆ ಮಾತ್ರ ವಿನಾಯಿತಿ ಕೊಟ್ಟು ಕಾಫಿ, ಯಾಲಕ್ಕಿ ಇವುಗಳು ಯಾವುದಕ್ಕೂ ಕೂಡ ವಿನಾಯಿತಿ ಕೊಟ್ಟಿಲ್ಲ. ಇದು ಏಕೆ ಎನ್ನುವುದು ಅರ್ಥವಾಗುವುದಿಲ್ಲ. ಮೈಸೂರು ಸಂಸ್ಥಾನದಲ್ಲಿ ನೂರಕ್ಕೆ 70 ಭಾಗ ಕಾಫಿ ಬೆಳೆಯುತ್ತಾರೆ ಎಂದ ಮೇಲೆ ಕಾಫಿ ಬೆಳೆಯತಕ್ಕವರಿಗೆ ಕೊಡಬೇಡವೇ? ಅದನ್ನು ಬಿಟ್ಟು ಟೀಗೆ ಉತ್ತೇಜನ ಕೊಡುತ್ತಾ ಇದ್ದೀರಿ. ಇದು ಯಾವ ಧರ್ಮ, ಯಾವ ನ್ಯಾಯ ಗೊತ್ತಾಗುವುದಿಲ್ಲ. ಇದಕ್ಕೆ ಕಾರಣ ಇದ್ದರೆ ದಯವಿಟ್ಟು ಹೇಳಬೇಕು. ನಾನಾದರೂ ಅದು ಏನು ಕಾರಣ ಎಂಬುದನ್ನು ತಿಳಿದುಕೊಳ್ಳಲಿಕ್ಕೆ ಅಸಮರ್ಥನಾಗಿದ್ದೇನೆ. ಕಾಫಿ ವ್ಯವಸಾಯಗಾರರು ಯಾವತ್ತೂ ಕಷ್ಟದಲ್ಲಿರುವವರು ಎಂಬುದನ್ನು ಇವತ್ತೂ ಕೂಡ ತಾವು ನೋಡಬಹುದು. ನಾನು ಈ ವ್ಯವಸಾಯದಲ್ಲಿ ನಮ್ಮ ಅಪ್ಪ ಅಜ್ಜನ ಕಾಲದಿಂದಲೂ ಇದ್ದೇನೆ, ಅದು ಹೇಗೆ ಬೆಳೆಯಾಗುತ್ತದೆ ಎಂಬುದನ್ನು ನೋಡುತ್ತಾ ಇದ್ದೇನೆ. ಇದು 6ಕ್ಕೆ ಏರುವುದಿಲ್ಲ 3ಕ್ಕೆ ತಗ್ಗುವುದಿಲ್ಲ, ಗರಿಕೆ ಹುಲ್ಲು ಇದ್ದ ಹಾಗೆ. ಕೈಗಾರಿಕೆಗಳಲ್ಲಿ ನಿರತರಾಗಿರುವವರು 2-3ವರ್ಷದಲ್ಲಿ ಶ್ರೀಮಂತರಾಗುತ್ತಾರೆ ಅದೇ ಈ ವ್ಯವಸಾಯದಲ್ಲಿ ಕಷ್ಟ ಹೆಚ್ಚು ಇದೆಯೇ ವಿನಹ ಆದಾಯ ಇಲ್ಲ. ನಾನು ಟ್ಯಾಕ್ಸ್ ಕೊಡಲಿಕ್ಕೆ ಹಿಂಜರಿಯುತ್ತಿದ್ದೇನೆ ಎಂದಲ್ಲ, ಟ್ಯಾಕ್ಸ್ ಕೊಡಲು ತಯಾರಾಗಿದ್ದೇನೆ. ಆದರೆ ಇಲ್ಲಿರತಕ್ಕ ಕಷ್ಟ ಏನಿದೆ ಎಂಬುದನ್ನು ತಾವು ಸ್ವಲ್ಪ ವಿಚಾರಮಾಡಿ ನೋಡಬೇಕು. 60, 70 ಇಂಚು ಮಳೆ ಬೀಳುವ ಕಡೆ, ಹುಲಿ, ಕರಡಿಗಳ ಮಧ್ಯೆ ಹೋರಾಡಿ ಕಷ್ಟಪಡುವವರಿಗೆ ನೀವು ರಿಯಾಯಿತಿ ತೋರಿಸದಿದ್ದರೆ ಅದು ಯಾವ ಧರ್ಮ? ಕಾಫಿ ಹೆಚ್ಚಾಗಿ ಬೆಳೆಯಬೇಕು ಇದರಿಂದ ನಮಗೆ ವಿದೇಶಿ ವಿನಿಮಯ ಸಿಕ್ಕುತ್ತದೆ, 60 ಸಾವಿರ ಟನ್ ಬೆಳೆಯುತ್ತಾ ಇರುವುದನ್ನು ಒಂದು ಲಕ್ಷ ಟನ್‌ವರೆಗೂ ಹೆಚ್ಚಿಸಬೇಕೆಂದು ಹೇಳುತ್ತಾ ಇರುವಾಗ ನಮ್ಮ ಸರ್ಕಾರದವರು ಇದ್ದಕ್ಕೆ ಹೆಚ್ಚಿನ ಉತ್ತೇಜನ ಕೊಡಬೇಡವೇ ಎಂದು ನಾನು ಕೇಳುತ್ತಾ ಇದ್ದೇನೆ. 10 ಎಕರೆ ಕಾಡು ಇರುವ ಕಡೆ ಇನ್ನೆರಡು ಮೂರು ಎಕರೆ ಕಾಡು ಕೊಟ್ಟರೆ ಅದನ್ನು ವ್ಯವಸಾಯ ಮಾಡಲಿಕ್ಕೆ ಆಗತಕ್ಕ ಖರ್ಚು ಕೊಡಿ ಎಂದರೆ ಕೊಡುವುದಿಲ್ಲ. ಒಂದು ಕಡೆ ಇಂಡಸ್ಟ್ರಿ ಡೆವಲಪ್ ಮಾಡಬೇಕೆಂದು ಹೇಳುತ್ತೀರಿ, ಹೆಚ್ಚು ಉತ್ಪನ್ನ ಮಾಡಬೇಕೆಂದು ಹೇಳುತ್ತೀರಿ. ಅದನ್ನ ಮಾಡಲಿಕ್ಕೆ ಹೋದರೆ ಅದಕ್ಕೆ ಆಗತಕ್ಕ ಖರ್ಚು ಕೊಡುವುದಿಲ್ಲ. ಎಂದ ಮೇಲೆ ಅವನು ಯಾವ ರೀತಿ ಯಾವ ಮಾರ್ಗ್ಯಾಡಿಯಿಂದ ಹಣ ತೆಗೆದುಕೊಂಡು ಬಂದು ಹೆಚ್ಚು ಲಾಭವಿಲ್ಲದೆ ಯಾವ ಮಮತೆಯಿಂದ ಈ ಕಸಬನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತಾನೆ? ಇದರಲ್ಲಿ ಲಾಭ ಬಂದದ್ದೇ ಆದರೆ ಅವನು ಏನೂ ತೊಂದರೆ ಇಲ್ಲದೆ, ಬೇಸರವಿಲ್ಲದೆ ಉತ್ಪನ್ನಮಾಡಿ ಕೊಡುತ್ತಾನೆ. ಒಂದು ಪ್ರಶ್ನೆಗೆ ಉತ್ತರವಾಗಿ ಅಗ್ರಿಕಲ್ಚರಲ್ ಇನ್‌ಕಂ-ಟ್ಯಾಕ್ಸ್ ಹೆಚ್ಚಾಗಿ ಕೊಡಗು ಮತ್ತು ಚಿಕ್ಕಮಗಳೂರಿನಿಂದ ಬಂದಿದೆ ಎಂದು ಹೇಳಿದರು ಎಂದಮೇಲೆ ತಾವು ಸ್ವಲ್ಪ ಯೋಚನೆ ಮಾಡಬೇಕು. ಕಾಫಿ ಬೆಳೆಗಾರರು ಯಾರಿಗೂ ಮೋಸ ಮಾಡಲಿಕ್ಕೆ ಆಗುವುದಿಲ್ಲ. ಒಂದು ಎಕರೆಗೆ ಇಷ್ಟೆಲ್ಲ ಖರ್ಚಾಗುತ್ತದೆ ಎಂಬ ಲೆಕ್ಕ ಇದೆ, ಅದಕ್ಕಿಂತ ಹೆಚ್ಚು ತೋರಿಸಿದರೆ ಸರ್ಕಾರದವರು ಒಪ್ಪಿಕೊಳ್ಳುವುದಿಲ್ಲ, ಅದು ಒಂದು ಸ್ಥಿಮಿತ ರೀತಿಯಲ್ಲಿ ಇದೆ. ಸರ್ಕಾರದವರಿಗೆ ಏನನ್ನು ಕೊಡಬೇಕೋ ಅದನ್ನು ವಂಚನೆಯಿಲ್ಲದೆ ಕೊಡಬೇಕು ಕೊಡುತ್ತಾನೆ. ಹೀಗಿರುವಾಗ ನಿಷ್ಠೆಯಿಂದ ವ್ಯವಸಾಯ ಮಾಡತಕ್ಕ ಕಾಫಿ ತೋಟದವರಿಗೆ ನೀವು ಏಕೆ ತೊಂದರೆಯನ್ನುಂಟುಮಾಡುತ್ತೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇಡೀ ಹಿಂದೂಸ್ತಾನದಲ್ಲೇ ಅತಿ ಹೆಚ್ಚು ಕಾಫಿ ಬೆಳೆಯತಕ್ಕ ಪ್ರದೇಶ ನಮ್ಮ ಸಂಸ್ಥಾನದಲ್ಲಿರುವಾಗ ಈ ವ್ಯವಸಾಯದಲ್ಲಿರುವವರಿಗೆ ಹೆಚ್ಚು ಉತ್ಪನ್ನ ಮಾಡಲಿಕ್ಕೆ ಯಾವುದಾದರೂ ಒಂದು ಆಶೆ ಇರಬೇಕೋ ಬೇಡವೊ? ಅವರಿಗಿರತಕ್ಕ ಒಂದು ಆಶೆಯನ್ನು ಕೊಂಡು ಬಿಟ್ಟು ಉತ್ತೇಜನ ಕೊಡದಿದ್ದ ಪಕ್ಷದಲ್ಲಿ ಉತ್ಪನ್ನ ಹೇಗೆ ಹೆಚ್ಚಾಗಬೇಕು. ಆದ್ದರಿಂದ ಈ ವಿಷಯವನ್ನು ತಾವು ಸ್ವಲ್ಪ ವಿಚಾರ ಮಾಡಬೇಕೆಂದು ನಾನು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ. ಕಾಫಿ ತೋಟ ಮನುಷ್ಯ ಇದ್ದ ಹಾಗೆ, ವಯಸ್ಸಾದ ಮೇಲೆ ಅದಕ್ಕೆ ಶಕ್ತಿ ಇರುವುದಿಲ್ಲ 40 ವರ್ಷ ಆದ ಮೇಲೆ ಅವನು ಆ ಗಿಡಗಳನ್ನೆಲ್ಲಾ ಕಡಿದು ಹಾಕಬೇಕು. 40 ವರ್ಷ ಆದನಂತರ ಕಾಫಿ ತೋಟ ಫಸಲು ಕೊಡುವುದಿಲ್ಲ ನಂತರ ಅವನು ಅದನ್ನು ತೆಗೆದು ಹೊಸ ಗಿಡ ನೆಡುತ್ತಾನೆ, ಉತ್ಪನ್ನ ಮಾಡುತ್ತಾನೆ ಸರ್ಕಾರಕ್ಕೆ ಕೊಡಬೇಕಾದ್ದನ್ನು ಕೊಡುತ್ತಾನೆ. ಹೊಸ ತೋಟ ಮಾಡಿದರೂ ಖರ್ಚು ಕೊಡುವುದಿಲ್ಲ, ಎಂದರೆ ತಮಗೇನು ಫಾಯ್ದೆ ಬಂದಹಾಗಾಯಿತು? ಇದು ಯಾವ ನ್ಯಾಯ? ಸರ್ಕಾರಕ್ಕೂ ನಷ್ಟ. ಅವನಿಗೂ ನಷ್ಟ. ಆ ದೃಷ್ಟಿಯಿಂದ ಇದನ್ನು ನೋಡಬೇಕು. ಬೆಳೆಯುವವನಿಗೆ ಬೇಜಾರು ಮಾಡಿದರೆ ಅವನಿಂದ ಬರತಕ್ಕ ಉತ್ಪನ್ನ ಸರ್ಕಾರಕ್ಕೆ ಬರಲಿಕ್ಕಿಲ್ಲ. ಚಿನ್ನದ ಮೊಟ್ಟೆಯನ್ನು ಹಾಕತಕ್ಕ ಬಾತು ಕೋಳಿಯನ್ನು ಕೊಂದು ಹಾಕಿದ ಹಾಗೆ ಆಗುತ್ತದೆ.

ಅಂಥ ಸ್ಥಿತಿಗೆ ಬರಬಾರದೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಈ ತಿದ್ದುಪಡಿಯಲ್ಲಿ ಇದನ್ನು ಒಂದು ಕಮರ್ಷಿಯಲ್ ಕ್ರಾಪ್ ಎಂದು ಹೇಳಿ ಇದರ ಮೇಲೆ ತೆರಿಗೆ ಹಾಕಬೇಕೆಂದು ಹೊರಟಿದ್ದಾರೆ. ಆದರೆ ಇದು ನನಗೆ ಅರ್ಥವಾಗುತ್ತಿಲ್ಲ. ಆದರೆ ಇದು ಕಮರ್ಷಿಯಲ್ ಕ್ರಾಪೇ ಇರಬಹುದು. ಒಂದು ಮರ ಬೆಳೆಯಬೇಕಾದರೆ 60-70 ವರ್ಷ ಬೇಕು. ಈಗ ಕಾಫಿ ತೋಟದವರ ಪರಿಸ್ಥಿತಿ ಪೂರ್ತಿ ಕೆಟ್ಟಿದೆ. ಲಾಭ ಬಂದರೇನೋ ಪರವಾಇಲ್ಲ, ನಷ್ಟವಾದರೆ ಅವನ ಗತಿಯೇನು ? ಮಳೆ ಬೆಳೆಗಳು ಹೋದರೆ ಅವನ ಗತಿಯೇನು ? ಸಕಾಲಕ್ಕೆ ಮಳೆ ಬೀಳುತ್ತಿಲ್ಲ. ಆದರೂ ಕಷ್ಟಪಟ್ಟು ಸಾಲಮಾಡಿ ಮಾಡಿರುತ್ತಾನೆ. ಮುಂದೆ ಇವರ ಗತಿ ಏನಾಗುತ್ತೆಂದು ಹೇಳುವುದು ಬಹಳ ಕಷ್ಟ. ಅಂತೂ ಈಗ ಬೀಟೆ ಮರಕ್ಕೆ ಕೊಡಲಿ ಪೆಟ್ಟನ್ನು ಹಾಕಿದ್ದೀರಿ. ಇದನ್ನು ತಾವು ಇನ್ನೊಮ್ಮೆ ವಿಚಾರ ಮಾಡಬೇಕೆಂದು ಹೇಳುತ್ತೇನೆ.

4-30 P.M.

ಇನ್ನು ಪಾಲುದಾರರ ವಿಚಾರದಲ್ಲಿ ಒಬ್ಬ ಮೆನೇಜರನನ್ನು ಇಟ್ಟುಕೊಂಡರೆ ಆತನಿಗೆ ಸಂಬಳ ಕೊಡಬಹುದೆಂದು ಹೇಳಿ, ಮಾಲೀಕ ಆ ಕೆಲಸ ಮಾಡಿದರೆ ಸಂಬಳ ಇಲ್ಲ ಎಂದು ಹೇಳುತ್ತಾರೆ' 'ತಾ ಮಾಡುವುದುತ್ತಮ, ಆಳು ಮಾಡುವುದು ಹಾಳು ಎಂದು ಹೇಳುತ್ತಾರೆ. ಏನೇ ಆಗಲಿ ನಾನು ಈ ತಿದ್ದುಪಡಿಯನ್ನು ಪುರಸ್ಕರಿಸಿ ನನ್ನ ಮಾತುಗಳನ್ನ ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಅಧ್ಯಕ್ಷರೆ; ನಾನು ನಿನ್ನೆತಾನೆ ಸೇಲ್ ಟ್ಯಾಕ್ಸ್ ಆಕ್ಟಿನ ಮೇಲೆ ಮಾತನಾಡುತ್ತ, ಈ ರೀತಿ ಹಣಕಾಸುಗಳ ವಿಚಾರದಲ್ಲಿ ಪದೇ ಪದೇ ತಿದ್ದುಪಡಿಗಳನ್ನು ತರುತ್ತಿರುವುದರಿಂದ ಜನರ ಮೇಲೆ ಇದು ಒಂದು ದುಷ್ಪರಿಣಾಮವನ್ನು ಉಂಟು ಮಾಡುತ್ತದೆಂದು ಹೇಳಿದ್ದೆನು. ಈ ಹಿಂದೆ ಇದರಲ್ಲಿ ನಾವು ಯಾವುಯಾವುದನ್ನು ಬಿಟ್ಟಿದ್ದೆವೊ ಅದನ್ನೆಲ್ಲ ಮತ್ತೆ ಅಪ್ರದಕ್ಷಿಣೆ ಮಾಡಿ ಇದರಲ್ಲಿ ಸೇರಿಸಿರುತ್ತಾರೆ. ಈ ರೀತಿ ಸರ್ಕಾರದವರು ಜನಗಳಿಂದ ಹಣವನ್ನು ವಸೂಲು ಮಾಡಿ ಜನರಿಗೆ ಅದರಿಂದ ಏನು ಉಪಕಾರವನ್ನು ಮಾಡಿದ್ದೀರಿ ಎಂದು ಕೇಳುತ್ತೇನೆ ? ಯಾವ ಒಳ್ಳೇ ಕೆಲಸವನ್ನು ಸಾಧಿಸಿದ್ದೀರಿ ? ಈ ವಿಚಾರದಲ್ಲಿ ಸರ್ಕಾರದವರು ಸಮರ್ಪಕವಾದ ಉತ್ತರವನ್ನು ಕೊಡುವುದಕ್ಕೆ ಸಿದ್ಧರಾಗಿದ್ದರೆ ಜನ ತೆರಿಗೆ ಕೊಡಲು ಅವರೂಕೂಡ ಸಿದ್ಧರಾಗಿರುತ್ತಾರೆ. ಈ ದಿವಸ ಯಾವ ರಾಜ್ಯದಲ್ಲಿ ವ್ಯವಸಾಯವು ಪೂರಾ ಹಿಂದೆ ಬಿದ್ದಿದೆಯೋ ಅಂಥ ವ್ಯವಸಾಯವನ್ನು ಅವಲಂಬಿಸಿರತಕ್ಕ ಜನರ ಮೇಲೆ ತಾವು ಈ ದಿವಸ ಒಂದು ನೆಪ ಹೇಳಿಕೊಂಡು, ಈ ರೀತಿ ತೆರಿಗೆಗಳನ್ನು ಹೇರತಕ್ಕದ್ದು ಸರಿಯಲ್ಲ ಎಂದು ಹೇಳುತ್ತೇನೆ. ತಾವು ವರ್ತಕರ ಮೇಲೆ ತೆರಿಗೆ ಹಾಕಿ. ಬೇಡವೆಂದು ಹೇಳುವುದಿಲ್ಲ. ವರ್ತಕನು ನಮ್ಮಿಂದ ಕಸಿದುಕೊಂಡದ್ದನ್ನು ಸರ್ಕಾರಕ್ಕೆ ಕೊಡುತ್ತಾನೆ. ರೈತ ತಾನು ಬೆಳೆದುದ್ದರಲ್ಲಿ ತೆರಿಗೆಯನ್ನ ಕೊಡಬೇಕಾಗಿದೆ. ಆದರೆ, ಇದು ವಿವೇಕವೊ, ಅವಿವೇಕವೋ ನನಗೆ ಗೊತ್ತಾಗುವುದಿಲ್ಲ. ಅಂತೂ ಸರ್ಕಾರಕ್ಕೆ ಹಣಬೇಕು. ಸರ್ಕಾರದವರು ಮಾತೆತ್ತಿದರೆ ನೀವು ಯಾವುದಕ್ಕೂ ತೆರಿಗೆ ಹಾಕುವುದು ಬೇಡ ಎಂದು ಹೇಳುತ್ತಿರುವುದರಿಂದ ನಾವು ರಸ್ತೆ, ಕೆರೆ, ಆಸ್ಪತ್ರೆ, ಇತ್ಯಾದಿ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿಬಿಡುತ್ತೀರಿ. ಈ ದಿವಸ ಯಾರಿಂದ ಹಣ ಬರಲು ಸಾಧ್ಯವಿದೆಯೋ ಅಂಥವರಿಂದ ವಸೂಲು ಮಾಡಿ. ನಾನು ಬೇಡ ಎಂದು ಹೇಳುವುದಿಲ್ಲ. ಈ ದಿವಸ ಯಾರು ಯಾರು ವರಮಾನ ತೆರಿಗೆಯನ್ನ ಸರಿಯಾಗಿ ಕೊಡದೆ ತಪ್ಪಿಸಿಕೊಂಡಿದ್ದಾರೋ ಅಂಥವರಿಂದಸರ್ಕಾರಕ್ಕೆ ಬರಬೇಕಾಗಿರುವ ಬಾಕಿಯನ್ನು ವಸೂಲು ಮಾಡಿದರೆ ಈಗ ಇಂಥ ತೆರಿಗೆಗಳನ್ನು ಹಾಕಬೇಕಾದ ಅವಶ್ಯಕತೆಯೇ ಇಲ್ಲ ಎಂದು ಹೇಳುತ್ತೇನೆ. ಇವರು ಒಂದು ಕಡೆ ದೇಶದಲ್ಲಿ ಮೇಜರ್ ಮತ್ತು ಮೈನರ್ ಇರಿಗೇಷನ್ ಸ್ಕೀಮುಗಳನ್ನು ಮಾಡಿ ದೇಶದಲ್ಲಿ ಉತ್ಪತ್ತಿಯನ್ನು ಹೆಚ್ಚಿಸಬೇಕೆಂದು ಹೇಳುತ್ತಿದ್ದಾರೆ. ಹೀಗಿರುವಾಗ ರೈತನ ಮೇಲೆ ಹೀಗೆಲ್ಲ ದಿನಕ್ಕೊಂದು ತೆರಿಗೆ ವಿಧಿಸುತ್ತ ಹೋದರೆ ಇವರು ನಾಲ್ಕಾರು ಯೋಜನೆಗಳನ್ನು ಮಾಡಿದರೂ ನಾವು ಸ್ವಪರಿಪೂರ್ಣತೆಯನ್ನು ಪಡೆಯಲು ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಇವರು ದೇಶಕ್ಕೆ ಯಾವ ಕಲ್ಯಾಣವನ್ನು ಮಾಡದಿದ್ದರೂ ಹೋಗಲಿ, ಭೂಮಿಯನ್ನೇ ನಂಬಿಕೊಂಡಿರತಕ್ಕವರ ಮೇಲೆ ಹೀಗೆಲ್ಲ ತೆರಿಗೆ ಹಾಕಬಾರದೆಂದು ಹೇಳುತ್ತೇನೆ. ಆದರೆ ನನಗೆ ಈ ತಿದ್ದುಪಡಿಯ ಹಿನ್ನೆಲೆ ಗೊತ್ತಿದೆ. ಆ ಹೈಕೋರ್ಟಿನವರು ಕೊಟ್ಟಿರತಕ್ಕ ಆದೇಶವನ್ನು ತಿರುವು ಮುರುವು ಮಾಡಲು, ಈ ಶಾಸನ ಸಭೆಯವರಿಗೆ ಒಂದು ಅವಕಾಶವಿರುವುದರಿಂದ ಈಗ ಇದನ್ನು ಮಾಡಲು ಹೊರಟದ್ದಾರೆ. ಹೈಕೋರ್ಟ್ ತೀರ್ಪು ನಿಮಗೆ ಅನುಕೂಲವಾಗಿರಬಹುದು. ಆದರೆ ಸತ್ತುಹೋದ ವಿಚಾರದ ಮೇಲೆ ಈಗ ಮತ್ತೆ ತೆರಿಗೆ ವಿಧಿಸತಕ್ಕದ್ದು ಯಾವ ನ್ಯಾಯ ? ಈ ಅಮೆಂಡ್‌ಮೆಂಟ್ 2ರಲ್ಲಿ ಈ ಕಾನೂನು 1963ನೆಯ ಏಪ್ರಿಲ್ ಒಂದನೆಯ ತಾರೀಖಿನಿಂದಲೇ ಜಾರಿಗೆ ಬಂದಂತೆ ಭಾವಿಸಬೇಕೆಂದು ಹೇಳಲಾಗಿದೆ. ಈ ರೀತಿ ಏಕೆ ಹೇಳುತ್ತಿದ್ದಾರೆಂಬುದು ನನಗೆ ಗೊತ್ತಿದೆ. ಇದು ಲೆಕ್ಕಾಚಾರಕ್ಕೆ ಅನುಕೂಲವಿರುತ್ತೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಎಂದು ಹೇಳಬಹುದು. ದೇಶದಲ್ಲಿ ಹಣಕಾಸಿನ ಪರಿಸ್ಥಿತಿ ಕೆಟ್ಟಿರುವಾಗ, ಹಣಕಾಸಿನ ಮಂತ್ರಿಗಳ ತಲೆ ಕೂಡ ಕೆಡಲೇಬೇಕು. ಆಗ ಇವರು ಇಂಥ ವಾಮ ಮಾರ್ಗವನ್ನು ಹಿಡಿಯಲೇಬೇಕು. ಸರ್ಕಾರದವರು ಹೀಗೆ ರಿಟ್ರಾಸ್ಪೆಕ್ಟೀವ್ ಎಫೆಕ್ಟ್ ಆಗಿ ಬಿಲ್ಲುಗಳಿಗೆ ಜೀವದಾನ ಮಾಡುತ್ತಾ ಹೋದರೆ ರೈತರು ಲೆಕ್ಕಗಳನ್ನಾದರೂ ಹೇಗೆ ಇಡಲು ಸಾಧ್ಯ? ಇಂಥ ಒಂದು ಅವಕಾಶವನ್ನುಂಟುಮಾಡಿಕೊಂಡು, ಆ ಸೇಕ್ಕಾರನೋ ಅಥವಾ ಶ್ಯಾನುಭೋಗನೋ ಸೇರಿಕೊಂಡು 10 ಪಲ್ಲ ಆಗಿದ್ದ ಕಡೆ 20 ಪಲ್ಲ ಎಂದು ಲೆಕ್ಕ ಬರೆದು ಕಳಿಸಿದರೆ, ಅದನ್ನು ರೈತ ಸರಿಯಲ್ಲ ಎಂದು ಹೇಗೆ ರುಜುವಾತು ಮಾಡಬೇಕು ? ಇದನ್ನೆಲ್ಲ ತಾವು ಅರ್ಥಮಾಡಿಕೊಳ್ಳಬೇಕು. ಹೋದ ಅಧಿವೇಶನದ ಕಾಲಕ್ಕೇ ಹಾರ್‌ವೆಸ್ಟ್ ಸೀಜನ್ ಮುಗಿದಿದೆ.

ಶ್ರೀ ಬಿ. ಡಿ. ಜತ್ತಿ.—62-63ರದನ್ನು 64ರಲ್ಲಿ ಅಸೆಸ್ ಮಾಡುವುದಕ್ಕೆ ಬರುತ್ತದೆ.

† **ಶ್ರೀ ಸಿ. ಜೆ. ಮುಕ್ಕಣ್ಣಪ್ಪ.**—ನಾನು ಹೇಳುತ್ತಿರುವುದು ರೈತ ತನ್ನ ಫಸಲನ್ನ ತೆಗೆದು ಮಾಡಿರುವುದಕ್ಕೆ ಅವನ ಹತ್ತಿರ ಲೆಕ್ಕವಿಲ್ಲ. ಲೆಕ್ಕ ಕೊಡು ಎಂದು ತಾವು ಕೇಳಿದರೆ ಅವನೆಲ್ಲಿಂದ ಕೊಡುತ್ತಾನೆ? ತಮಗೇ ತಿಳಿದಿರುವಂತೆ ಊರಿನಲ್ಲಿರುವ ಹಳೇ ಶ್ಯಾನುಭೋಗ ಪಹಣಿ ಲೆಕ್ಕ ಬರೆಯುವಾಗ 10 ಎಕರೆಗಳಲ್ಲಿ ಔಡಲ (ಎಂದರೆ ಕ್ಯಾಸ್ಟರು ಸೀಡು) ಇಪ್ಪತ್ತು ಪಲ್ಲದಷ್ಟು ಬೆಳೆ ಮಾಡಿರುತ್ತಾನೆಂದರೆ ಅವನು ಮಾರ್ಕೆಟ್ಟಿಗೆ ಹೋಗಿ ಪಲ್ಲ ಒಂದಕ್ಕೆ 30 ರೂಪಾಯಿನಂತೆ ಮಾರಿಕೊಂಡು 600 ರೂಪಾಯಿಗಳನ್ನು ಸಂಪಾದಿಸುತ್ತಾನೆ.

ಶ್ರೀ ಬಿ. ಡಿ. ಜತ್ತಿ.—ಪಹಣಿ ಲೆಕ್ಕ ಬರೆದಿರುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವರಾಜ್ಯ ಮಂತ್ರಿಮಂಡಲ ಬಂದಾಗಿನಿಂದಲೂ ಇಲ್ಲಿಯೇ ಹೇಳುತ್ತ ಬಂದಿದ್ದೀರಿ. ಕೆಲವು ಸ್ಟ್ಯಾಟಿಸ್ಟಿಕ್ಸ್‌ಗಳನ್ನು ನಾವು ಕೊಟ್ಟಿದ್ದರೂ ಅದನ್ನು ನಂಬುವುದಕ್ಕಾಗುವುದಿಲ್ಲ ಎಂದು. ಅದು ಹೇಗಿದೆ ಎಂದರೆ ಔಡಲ ಬೆಳೆಯುವ ಭೂಮಿಯಲ್ಲಿ ಕಡಲೆ ಬೆಳೆದಂತೆ, ಕಡಲೆ ಬೆಳೆ ಬೆಳೆಯುವ ಭೂಮಿಯಲ್ಲಿ ಔಡಲ ಬೆಳೆ ಬಂದಿದೆ ಎನ್ನುವಂತೆ ಲೆಕ್ಕಗಳು ಆಗುತ್ತದೆ ಮತ್ತು ಆ ರೀತಿಯ ಅರ್ಥ ಬರುತ್ತದೆ. ಆದುದರಿಂದ ಇದನ್ನು ವಾಪಸು ತೆಗೆದುಕೊಂಡು ಮುಂದೆ ವಿಚಾರ ಮಾಡಿ ಬೇಕಾದರೆ ತೆಗೆದುಕೊಂಡು ಬಂದು ಇತ್ಯರ್ಥ ಮಾಡೋಣ ಎಂದು ನನಗನಿಸುತ್ತದೆ. ಇದನ್ನು ಸುದೀರ್ಘವಾಗಿ ಯೋಚನೆ ಮಾಡಬೇಕು. ಈ ರೀತಿ ಮಾಡಿದರೆ ಮುಂದೆ ಅಪಾರ್ಥವಾಗಲಿಕ್ಕಿಲ್ಲ ಎಂದು ನನಗನಿಸುತ್ತದೆ.

ಇನ್ನು 4 (q) ನಲ್ಲಿ—

> " the Explanation to the Section shall be and shall be deemed to have been omitted with effect from the first day of April 1963."...

ಎಂದಿದೆ. ಇದನ್ನು ಏಕೆ ಹಾಕಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಯಾವುದಕ್ಕೆ ಎಗ್ಸಂಷನ್ ಕೊಟ್ಟಿದ್ದಾರೆ ಎಂದು ತಿಳಿದುಕೊಳ್ಳಬೇಕು ? ಇದನ್ನೆಲ್ಲಾ ಸ್ವಲ್ಪ ಮಾನವತೆಯ ದೃಷ್ಟಿಯಿಂದ ನೋಡಬೇಕು. 800 ರೂಪಾಯಿಗಳಷ್ಟು ಆದಾಯ ಬಂದರೆ ಅವರು ಅವರ ಕೈಕೆಳಗೆ ಕೆಲಸ ಮಾಡುವ ಆಳುಗಳಿಗೆ ಸಂಬಳ ಕೊಡಬೇಡವೇ? ಅವರಿಗೆ ಸಾಮಾನುಗಳನ್ನು ಕೊಂಡುಕೊಳ್ಳುವುದಕ್ಕೆ ದುಡ್ಡು ಬೇಡವೇ ? ಇದು ರೈತರಿಗೆ ಎಷ್ಟುಮಟ್ಟಿಗೆ ಅರ್ಥವಾಗುತ್ತದೆ ? ಇವನ್ನೆಲ್ಲಾ ಸರಕಾರ ಇನ್ನೂ ಚೆನ್ನಾಗಿ ಪರಿಶೀಲನೆ ಮಾಡಿ ನೋಡಬೇಕು.

ತಾವು ಹೇಳಿರುವ Statement of Objects and Reasons ನಲ್ಲಿ ಇದನ್ನು ಹೀಗೆ ಮಾಡಬೇಕು, ಹಾಗೆ ಮಾಡಬೇಕು, ಯಾವ ರೀತಿ ಇದನ್ನು ಕಾರ್ಯಗತ ಮಾಡಬೇಕು, ಎನ್ನುವುದನ್ನೇನಾದರೂ ಹೈಕೋರ್ಟಿನವರು ತೀರ್ಮಾನ ಮಾಡಿದ್ದಾರೆಯೇ ? ಮತ್ತು ಈ ತೀರ್ಮಾನದ ಹಿನ್ನೆಲೆಯೇನು ಎನ್ನುವುದನ್ನಾದರೂ ಸರಕಾರದವರು ಈಗ ತಿಳಿಸಬೇಕು. ಇನ್ನೊಂದು ವಿಚಾರ ಇದರಲ್ಲಿ ಹೇಳಿದ್ದಾರೆ, ಅದು :

> "In a recent decision of the High Court it has been held that in the case of a firm liable to tax the amount paid as remuneration to a partner of the firm can be deducted from the agricultural income as expenditure incurred for the purpose of deriving the agricultural income under Section 5 of the Act. It

is considered necessary to provide that such payments cannot be deducted for purposes of determining the taxable agricultural income. In another decision, the High Court has held that the expenditure laid out or expended for the cultivation, upkeep or maintenance of immature plants can also be deducted from the agricultural income. It is considered necessary to provide that such deduction is not permissible. Section 5 of the Act is therefore proposed to be amended.'' ಎಂದು

ಹೈ ಕೋರ್ಟಿನವರು ರೈತರಿಗೆ ಅನುಕೂಲವಾಗುವಂತೆ ತೀರ್ಪು ಕೊಟ್ಟಕಡೆ ಸರ್ಕಾರದವರು ಈ ರೀತಿ ತಿದ್ದುಪಡಿ ತಂದು ರೈತರಿಗೆ ಅನಾನುಕೂಲ ಮಾಡಿದರೆ ಹೇಗೆ? ಈ ಸಭೆಯಲ್ಲಿರತಕ್ಕ ಬಹುತೇಕ ಜನರೆಲ್ಲರೂ ವ್ಯವಸಾಯ ಕ್ಷೇತ್ರದಿಂದ ಅನುಭವ ಪಡೆದು ಬಂದಿರುವವರು. ಅಲ್ಲದೆ ಕೆಲವು ಜನ ಶ್ರೀಮಂತರು ಮತ್ತು ವರ್ತಕರೂ ಈ ಸಭೆಯಲ್ಲಿ ಬಂದಿದ್ದಾರೆ. ಎಲ್ಲರೂ ವ್ಯವಸಾಯಗಾರರಿಗಿರುವ ಕಷ್ಟಗಳನ್ನೆಲ್ಲಾ ಹೇಳಿರುತ್ತಾರೆ. ಇದರಲ್ಲಿರುವಂತೆ ಹೈಕೋರ್ಟಿನ ಆರ್ಡರನ್ನು ಡಿಫಂಕ್ಟು ಮಾಡುವುದಕ್ಕಾಗುವುದಿಲ್ಲ. ತಾವು ಇದನ್ನು ಮಾಡುವುದಾದರೂ ಹೇಗೆ? ವ್ಯವಸಾಯದ ಖರ್ಚುಗಳನ್ನು ಮಾಡುವಾಗ ಅದಕ್ಕೆ ಸೇರಿದಂತ ಒಂದು ಫಾರಂ ಮತ್ತು ಒಬ್ಬ ಮ್ಯಾನೇಜರು ಹಾಗೂ ಇನ್ನಿತರ ಕೆಲಸಗಾರರು ಇರುತ್ತಾರೆ. ಸುಮಾರು 500 ಎಕರೆಯಷ್ಟು ಭೂಮಿಯನ್ನು ವ್ಯವಸಾಯ ಮಾಡುವಾಗ ಅಲ್ಲಿರುವ ಮ್ಯಾನೇಜರಿಗೆ ಮತ್ತು ಅಲ್ಲಿ ಕೆಲಸಮಾಡುವ ಜನಗಳಿಗೆ ಸಂಬಳ ಕೊಡಬೇಕು, ಇದನ್ನೆಲ್ಲಾ ಇಲ್ಲಿ ಹೇಗೆ ಡಿಡಕ್ಟು ಮಾಡಬೇಕು ಎನ್ನುವುದು ನನಗೆ ತಿಳಿಯುತ್ತಿಲ್ಲ. ಇದಕ್ಕೋಸ್ಕರ ಸರಕಾರದವರು ಇದನ್ನು ಸ್ವಲ್ಪ ದೀರ್ಘವಾಗಿ ಯೋಚನೆ ಮಾಡಬೇಕು. ಇದನ್ನು ಹಿಂದಕ್ಕೆ ತೆಗೆದು ಕೊಂಡರೆ ಇದರಲ್ಲಿ ಯಾವ ಪ್ರೆಸ್ಟೀಜಿನ ಪ್ರಶ್ನೆಕೂಡ ಬರುವುದಿಲ್ಲ. ಇದನ್ನು ಕೂಲಂಕಷವಾಗಿ ವಿಚಾರ ಮಾಡಬೇಕು ಎಂದು ಸರಕಾರದಲ್ಲಿ ಹೇಳುತ್ತೇನೆ.

'' In the case of a firm liable to tax the amount paid as remuneration to a partner of the firm can be deducted from the agricultural income......''

ಎಂದಿದೆ. ಇಷ್ಟು comprehensive ಆಗಿ ಡ್ರಾಫ್ಟ್ ಮಾಡಿದವರು ಯಾರು? ಇಂತಹ ಸ್ಟೀಲ್ ಫ್ರೇಂ ಹಾಕಿ ಇದರೊಳಗೆ ಇಟ್ಟಿದ್ದಾದರೆ ಹೇಗೆ ಮಾಡಬೇಕು? ಅಲ್ಲಿ ಕೆಲಸ ಮಾಡುವವರಿಗೆ ಯಾವ ರೀತಿಯಾಗಿ ಸಂಬಳ ಕೊಡತಕ್ಕದ್ದು? ಹೀಗೆಲ್ಲಾ ಮಾಡಿಕೊಂಡು ಹೋದರೆ ಆಹಾರಕ್ಕಾಗಿ ಹೆಚ್ಚಿನ ಬೆಳೆಯನ್ನು ಮಾಡಬೇಕು ಎಂದರೆ ಹೇಗೆ ಬೆಳೆಯುವುದು? ವರ್ತಕರುಗಳಿಗೇನೋ ಅವರ ಕಷ್ಟ ಸುಖಗಳನ್ನು ಹೇಳಿಕೊಳ್ಳಲು ಮತ್ತು ಅವನ್ನು ಸರಿಪಡಿಸಿಕೊಳ್ಳಲು ಚೇಂಬರ್ ಆಫ್ ಕಾಮರ್ಸ್ ಎನ್ನುವ ಸಂಸ್ಥೆ ಇದೆ. ಆದರೆ ರೈತರಿಗೆ ಅಂತಹ ಯಾವ ಸಂಸ್ಥೆಯೂ ಇಲ್ಲ. ರೈತರಿಗೆ ಇಷ್ಟೊಂದು ಕಷ್ಟ ಕೊಟ್ಟುಬಿಟ್ಟರೆ ಅವರಿಗಾವ ಚೇಂಬರು ಇದೆ? ಅಲ್ಲಿ ಹೋಗಿ ಹೀಗಾಗಿದೆ ಎಂದು ಹೇಳಿ ಅಳುವುದಕ್ಕೆ.

Mr. SPEAKER.—They have a powerful exponent in the Hon'ble Member.

Sri C. J. MUCKANNAPPA.—Certainly Sir, it is my duty to represent the cause of Kisans of my area. ಇದಕ್ಕೋಸ್ಕರ ನಾನು ಹೇಳುವುದು ರೈತ ಇಂದು ಹರಿದು ಹಂಚಿ ಹೋಗಿದ್ದಾನೆ. ಅವನ ಮೇಲೆ ಇಲ್ಲದ ಸಲ್ಲದ ಕಾನೂನುಗಳನ್ನು ತಂದು ಇವೊತ್ತಿನ ದಿನ ಅವನ ಮೇಲೆ ಹೇರಿದರೆ ಅವನು ಜೀವನಕ್ಕಾಗಿ ದುಡಿದು ಅವನ ಹೊಟ್ಟೆ ಹಸಿವನ್ನು ಇಂಗಿಸುವುದಾದರೂ ಹೇಗೆ? ರೈತ ತಾನು ಬೆಳೆದ ದವಸವನ್ನು ವರ್ತಕರ ಹತ್ತಿರ ಹೋಗಿ ಮಾರುವಾಗ, ಅವರ ಕೈಗೆ ಸಿಕ್ಕಿಕೊಳ್ಳಬೇಕು. ಇಂತಹ ರೈತರಿಗಾಗಿ ಉಗ್ರವಾದ ಹಾಗೂ ಕಟುವಾದ ನಿಯಮಗಳನ್ನು ಹಾಕುವುದು ಸರಿಯಲ್ಲ, ಎಂದು ನಾನು ತಮ್ಮಲ್ಲಿ ಹೇಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಬಸಪ್ಪನವರು ಈ ಕಾನೂನನ್ನು ಸ್ವಾಗತಾರ್ಹವಾಗಿದೆ ಎಂದು ಹೇಳಿದರು. ಹಾಗೇ ಮಾನ್ಯ ಸದಸ್ಯೆಯರಾದ ಶ್ರೀಮತಿ ಸುಬ್ಬಮ್ಮನವರೂ ಕೂಡ ರೈತರ ಕಷ್ಟ ಸುಖಗಳನ್ನು ಚೆನ್ನಾಗಿ ಅರಿತಿರುವವರೂ ಕೂಡ ಈ ಕಾನೂನ ಸ್ವಾಗತಾರ್ಹವಾಗಿದೆ ಎಂದು ಹೇಳಿದುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗುತ್ತಿದೆ. ರೈತರ ಕಷ್ಟ ಕಾರ್ಪಣ್ಯಗಳನ್ನು ಚೆನ್ನಾಗಿ ತಿಳಿದಿರುವಂತಹ ಹೆಣ್ಣು

(SRI C. J. MUCKANNAPPA)

ಮಾಗಳು ಈ ರೀತಿ ಚೆನ್ನಾಗಿದೆ ಎಂದು ಹೇಳಿದುದನ್ನು ಕೇಳಿ ಬಹಳ ಆಶ್ಚರ್ಯವಾಗುತ್ತಿದೆ. ಅವರು ಹೇಳಿದ್ದೆಲ್ಲವನ್ನೂ ಕೇಳಿದ್ದೇನೆ. ಅವರು ಹೋಗುವ ದಾರಿ ಏಕೆ ಹೀಗಾಯಿತು ? ಅವರು ಹೋಗುವ ರೈಲು ಏಕೆ ಡಿರೇಲ್ ಆಯಿತು ?

ಇನ್ನೊಂದು Explanation (b) (Page 15)—

'director' in relation to a firm, means a partner in the firm.

ಇದರ ಅರ್ಥವನ್ನು ತಾವು ಸ್ವಲ್ಪ ಮನನ ಮಾಡಿಕೊಳ್ಳಬೇಕು. ಮತ್ತು ಇದನ್ನು ಕೂಲಂಕಷವಾಗಿ ವಿಮರ್ಶೆ ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ಸದಸ್ಯರಾದ ಶ್ರೀಮಾನ್ ರಂಗನಾಥ್‌ರವರು ಭೂಸುಧಾರಣೆ ಬಂದಾಗ ಕಾಫಿಗೆ ವಿನಾಯಿತಿ ಕೊಡಬೇಕು ಮತ್ತು ಕಾಫಿ ತೋಟಗಳಿಗಾಗಿ ಯಾವ ತರದ ರಿಸ್ಟ್ರಿಕ್ಷನ್ನುಗಳು ಇರಕೂಡದು, ಇದು It is an industry which will earn dollars ..ಎಂದು ಹೇಳಿದುದಕ್ಕೆ ಇದರಲ್ಲಿ ಅವರಿಗೆ ಯಾವ ರೀತಿಯ ಸೌಲಭ್ಯವನ್ನು ಕೊಡಬೇಕು ಎಂದು ಹೇಳುವಾಗ ಅಗ್ರಿಕಲ್ಚರ್ ಇನ್-ಕಂ ಟ್ಯಾಕ್ಸನ್ನು ಕೊಡಬೇಕೆಂದು ತಂದು ಹೀಗೆ ಏನೇನೋ ಮಾಡುತ್ತಾರೆಂದರು. ಇವೊತ್ತಿನ ದಿವಸ ಅವರು ಎಷ್ಟು ಹಣ ಕೊಡಬೇಕು ಎನ್ನುವುದನ್ನು ನೋಡುವುದಾದರೆ, ಕಾಫಿ ತೋಟ ಮತ್ತು ಅವನು ಮನೆಗಳನ್ನು ಕಟ್ಟಿಕೊಂಡಿರುವ ರೀತಿ ಮತ್ತು ಅವನ ಮನೆ ಮಕ್ಕಳ ರೀತಿ ನೀತಿಗಳನ್ನು ನೋಡಿದರೆ ಅವರು ಬಹಳ ಶ್ರೀಮಂತರು ಎಂದು ಹೇಳಬಹುದು. ಅವರಿಗಿರುವ ಲೆಕ್ಕಗಳನ್ನು ಕ್ಯಾನರಾ ಬ್ಯಾಂಕು ಮತ್ತು ಕ್ಯಾನರ ಸಿಂಡಿಕೇಟು ಬ್ಯಾಂಕು ಇವುಗಳಲ್ಲಿ ಹೋಗಿ ನೋಡಿದರೆ ಅವರ 'BANK BALANCE: NIL' ಎನ್ನುವುದು ಗೊತ್ತಾಗುತ್ತದೆ. They have been heavily indebted to the Banks and of the Money lenders. ಕಾಫೀ ಎಷ್ಟು ವರ್ಷಕ್ಕೊಮ್ಮೆ ಫಸಲು ಕೊಡುತ್ತದೆ ಎನ್ನುವುದನ್ನೇನಾದರೂ ಪರಿಶೀಲಿಸಿದ್ದೀರಾ ? ಅವರಿಗೆ ರೇವತಿ ಮಳೆ ಕೈಬಿಟ್ಟು ಬಿಟ್ಟರೆ ಅವರು ಪ್ಲಾಂಟೇಷನ್ನುಗಳನ್ನು ಬಿಟ್ಟು ಬಿಟ್ಟು ಓಡಿ ಹೋಗಬೇಕಾಗುತ್ತದೆ. ಅಂದ ಮೇಲೆ ಇವತ್ತಿನ ದಿವಸ ಅದರ ಮೇಲೆ ಇಷ್ಟು ದೊಡ್ಡಗದಾಪ್ರಹಾರ ಮಾಡುವುದು ಅನ್ಯಾಯ. ಇದೇ ಸಭೆಯಲ್ಲಿ ಕಾಫಿ ಪ್ಲಾಂಟರುಗಳಿಗೆ ಯಾವಾಗಲೂ ಯಾವ ರೀತಿ ವಿನಾಯಿತಿಯನ್ನೂ ಕೊಡಬಾರದು, ಸವಲತ್ತು ಕೊಡಬಾರದು ಎಂದು ವಾದ ಮಾಡಿದ್ದೆ. ಇವತ್ತು ಅವರನ್ನು ಇನ್ನೊಬ್ಬ ವ್ಯವಸಾಯಗಾರನ ಜೊತೆಯಲ್ಲಿಯೇ ಕಾಣಬೇಕೆಂದು ಏಕೆ ಹೇಳುತ್ತಿದ್ದೇನೆ, ಇವತ್ತು ಅವರ ಸ್ಥಿತಿಗತಿಗಳನ್ನು ಯೋಚನೆ ಮಾಡುವುದಾದರೆ, ಅಡಿಕೆ ತೋಟ ಇರತಕ್ಕವರೂ, ಕಾಫಿ ತೋಟ ಇರತಕ್ಕವರೂ ಮೆಣಸು, ಏಲಕ್ಕಿ ತೋಟಗಳಿರತಕ್ಕವರೂ, ರಾಗಿ, ಭತ್ತ, ಕಡ್ಲೆಕಾಯಿ ಜಮೀನು ಇರುವವರೂ ಎಲ್ಲರ ಸ್ಥಿತಿಯೂ ಒಂದೇ ಆಗಿದೆ. ಇವತ್ತಿನ ದಿವಸ ನೀವು ಆ ಕಡೆ ನಿಮ್ಮ ಕಣ್ಣನ್ನು ಏಕೆ ಹೊರಳಿಸಿದಿರಿ, ನಿಮ್ಮ ದೃಷ್ಟಿಯನ್ನು ತಿರುಗಿಸಿದಿರಿ? ಮದ್ರಾಸಿನ ಪ್ಯಾಟರ್ನಿನಂತೆ ಮಾಡುತ್ತೇವೆಂದು ಹೊರಟಿದ್ದೀರಿ. ಮದ್ರಾಸಿನಲ್ಲಿ ಎಷ್ಟು ಎಕರೆ ಕಾಫಿ ಪ್ಲಾಂಟೇಶನ್ ಇದೆ ? ನೀಲಗಿರಿ ಸುತ್ತಮುತ್ತ ಸ್ವಲ್ಪ ಕಾಫಿ, ರಬ್ಬರ್ ಪ್ಲಾಂಟೇಷನ್ನುಗಳಿರಬಹುದು. ಮೈಸೂರಿನಲ್ಲಿ ದೇಶದ 65-70 ಪರ್ಸೆಂಟ್ ಕಾಫಿಯನ್ನು ಬೆಳೆಯುತ್ತಿದ್ದಾರೆ. ಏಲ್ಲೋ ಒಂದೋ, ಎರಡೋ ಪರ್ಸೆಂಟು ಭೂಮಿ ಇರತಕ್ಕಂಥ ಕಾಫಿ ಬೆಳೆಗಾರರನ್ನು ನಮ್ಮ ರಾಜ್ಯದವರ ಜೊತೆಗೆ ಏಕೆ ಹೋಲಿಸುತ್ತೀರ? ನಿಮ್ಮ ಈ ಒಂದು ತಿದ್ದುಪಡಿಯಿಂದ ನೀವು ಅವರ ರೆಸ್ಕ್ಯೂಗೆ ಹೋಗುವುದಿಲ್ಲ, ನೀವು ಅವರಿಗೆ ಸಹಾಯಕವಾಗುವುದಿಲ್ಲ ಅಂತ ಹೇಳುತ್ತೇನೆ. ಕಾಫಿ ಬೆಳೆ ಇನ್ನೂ ಸ್ವಲ್ಪ ಅಭಿವೃದ್ಧಿಯಾಗಬೇಕು; ನಾನು ಹೇಳುವುದನ್ನು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಿ ಒಪ್ಪಿಕೊಳ್ಳಬೇಕು.

ಮಲೆನಾಡಿನಲ್ಲಿ ಆರೆಂಜಸ್ ಆಗುತ್ತಿಲ್ಲ. ಆ ತೋಟಗಳಲ್ಲಿ ಒಂದು ತರಹ ರೋಗ ಬಂದಿದೆ; ಪೆಸ್ಟ್ ಹಿಡಿದಿದೆ. ಮಲೆನಾಡಿನಿಂದ ಈಗ ಕಿತ್ತಳೇಹಣ್ಣು ಬರುತ್ತಲೇ ಇಲ್ಲ; ಅಲ್ಲಿ ಇಲ್ಲವೇ ಇಲ್ಲ. ಕಿತ್ತಳೇ ಹಣ್ಣಿನ ಮೇಲೆ ನೀವೂ ಇಷ್ಟು ಕಣ್ಣು ಹಾಕಿಬಿಟ್ಟಿರಿ. ಹಣ್ಣು ಹಂಪಲುಗಳ ಮೇಲೆ ವ್ಯವಸಾಯ ತೆರಿಗೆ ಕೊಡಬೇಕೆಂದು ಹೇಳಿದರೆ, ಇದು ಯಾವ ನ್ಯಾಯ? ಇದೇ ಸಭೆಯಲ್ಲಿ ಆವತ್ತಿನ ಹಣಕಾಸಿನ ಸಚಿವರಿಗೆ ಹೇಳಿದ್ದೆ. ''ನೀವು ಕಾಹಿಲೆಯಿಂದ ನರಳುತ್ತಿದ್ದೀರ, ಹಣ್ಣು ಹಂಪಲುಗಳನ್ನು ತಿಂದು ಗುಣ ಹೊಂದಿ, ಗಟ್ಟಿ ಮುಟ್ಟಾಗಿ. ಅವುಗಳ ಮೇಲೆ ತೆರಿಗೆ ಹಾಕಬೇಡಿ. ಎಂದು. ಅವರು ಹಠ ಹಿಡಿದು, ಸರಿಯಲ್ಲವೆಂದು ಹೇಳಿದರೂ ಕೇಳದೆ ತಂದರು. ಆದರೆ ತಾವು ಏನು ಮಾಡುತ್ತಿದ್ದೀರಿ ? ಆವಾಗ ತಾವು ಮುಖ್ಯಮಂತ್ರಿಗಳಾಗಿದ್ದಿರಿ, ಅವರು ಹಣಕಾಸಿನ ಸಚಿವರಾಗಿದ್ದರು. ಆದ್ದರಿಂದ ತಾವು ದೀರ್ಘವಾಗಿ ಯೋಚನೆ ಮಾಡಬೇಕು. ಈ ರೀತಿ ನೀವು ಮಾಡಿಕೊಂಡು ಹೋದರೆ ಮೈಸೂರು ಸಂಸ್ಥಾನ ದೊಡ್ಡ ಮರುಭೂಮಿಯಾಗುತ್ತದೆ. ಯಾವುದೇ ವ್ಯವಸಾಯಗಾರ ಹಣ್ಣು ಬೆಳೆಯುವುದ

ಕ್ಕಾಗುವುದಿಲ್ಲ, ತೋಟ ಮಾಡುವುದಕ್ಕೆ ಸಾಧ್ಯವಿಲ್ಲ ಆಹಾರ ಪದಾರ್ಥಗಳನ್ನೂ, ಕಮರ್ಶಿಯಲ್ ಕ್ರಾಪುಗಳನ್ನೂ ಬೆಳೆಯುವುಧಕ್ಕೆ ಸಾಧ್ಯವಿಲ್ಲ. ಮಲೆನಾಡಿನಲ್ಲಿ ಮಳೆ ಹೋಗಿ ಬಿಟ್ಟಿದೆ. ಆರು ಇಂಚು ಮಳೆ ಮಲೆನಾಡಿನಲ್ಲಿಲ್ಲ. ರೈತರಿಗೆ ಬೆಳೆಯಾದರೆ ತಾನೇ ಟ್ಯಾಕ್ಸ್ ಹಾಕುವುದು.

Mr. SPEAKER.—We are discusing that on Monday. The Hon'ble Member can speak on that subject if he is given a chance.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಮ್ಮ ಈ ತಿದ್ದುಪಡಿಯಿಂದ ಬಹಳ ತೊಂದರೆಯಾಗುತ್ತದೆ. ಅದಕ್ಕೋಸ್ಕರ, ಇದನ್ನು ಸ್ವಲ್ಪ ಸುದೀರ್ಘವಾಗಿ ಯೋಚನೆ ಮಾಡಬೇಕು.

ಒಂದು ವಿಷಯವನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ವರಮಾನ ತೆರಿಗೆಯನ್ನು ಹಾಕುವಾಗ ಯಾವ ಅಂಶವನ್ನು ಗಣನೆಗೆ ತೆಗೆದುಕೊಂಡು ಯಾವ ಆಧಾರದ ಮೇಲೆ ಹಾಕುತ್ತೀರಾ ? Timber also comes under the commercial crops ಎಂದು ಈ ತಿದ್ದುಪಡಿ ತಂದಿರುವುದನ್ನು ತಾವು ಯೋಚನೆ ಮಾಡಬೇಕು. ಕಾಫೀ ತೋಟದಲ್ಲಿ, ಬೆಳೆಯನ್ನು ಪ್ಲಾಂಟ್ ಮಾಡುತ್ತಿರಬೇಕು. ರಿಪ್ಲಾಂಟ್ ಮಾಡಿ ಫಸಲು ಕೈಗೆ ಬಂದು, ಲಾಭದಾಯಕವಾಗಬೇಕಾದರೆ ಎಷ್ಟು ವರ್ಷಗಳು ಹಿಡಿಯುತ್ತದೆ. ಈ ಕ್ಷೇತ್ರ ನಿಮಗೆ ಹೇಗೆ ಲಾಭದಾಯಕವಾಗಿ ಕಾಣುತ್ತಿದೆ? ಈ ತಿದ್ದುಪಡಿಗಳನ್ನು ಏನೋ ಆಫೀಸರುಗಳು ಬರೆದು ಕೊಟ್ಟು ಬಿಡುತ್ತಾರೆ, ನೀವು ನಮ್ಮ ಮುಂದೆ ತಂದು ಬಿಡುತ್ತೀರ. ನೀವೂ ಯೋಚನೆ ಮಾಡುತ್ತೀರ, ಮಾಡುವುದಿಲ್ಲ ಎಂದು ಹೇಳುವುದಿಲ್ಲ. ನಮ್ಮಲ್ಲಿ ಸಿ. ಬಿ. ಮಲ್ಲಪ್ಪ ಅಂತ ಒಬ್ಬ ಪ್ರಸಿದ್ಧ ನಟರಿದ್ದರು; ಅವರು ಹೇಳುತ್ತಿದ್ದ ಹಾಗೆ ಹಣ, ಹಣ, ಹಣ ಅಂತ ಹೇಳಿ, ಅದಕ್ಕೆ ಬಾಯಿ ತೆಗೆದುಕೊಂಡಿದ್ದೀರಿ. ನಾನು ಹೇಳುವುದನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡುವುದು ಯಾವ ಧರ್ಮ? ನಾಲ್ಕು ವರ್ಷ ಅಂತ ಏಕೆ ಮಾಡಿದಿರಿ ಎಂಬ ಬಗ್ಗೆ ತಮ್ಮ ಅಭಿಪ್ರಾಯ ಹೇಳಲಿಲ್ಲ. 3—4ವರ್ಷ ಯಾರಾದರೂ ತೆರಿಗೆ ಕೊಡದೆ ತಪ್ಪಿಸಿಕೊಂಡಿದ್ದರೆ ಅಂಥವರನ್ನು ಹಿಡಿಯಬೇಕೆಂದು ಮಾಡಿದ್ದರೆ, ಬಾಕಿಯವರಿಗೆ ಹಿಂಸೆ ಕೊಟ್ಟ ಹಾಗೆ ಆಗುವುದಿಲ್ಲವೇ? ಇದರಿಂದ ರೈತನಿಗೆ ಕಷ್ಟವಾಗುವುದಿಲ್ಲವೇ? ಅವನಿಗೆ ಸರ್ಚಾರ್ಜ್ ಕೊಡುವುದಕ್ಕೇ, ಕಂದಾಯ ಕೊಡುವುದಕ್ಕೇ ಆಗುವುದಿಲ್ಲ, ಅವನು ಮೀಡಿಯಂ ಟರ್ಮ್‌ಲೋನ್, ಲಾಂಗ್‌ಟರ್ಮ್ ಲೋನ್ ತೆಗೆದುಕೊಂಡದ್ದನ್ನು ರಿಪೇ ಮಾಡುವುದಕ್ಕೆ ಯೋಗ್ಯತೆ ಇಲ್ಲ; ಅಂಥದರಲ್ಲಿ; ಅವನಿಗೆ ಇಂಥ ಕಷ್ಟ ಕೊಡುವುದು ನ್ಯಾಯವೇ? ಅವನು ನಾಲ್ಕು ವರ್ಷದ ಲೆಕ್ಕ ಇಟ್ಟಿರುತ್ತಾನೆಯೇ? ಒರಿಜಿನಲ್ ಆಕ್ಟಿನಲ್ಲಿ ಮೂರು ವರ್ಷ ಎಂದು ಏನು ಇಟ್ಟಿದ್ದರೋ ಅದನ್ನು 4 ವರ್ಷ ಎಂದು ಏತಕ್ಕೆ ಮಾಡುತ್ತೀರ? ಏನಾದರೂ ಬಹಳ ಬಿಕ್ಕಟ್ಟಿನ ಪ್ರಸಂಗ ಬಂದರೆ ಒಳ್ಳೆ ಮಳೆ ಬೆಳೆ ಬಂದಾಗ, ರೈತ ಚೆನ್ನಾಗಿ, ಸಮೃದ್ಧಿಯಾಗಿ ಬೆಳೆದಿದ್ದಾನೆ ಅಂತ ಕಂಡಾಗ ನಾಲ್ಕು ವರ್ಷಕ್ಕೆ ಎನ್‌ಹ್ಯಾನ್ಸ್ ಮಾಡೋಣ. ಈ ವಿಷಯವನ್ನು ಗಮನದಲ್ಲಿ ಮಡಗಿಕೊಳ್ಳಬೇಕೆಂದು ಹಣಕಾಸಿನ ಮಂತ್ರಿಗಳಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಾನೂನಿಗೆ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡುವುದು ಎಲ್ಲಿಯಾದರೂ ಉಂಟೇ? ಸತ್ತ ಮಗುವಿಗೆ ಜಾತಕ ಬರೆಯುಸುತ್ತೀರ ? ಅದಕ್ಕೆ ನಾಮಕರಣ ಮಾಡುತ್ತಾ ಇದ್ದೀರಾ ?

Mr. SPEAKER—.The Hon'ble Member agrees with Sri Ramegowda.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಅವರಿಗೆ ಹೇಳುತ್ತಿದ್ದೇನೆ. ಅವರ ಮನಸ್ಸಿನ ಮೇಲೆ ಅದು ಪರಿಣಾಮಕಾರಿಯಾಗಬೇಕು. ನಾವೂ ನೀವೂ ಒಪ್ಪಿಕೊಳ್ಳಬಹುದು. ಅವರು ಒಪ್ಪಿಕೊಳ್ಳದೆ ಹೋದರೆ ಏನು ಮಾಡೋಣ. He was not here; he was away. ಈ ಕಾನೂನು ಅನ್ನುವುದನ್ನು ಇಷ್ಟು ಸರಳ ಮಾಡಬಾರದು. ಇಷ್ಟು ಅಗ್ಗವಾಗಿ, ಇಷ್ಟು ಬೇಗ ತಿದ್ದುಪಡಿ ತಂದರೆ, " ಏನು ಬಿಡು, ಸರ್ಕಾರದವರು ಒಂದು ಮಾಡುತ್ತಾರೆ, ನಾವು ರಂಗೋಲಿ ಕೆಳಗೆ ತೂರಿಬಿಡೋಣ " ಅಂತ ಹೇಳುತ್ತಾರೆ. ನಾನು 1934-35 ರಲ್ಲಿ ರಾಜಕೀಯ ವಾಸನೆ ತಗುಲಿ, ರಾಜಕೀಯ ರಂಗಕ್ಕೆ ತಲೆ ಇಟ್ಟಾಗ, ದಿವಾನರುಗಳ ಸರ್ಕಾರಗಳು, ರಾಜಮಹಾರಾಜರ ಸರ್ಕಾರಗಳು ಒಂದು ಕಾನೂನನ್ನು ಸಡಿಲ ಪಡಿಸಬೇಕಾದರೆ ಬಹಳ ಹಿಂದೂ ಮುಂದೂ ನೋಡಿ, ಬಹಳ ಪ್ರಯತ್ನ ಮಾಡಿ, ಕಳವಳದಿಂದ ಮಾಡುತ್ತಿದ್ದರು ಈಗ ಜನಗಳಲ್ಲಿ ಏನು ಭಾವನೆ ನೀವು ಮೂಡಿಸಿದ್ದೀರೆಂದರೆ, ಅವರು ಸರ್ಕಾರ ಒಂದು ಕಾನೂನು ಮಾಡಿದರೆ ಮಾಡಲಿ, ಅದು " ನನಗೆ ಎಫೆಕ್ಟ್ ಆಗದ ಹಾಗೆ ತಿದ್ದುಪಾಟು ಮಾಡಿಸುತ್ತೇನೆ " ಎಂದು ಹೇಳುತ್ತಾರೆ. ಅಂಥ ತಾತ್ಸಾರ ಮನೋಭಾವನೆ ಸರ್ಕಾರದ ಬಗ್ಗೆ ಬಂದು ಬಿಟ್ಟಿದೆ. ಸರ್ಕಾರ ಸ್ವಲ್ಪ ಬಿಗಿಯಾಗಿರಬೇಕು. ಈ ಸಭೆಯಲ್ಲಿ ಮಾಡತಕ್ಕಂಥ ಕಾನೂನು ಭದ್ರವಾಗಿರಬೇಕು ನೀವು ಇಲ್ಲಿ ಒಂದು ಸಡಿಲವಾದ ಕಾನೂನು ಮಾಡುತ್ತೀರ, ಕಾಫೀ ಪ್ಲಾಂಟರುಗಳು ರಂಗೋಲಿ ಕೆಳಗೆ ತೂರಿ, ಅದರಿಂದ ತಪ್ಪಿಸಿಕೊಳ್ಳುತ್ತಾರೆ. ಆವಾಗ ನಾವು ಮಾಡುವ ಕಾನೂನಿಗೆ ಗೌರವ ಬರುವುದಿಲ್ಲ; ಮಾಡುವ ಕಾನೂನಿಗೆ ಗೌರವ ಬರುವ ಹಾಗಿರಬೇಕು. ಈ ಸಭೆಯಲ್ಲಿ ಮಾಡುವ ಕಾನೂನು ಎಳ್ಳಷ್ಟಾದರೂ, ಕಿಂಚಿತ್ತಾದರೂ ಅಗೌರವಕ್ಕೆ ಒಳಗಾದರೆ,

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಎಲ್ಲ ಶಕ್ತಿಯನ್ನು ಉಪಯೋಗಿಸಿ ಅದನ್ನು ಜಾರಿಗೆ ತರುವ ಶಕ್ತಿ ಸರ್ಕಾರಕ್ಕಿರಬೇಕು. ಈ ತಿದ್ದುಪಡಿ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುತ್ತೀರ ಎಂದು ಕೇಳಿದ್ದಕ್ಕೆ, ಕಳುಹಿಸುವುದಿಲ್ಲವೆಂದು ಹೇಳಿದಿರಿ; ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಎಂದು ಕೇಳಿದರೆ ನಿಮಗೆ ಮೆಜಾರಿಟಿ ಇದೆ, ಅಧ್ಯಕ್ಷರು ಓಟಿಗೆ ಹಾಕುತ್ತಾರೆ, ಅವರು ''ಇಲ್ಲ'' ಅನ್ನುತ್ತಾರೆ, ನಾವು ''ಉಂಟು'' ಅನ್ನುತ್ತೇವೆ, ಅದು ಬಿದ್ದುಹೋಗುತ್ತದೆ. ಆದ್ದರಿಂದ ಮಂತ್ರಿಗಳಿಗೆ ಯಾವ ರೀತಿಯಲ್ಲಿ ಹೇಳಿದರೆ ಅವರ ಮನಸ್ಸಿಗೆ ಹಿಡಿಯುತ್ತದೆಂದು ನೋಡಿ, ಅವರ ಅಭಿಪ್ರಾಯವನ್ನು ತಿರುಗಿಸುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ ಅಷ್ಟೆ.

ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗುವುದರಲ್ಲಿ ಏನು ತೊಂದರೆಯಿದೆ, ಮಾನ್ಯ ಮಂತ್ರಿಗಳು ಇದಕ್ಕೆ ಮನಸ್ಸು ಕೊಡುವುದಿಲ್ಲವೆಂದು ನನಗೆ ಗೊತ್ತು, ನಿಮ್ಮ ಪಕ್ಷದವರೇ ಇದನ್ನು ವಿರೋಧ ಮಾಡುತ್ತಿದ್ದಾರೆ, ನಿಮ್ಮವರೇ ಕೆಲವು ಅಂಶಗಳ ಮೇಲೆ ಒಪ್ಪಿಗೆಯನ್ನು ಕೊಟ್ಟಿಲ್ಲ. ಆದುದರಿಂದ ಇದನ್ನು ಸೆಲೆಕ್ಟ್ ಕಮಿಟಿಗೆ ಕಳಿಸಬೇಕು. ಮತ್ತು ಸೆಲೆಕ್ಟ್ ಕಮಿಟಿ ಇದನ್ನು ಈ ಅಧಿವೇಶನ ಮುಗಿಯುವುದರೊಳಗೆ ಪರಿಶೀಲನೆಮಾಡಿ ಕಳಿಸಿದರೆ ನಾವು ಚರ್ಚೆಮಾಡಿ ಅದನ್ನು ಅಂಗೀಕರಿಸಬಹುದು ಎಂದು ಹೇಳುತ್ತೇನೆ.

ಇಷ್ಟನ್ನು ಹೇಳಿ ಹೈಕೋರ್ಟಿನವರು ಕೊಟ್ಟಂಥ ಯಾವುದಾದರೂ ಆದೇಶವನ್ನು ತಿರುಗು ಮುರುಗು ಮಾಡಿ ಅದಕ್ಕೆ ಒಂದು ತಿದ್ದುಪಡಿ ವಿಧೇಯಕವನ್ನು ತಂದು ನೀವು ಮಾಡಿದ್ದುದನ್ನೇ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಅದು ಸರಿ ಕಾಣುವುದಿಲ್ಲ. ನಾವು 1967ರವರೆಗೆ ಇಲ್ಲಿರಬಹುದು. ಅನಂತರ ಯಾರ್‍ಯಾರು ಎಲ್ಲಿರುತ್ತೇವೆಯೋ ಗೊತ್ತಿಲ್ಲ. ಮುಂದೆ ಬರುವವರು ಇಂಥದ್ದನ್ನೆಲ್ಲ ಮಾಡಿದ್ದಾರೆಂದು ಹೇಳಿಕೊಳ್ಳುವಂತಿರಬಾರದು. ಆದುದರಿಂದ ಇದರಲ್ಲಿರುವ ವಿವಾದಾಸ್ಪದವಾದ ಕ್ಲಾಜುಗಳನ್ನು ಸೂಕ್ತ ರೀತಿಯಲ್ಲಿ ಬದಲಾಯಿಸಲು ಸೆಲೆಕ್ಟ್ ಕಮಿಟಿ ತೆಗೆದು ಕೊಂಡು ಹೋಗಿ ಪುನರ್ವಿಮರ್ಶೆಮಾಡಿ ಅನಂತರ ಈ ಸಭೆಯ ಒಪ್ಪಿಗೆಯನ್ನು ಪಡೆಯಬೇಕೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎ. ವಾಸಣ್ಣ ಶೆಟ್ಟಿ (ಸಕಲೇಶಪುರ).—ಮಾನ್ಯ ಸಭಾಪತಿಯವರೇ, ವ್ಯವಸಾಯೋತ್ಪನ್ನ ಮಾರಾಟ ತೆರಿಗೆ ಮಸೂದೆಯನ್ನು ಮಂಡಿಸಿದಾಗ ಇದು ಹೊಸದಾಗಿ ತೆರಿಗೆಯನ್ನು ವಿಧಿಸುವಂಥ ಮಸೂದೆಯಲ್ಲ, ಹೈಕೋರ್ಟಿನ ಕೆಲವು ತೀರ್ಮಾನಗಳ ಮೇಲೆ ಇದನ್ನು ಮಾಡಲಾಗಿದೆ ಎಂದು ಅರ್ಥಸಚಿವರು ಅಪ್ಪಣೆಕೊಡಿಸಿದರು.

ಈ ಮಸೂದೆಯಲ್ಲಿ timber ಎಂದರೆ ಮರವನ್ನು commercial crops ಕೆಳಗೆ ಸೇರಿಸಬೇಕು ಎಂದು ನಮೂದಿಸಲಾಗಿದೆ. ಈಗ plantation areaದಲ್ಲಿ timberನ್ನು ಕೆಲವು assessing officerಗಳು agriculture income ಎಂದು assess ಮಾಡಿ ಅದರ ಮೇಲೆ ಹೈಕೋರ್ಟು timber is not a plantation crop ಎಂದು ತೀರ್ಮಾನ ಮಾಡಿದಮೇಲೆ ಈ ತಿದ್ದುಪಡಿಯನ್ನು ತಂದಿದ್ದಾರೆ. ಇದರಲ್ಲಿ explanationಗೆ ತಿದ್ದುಪಡಿ ತಂದಿರುವುದನ್ನು ನೋಡಿದರೆ timber ಮೇಲೆ ಯಾರಿಗೆ assessment ಹಾಕಿದ್ದಾರೆ ಅವರು ಪುನಃ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟಿಗೆ ಹೋಗಿ ರಕ್ಷಣೆ ಪಡೆಯುವುದಕ್ಕೆ ಇದರಿಂದ ಅವಕಾಶ ಒದಗುತ್ತದೆಯೇ ವಿನಾ ಸರ್ಕಾರಕ್ಕೆ ಇದರಿಂದ ಏನೂ ಉತ್ಪತ್ತಿಯನ್ನು ನೀರಿಕ್ಷೆ ಮಾಡುವ ಪರಿಸ್ಥಿತಿಯಿಲ್ಲವೆಂದು ನನಗಾದರೂ ಅನ್ನಿಸುತ್ತದೆ. ಇಲ್ಲದೇ ಇದ್ದ ಪಕ್ಷದಲ್ಲಿ timberನ್ನು ಯಾವೊಬ್ಬನೂ ಕೂಡ ತನ್ನ ಜಮೀನಿನಲ್ಲಿ ಬೆಳೆದುದನ್ನು ಸಹ ಮಾರಿ ಉತ್ಪತ್ತಿಮಾಡುವ ಪರಿಸ್ಥಿತಿಯಿಲ್ಲ. ಕಾಡಿನಲ್ಲಿ ಗಿಡ ಮರಗಳು ಬೆಳೆದಿರುತ್ತವೆ. ಅದನ್ನೆಲ್ಲ ಕಡಿದು ಸಾಗುವಳಿಗೆ ತರುತ್ತಾರೆ ಬೆಳೆ ತೆಗೆಯಲು. ಎಸ್ಟೇಟುಗಳಲ್ಲಿ ಮಾತ್ರ ಇವು ಇರುವಂಥ ಪ್ರಮೇಯವಿದೆ. ಈ ತಿದ್ದುಪಡಿಯನ್ನು ತರುವುದರಿಂದ ಏನೂ ಪ್ರಯೋಜನವಾಗದೆ ಪೂರ್ಣವಾಗಿ ಬಿಟ್ಟೇ ಬಿಡಬೇಕಾದೀತು ಎಂದು ನನಗಾದರೂ ಅನ್ನಿಸುತ್ತದೆ.

ಐದನೆಯ ಸೆಕ್ಷನ್ನಿಗೆ explanationಗೆ ಹೊಸದಾಗಿ ಸೇರಿಸಿದ್ದಾರೆ. ಇದರ ಮೇಲೆ ಸಾಮಾನ್ಯವಾಗಿ ಈ ಸಭೆಯಲ್ಲಿ ಮಾತನಾಡಿದವರೆಲ್ಲರೂ ಕೂಡ immature plantsಗೆ ರಿಯಾಯಿತಿ ಕೊಡಬೇಕೆಂದು ವಾದ ಮಾಡಿದ್ದಾರೆ. ಇವತ್ತಿನ ಪರಿಸ್ಥಿತಿಯಲ್ಲಿ plantation areaದಲ್ಲಿ ಮಾತ್ರ ಅದರಲ್ಲಿಯೂ ಕಾಫಿ ಏಲಕ್ಕಿ ವ್ಯವಸಾಯದಲ್ಲಿ ನಿರತರಾದವರಿಗೆ ಬಹಳ ನಷ್ಟಕ್ಕೆ ಈಡಾಗುತ್ತಿದ್ದಾರೆ. ಕಾಫಿ ಸಾಗುವಳಿ ಕಾಫಿ ಸಸಿಗಳನ್ನು ಮಕ್ಕಳನ್ನು ಪೋಷಣೆ ಮಾಡುವ ರೀತಿಯಲ್ಲಿ ಪೋಷಣೆ ಮಾಡಬೇಕು. ಇಂಥ ಸಂದರ್ಭದಲ್ಲಿ ಈಗ ಆಗಿರುವ ಅಸೆಸ್‌ಮೆಂಟುಗಳಲ್ಲಿ ರಿಯಾಯಿತಿಯನ್ನು ಅಧಿಕಾರಿಗಳು ಕೊಟ್ಟಿಲ್ಲ. ಆದರೆ ಹೈಕೋರ್ಟಿನಲ್ಲಿ ರಿಯಾಯಿತಿಕೊಡಬೇಕು ಎಂದು ತೀರ್ಮಾನವಾದ ಮೇಲೆ explanation ಎರಡು ಸೇರಿಸಬೇಕು ಎಂದು ತಂದಿದ್ದಾರೆ. ಇದು ಬಹಳ ಚರ್ಚೆಯಾಗಿ ಮದ್ರಾಸಿನ ಭಾಗದಲ್ಲಿ ಏನೊಂದು ರಿಯಾಯಿತಿಯನ್ನು ಕೊಡುತ್ತಿದ್ದರೋ ಅದನ್ನು ನಾವು ಇಲ್ಲಿಯೂ ಕೂಡ

ಅನುಸರಣೆಗೆ ತರಲೋಣವೆಂದು ಈ ಹೊಸ ತಿದ್ದುಪಡಿಯನ್ನು ಸೂಚಿಸಿ ಆರ್ಥಿಕ ಸಚಿವರು ಇದ್ದ ಸಲ್ಪ ಕಷ್ಟವನ್ನು ಈ ವ್ಯವಸಾಯಗಾರರಿಗೆ ತಪ್ಪಿಸಿದ್ದಾರೆ. ಅದನ್ನು ಸ್ವಾಗತಿಸುತ್ತೇನೆ. ಅದರಲ್ಲಿಯೂ ಕೂಡ ನಾನು ಅವರಲ್ಲಿ ಚರ್ಚೆಮಾಡಿದಾಗ ಪ್ಲಾಂಟೇಷನವರ ಕುಂದುಕೊರತೆಗಳನ್ನು ವಿಚಾರಿಸಿ ಆದಷ್ಟು ಬೇಗ ಅವರ ಕಷ್ಟಗಳನ್ನು ಪರಿಹಾರ ಮಾಡುವುದಕ್ಕೆ ಒಂದು ಸಮಿತಿಯನ್ನು ನೇಮಿಸಿ ಈ ಒಂದು ತೊಂದರೆಯನ್ನು ತಪ್ಪಿಸುವುದಕ್ಕೆ ಕೂಡ ಪ್ರಯತ್ನ ಪಡೋಣವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ.

Amendment of Section 19, sub-section (4) ಇಲ್ಲಿಯವರೆಗೂ ಕೂಡ *ex-parte* assessmentಗೆ ಅಪೀಲು ಮಾಡುವ ಅವಕಾಶವಿರಲಿಲ್ಲ. ಅದನ್ನು ತಪ್ಪಿಸುವುದಕ್ಕೋಸ್ಕರವಾಗಿ ಹೊಸ ಪ್ರಾವಿಸೋ ಸೇರಿಸಬೇಕು ಎಂದು ಸೂಚಿಸಿದ್ದಾರೆ. ಇದರಿಂದ assessing authority ಮುಂದೆ ತನ್ನ ಕಷ್ಟಸುಖಗಳನ್ನು ಹೇಳಿಕೊಳ್ಳುವುದಕ್ಕೆ ಅವಕಾಶವಿದೆ. ಆದರೆ 32ರ ಪ್ರಾವಿಸೊ ಪ್ರಕಾರ ಅಪೀಲು ಮಾಡಿಕೊಳ್ಳಲು ಅವಕಾಶವಿಲ್ಲ. ಈ ಸಂದರ್ಭದಲ್ಲಿಯೂ ಅಪೀಲು ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡುವುದು ಒಳ್ಳೆಯದೆಂದು ನಾನು ಸೂಚನೆ ಮಾಡುತ್ತೇನೆ.

ಇನ್ನು ಕಂಪನಿಗಳ ಪಾರ್ಟ್‌ನರುಗಳಿಗೆ ರೆಮ್ಯೂನರೇಷನ್ ಕೊಡಬೇಕೆಂದು ಹೈಕೋರ್ಟಿನಲ್ಲಿ ತೀರ್ಮಾನವಾದ ಮೇಲೆ ಈ ತಿದ್ದುಪಡಿ ಮಸೂದೆ ತಂದಿದ್ದಾರೆ. ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕಾನೂನು ಜಾರಿಗೆ ಬಂದ ಮೇಲೆ ಅನೇಕರು ತಮ್ಮ ಆಸ್ತಿಯನ್ನು ತಮ್ಮ ತಮ್ಮಲ್ಲಿಯೇ ಹಂಚಿಕೊಂಡಿದ್ದಾರೆ. ತಮ್ಮ ಜನರಲ್ಲಿಯೇ ಒಬ್ಬನನ್ನು ಮೇನೇಜರ್, ಇನ್ನೊಬ್ಬನನ್ನು ಪಾರ್ಟನರ್ ಎಂದು ಮಾಡಿಕೊಂಡು ಸಿಕ್ಕಾಪಟ್ಟೆ ರೆಮ್ಯೂನರೇಷನ್ ಚಾರ್ಜ ಮಾಡುವುದಕ್ಕೆ ಅವಕಾಶವಿದೆ. ಈ ತಿದ್ದುಪಡಿಯಿಂದ ಅದಕ್ಕೆ ಅವಕಾಶವಾಗುವುದಿಲ್ಲ. ಅದಕ್ಕೆ ರಿಯಾಯಿತಿ ಕೊಟ್ಟಿರುವುದಿಲ್ಲ. ನಾಲ್ಕು ಜನ ಇರುವ ಕಡೆ ಒಬ್ಬನು ಪಾರ್ಟ್‌ನರ್ ಆಗಿ ಮೇನೇಜ್‌ಮೆಂಟ್ ನಿರ್ವಹಿಸುವುದಾದರೆ ನಿಜವಾಗಿಯೂ ಅವನಿಗೆ ರೆಮ್ಯುನರೇಷನ್ ಕೊಡಬೇಕಾಗುತ್ತದೆ. ಇದಕ್ಕೆ ಅವಕಾಶ ಕಲ್ಪನೆ ಮಾಡುವುದಾದರೆ ಪಾರ್ಟ್‌ನರ್‌ಷಿಪ್‌ನಲ್ಲಿ ವ್ಯವಸಾಯ ನಡೆಸಿಕೊಂಡು ಹೋಗಲು ಅನುಕೂಲವಾಗುತ್ತದೆ. ಕಾಫಿ ತೋಟದಲ್ಲಿ ಕೆಲವರದು ಸಬ್‌ಸ್ಟಾನ್ಸಿಯಲ್ ಇಂಟರೆಸ್ಟ್ ಇರುತ್ತದೆ. ಐದು-ಹತ್ತು ಸಾವಿರ ರೂಪಾಯಿ ಷೇರ್ ಪಡೆದಿರುತ್ತಾರೆ. ಅಂಥವರಿಗೆ ಈ ದ್ದುಪಡಿಯಿಂದ ಅವಕಾಶ ತಪ್ಪುತ್ತದೆ. ಒಂದು ಕಂಪನಿಯಲ್ಲಿ ಹೆಚ್ಚಿನ ಷೇರ್ ಪಡೆದಂಥವರಿಗೆ ಕಷ್ಟವಾಗುತ್ತದೆ. ಇದರ ಬಗ್ಗೆ ಏನಾದರೂ ಮಾಡಿದ್ದರೆ ಚೆನ್ನಾಗಿತ್ತು. ಅವರ ಕಷ್ಟ ತಿಳಿದುಕೊಂಡು ಒಂದು ತಿದ್ದುಪಡಿ ತಂದು ಇದರಲ್ಲಿ ಸ್ವಲ್ಪ ಬದಲಾವಣೆ ಮಾಡಿ ಅವರ ಕಷ್ಟ ಹೋಗಲಾಡಿಸಬೇಕು. ಕಾಫಿ ತೋಟದ ವ್ಯವಸಾಯದಲ್ಲಿ ನಿರತರಾದವರ ಕಷ್ಟ ಪರಿಹಾರ ಮಾಡಿ, ಕಾಫಿ ಉತ್ಪತ್ತಿ ಕಡಿಮೆಯಾಗದಂತೆ ಉತ್ತೇಜನ ಕೊಡಲು ಯಾವುದಾದರೂ ಒಂದು ಕ್ರಮ ತೆಗೆದುಕೊಳ್ಳಲು ಸರಕಾರ ಯೋಚನೆಮಾಡಬೇಕೆಂದು ತಿಳಿಸಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

Sri G. V. GOWDA.—The amendments seek to remove the difficulties in the working of the Act. They are most welcome. So far as the appointment of Assistant Commissioners are concerned, I do not know what category of officers would be appointed as Assistant Commissioners As I know, the Assistant Commissioners are Sub-Divisional Officers who are entrusted with the work of assessment. The Deputy Commissioner is the appellate authority. I do not know whether it is the intention to entrust assessment and recovery to the Commercial Tax Department or not.

Some of the members have welcomed the inclusion of mustard and camphor. So far timber is concerned, it is sought to be taxed from the inception of this Act, that is, from 1957. But retrospective effect is to be given for timber and I do not know how far it is justifiable. Whereas some other items are to be taxed from April 1963 only. Timber is treated on a different footing and is to be taxed from 1957. I do not know whether it is possible to reopen the question now, that is, go into the past accounts. This would give room for the affected persons to go in appeal to the High Court and there would be endless litigation. Therefore it is desirable to have timber also included for taxation from 1963.

(SRI G. V. GOWDA)

So far as amendment to Section 5 is concerned, I welcome it. Sri Muckannappa argued that it would hit hard the agriculturists. He has not understood the spirit of the Act.

MR. SPEAKER.—The Hon'ble Member is safe. Sri Muckannappa is fortunately not here.

SRI G. V. GOWDA.—There are companies which have assets. They produce commercial crops which are liable to tax. The moneys paid to the farmers should not be treated as expenditure. Usually we know that lots of money are written down as money paid to agriculturists and thus the turnover is reduced. In order to avoid this evasion, this provision is good and I welcome it. Again, if a Managing Director is a partner, having an interst in the asset, it is his duty to work. If he works more, then there is increase in income. Out of the profits realised, after payment of income-tax, let them be paid more. But it is not correct to deduct this remuneration paid to a partner, as expenditure of the firm.

SRI A. P. APPANNA.—Any firm or company requires managers and staff. Why should there be a bar for employing their own people ?

SRI G. V. GOWDA.—They can employ and even the expenditure incurred on them can be deducted. But if a person has an interest in the asset, he should not be given fees or commission. That is what the amendment says.

SRI A. P. APPANNA.—In a company, no relative can be employed if one is already a director.

SRI G. V. GOWDA.—The Director has an interest in the company. There is scope for misuse and advantage being taken. It is desirable to have this provision.

So far as Explanatian II is concerned, I do not know how our Finance Minister would justify it. Unless immature plants are maintained and kept, no income is possible. The expenditure incurred to maintain immature plants must find a place in the expenditure list. There is no meaning in saying that that expenditure should not be deducted. Therefore, I request the Hon'ble Minister to reconsider this matter.

So far as giving a reasonable opportunity is concerned, I welcome it. Under clause 6 review power has been given. Here a discrimination is sought to be made. While the society files an application before the tribunal, they are required to pay a fee equal to that which has been given in the application. But for applications before the Deputy Commissioner they need not pay anything.

MR. SPEAKER.—The Deputy Commissioner does not spend from his pocket. He spends on behalf of the Government.

SRI G. V. GOWDA.—Supposing the Government files an appeal before the civil court, do not they have to pay stamp duty ?
My submission is that for anything and everything this Deputy Commissioner may send on applications for revision to the Tribunal. Of course they have got to pay and they have got to recover.

Mr. SPEAKER.—Recover from whom ?

Sri G. V. GOWDA.—From the assessee. I am going to speak on that aspect.

Mr. SPEAKER.—That is a new idea.

Sri G. V. GOWDA.—I think the amendment regarding appeal or review is not sound in principle and it is opposed to all principles of justice for this reason. Supposing an assessee, who is aggrieved, prefers an appeal because of the erroneous orders of the officer concerned something might have happened is he not entitled to recover the costs when the Tribunal decides ?

Mr. SPEAKER.—Which section up-till now provides ?

Sri G. V. GOWDA.—There is an appeal provided for the assessee to the Tribunal.

Mr. SPEAKER.—The point is, which section provides for costs to be recovered from the party who has failed ?

Sri G. V. GOWDA.—There is provision for the assessee to go in an appeal to the Tribunal.

Mr. SPEAKER.—Recovering costs is something different.

Sri G. V. GOWDA.—Section 35 of the Penal Procedure Code provides for recovery of costs and the Tribunal cannot say that property can be attached. But, if the Tribunal allows his appeal, should he not be given costs ?

Mr. SPEAKER.—I have no quarrel with the reasoning ? of the member.

Sri G. V. GOWDA.—The Government, in turn, should recover from the concerned officer responsible. Thereby, if there is no provision for such a thing, many of the assessees may not like to spend money and waste money by going in for appeals I do not think that will cut-away the scope for appeal or review. Many people may not resort to such things unless reasonable, or whatever the Court deems fit, cost is awarded.

With regard to 'Revision by Commissioner of Orders prejudicial to revenue', the same observation which I made in respect of the other Act, will hold good. I do not know how far this may prove successful in the interest of the working of the Act. The Hon'ble Minister has said yesterday that because the Commissioner has got other business to attend to, it is not possible for him to hear the appeal. The same thing may hold good in respect of this revision petition. When a provision is there, it is required to be done by him. But, how far this could be fulfilled depends upon the officer who is entrusted with the particular work.

I would now like to refer to "37. Rectification of mistake" at page 9, wherein it is stated as follows :—

> "(1) With a view to rectifying any mistake apparent from the record,—
>
> (a) the Agricultural Income-Tax Officer may amend any order of assessment or of refund or any other order passed by him ;"

(SRI G. V. GOWDA)

I am laying stress on the word '*him*'. The period within which this could be done is four years. Within four years the Agricultural Income-tax Officer or the Deputy Commissioner may amend any order of assessment passed by him. Does it apply to the person who passes the order or to any person who holds such office, is rather difficult to understand.

Mr. SPEAKER.—Is it a personal right that the officer carries in his individual capacity ?

Sri G. V. GOWDA.—When 'A' has decided a particular case under particular circumstances, he might know what has made him to come to that decision. It is not possible for the successor to take note of it.

Mr. SPEAKER.—That is why it is said " it is apparent on the face of the record. "

Sri G. V. GOWDA.—Supposing it is a clerical mistake, that error could be rectified. There is no reason why such an amendment is to be proposed. Even otherwise, 'apparent on the face of the record' could be rectified under the guise of this. But, something which is prejudicial to the assessee should not be done.

Mr. SPEAKER.—It should not be abused.

Sri G. V. GOWDA.—So far as 'Power to withhold refund in certain cases', is concerned, supposing the Agricultural Income-tax Officer has given a decision to refund certain sum and the matter would be taken in review before the Appellate Tribunal, could the Agricultural Income-tax Officer who decides to refund, again decide not to pay till the orders are passed ? I do not know how it could be justified.

Mr. SPEAKER.—It is stated as: 'likely to adversely affect the revenue.'

Sri G. V. GOWDA.—So far as the revision is concerned, it is all-right. But, the procedure as to how they have got to make recovery as sought to be made under item 55 at page 12, I do not think it is desirable to have so much incorporated in the Agricultural Income-Tax Act. The High Court have got their own rules. They have got revisional powers. Anybody aggrieved may go in revision to the High Court.

Mr. SPEAKER.—That is why it is provided. The High Court perhaps will have no power to avoid the delay.

Sri G. V. GOWDA.—Section 5 of the Limitation Act would apply in such a case.

Mr. SPEAKER.—'Not for a period of 60 days' provided under special Statute and there is a provision there :

Sri G. V. GOWDA.—It is stated :

> " The petition shall be in the prescribed form shall be verified in the prescribed manner, and shall, when it is preferred by the assessee, be accompanied by a fee of one hundred rupees. "

Supposing if it is by the Government........

Mr. SPEAKER.—Which clause exempts the Government? It reads "decision either by the Government or by anybody"

Sri G. V. GOWDA.—But, why by the assessee? That means the Government need not fix any Court fee when they prefer a petition for revision.

Mr. SPEAKER.—Is it Court fee? Are we competent to enact laws so as to cut-down the hands of the High Court? Rupees. 100/-mentioned here is not a court fee. It is not a court fee. It is a deposit. What happens in the case of an election petition to the Tribunal?

5-30 P.M.

Sri B. D. JATTI.—Rs. 2,000 are to be deposited when an election petition is sent to the Tribunal.

Mr. SPEAKER.—If it was court-fee, it should have been provided in the Court-fees Act. That deposit is prescribed with a view to restricting people from going in appeal on frivolous grounds.

Sri G. V. GOWDA.—He is the aggrived party. Why should he make a deposit? Whoever party perfers revision petition, he must make a deposit.

Mr. SPEAKER.—What is the nature of this amount? If the petitioner succeeds, will it be refunded? Suppose he fails, is it going to be given to the opposite party?

Sri B. D. JATTI.—It will be provided in the Rules, Sir.

Sri G. V. GOWDA.—If the High Court finds there is an unnecessary money paid, it will order a refund. Why should there be a provision here? It is unnecessary and unwarranted.

Mr. SPEAKER.—The High Court will not be able to pass the order unless there is a provision in this Act.

Sri G. V. GOWDA.—So far as giving retrospective effect to the rule, this is something that was unknown to me till to-day. It may have happened elsewhere. But we had known about giving retrospective effect to the enactments and sections of particular enactments. But to give retrospective effect to the rule, may not be sound, Sir.

Mr. SPEAKER.—Does the Hon'ble Member say that it is not good or that this Legislature has not the power to do it?

Sri G. V. GOWDA.—It is the executive which frames the rule. In that sense I say it is bad. In that sense, I would appeal to the Government to have this Bill referred to the Select Committee.

†ಶ್ರೀ ಎಸ್. ಗೋಪಾಲ ಸಾಲಿಯನ್ (ಮೂಡಬಿದ್ರಿ).—ಸ್ವಾಮಿ, ಸಾಮಾನ್ಯವಾಗಿ ಈ ಮಸೂದೆ ರೈತನ ಮೇಲೆ ಒಂದು ತೆರಿಗೆ ಹೊರೆಯನ್ನು ಹಾಕತಕ್ಕಂಥ ಮಸೂದೆ ಆಗಿದೆ ಇದು ಒಂದು ವೀಕರ್ ಸೆಕ್ಷನ ಮೇಲೆ, ಅಂದರೆ ಯಾರಿಗೆ ತೆರಿಗೆಯನ್ನು ಕೊಡುವುದಕ್ಕೆ ಚೈತನ್ಯವಿಲ್ಲವೋ ಅಂಥ ಜನರಮೇಲೆ ಈ ತೆರಿಗೆ ಬೀಳುವುದರಿಂದ ಇದರ ಮೂಲವನ್ನೇ ನಾನು ವಿರೋಧಿಸುತ್ತೇನೆ. ಸಾಮಾನ್ಯ ಜನರ ವಿರುದ್ಧ ಬರುವಂಥ ಮಸೂದೆಯನ್ನು ನಾನು ವಿರೋಧಿಸಲೇಬೇಕು. ಈಗಾಗಲೆ ಈ ಬಡರೈತನ ಮೇಲೆ ನೂರಾರು ತೆರಿಗೆ ಹೊರೆಗಳನ್ನು ಹಾಕಲಾಗಿದೆ. ಆದರೆ ಶ್ರೀಮಂತರಮೇಲೆ ಹಾಕಿರತಕ್ಕ ತೆರಿಗೆಯನ್ನು ಸರಿಯಾಗಿ ವಸೂಲು ಮಾಡಿದ್ದರೆ ಈಗ ಈ ತರಿಗೆ ಹಾಕಬೇಕಾದ ಅವಶ್ಯವಿರಲಿಲ್ಲ

(ಶ್ರೀ ಎಸ್. ಗೋಪಾಲ ಸಾಲೆನ್ನ)

ಈ ದಿವಸ ಈ ಆಡಳಿತ ವರ್ಗದಲ್ಲಿ, ಅಥವಾ ಮಂತ್ರಿ ಮಂಡಲದಲ್ಲಿ ರೈತ ಪ್ರತಿನಿಧಿ ಇದ್ದಿದ್ದರೆ ಈ ಮಸೂದೆ ಬರುತ್ತಿರಲಿಲ್ಲ ಎಂದು ನಾನು ಹೇಳುತ್ತೇನೆ. ಆದರೆ ಈ ದಿವಸ ಉಳುಮೆ ಮಾಡದವರೆಲ್ಲ ಉಳುಮೆ ಮಾಡತಕ್ಕವರೆಂದು ಹೇಳಿಕೊಂಡು ಮಂತ್ರಿಮಂಡಲದಲ್ಲಿ ಸೇರಿಕೊಂಡು, ತಾವು ರೈತನ ಪ್ರತಿನಿಧಿ ಎಂದು ಹೇಳಿಕೊಂಡು ಇಂಥ ಬಿಲ್ಲುಗಳನ್ನು ತರುತ್ತಿದ್ದಾರೆ. ಈ ದಿವಸ ಈ ಬೇಸಾಯದ ತೆರಿಗೆ ಎಂಬುದು ಯಾರಮೇಲೆ ಬೀಳುತ್ತದೆ? ದೊಡ್ಡ ಭೂಮಾಲೀಕರಮೇಲೆ ಬೀಳುವುದಿಲ್ಲ. ಜನಸಾಮಾನ್ಯರ ಮೇಲೆ ಬೀಳುತ್ತದೆ. ಆದುದರಿಂದ ನಾವು ಇದನ್ನು ವಿರೋಧಿಸಲೇ ಬೇಕಾಗಿದೆ. ಈ ದಿವಸ ತೆರಿಗೆ ಕೊಡದೆ ತಪ್ಪಿಸಿಕೊಂಡಿರತಕ್ಕಂಥ ಜನರೇನಿದ್ದಾರೆ ಅವರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಬಾಕಿ ಬರತಕ್ಕದ್ದಿದೆ. ಅದನ್ನು ವಸೂಲು ಮಾಡುವುದಕ್ಕೆ ಹೋಗದೆ ಈಗ ಹೊಸ ತೆರಿಗೆ ಹಾಕಲು ಹೊರಟಿದ್ದಾರೆ. ಮೊನ್ನೆ ಪೇಪರಿನಲ್ಲಿ ಓದಿದೆ ಖಾದಿ ಬೋರ್ಡಿನಲ್ಲಿ 60 ಲಕ್ಷ ರೂಪಾಯಿಗಳು ದುರುಪಯೋಗವಾಗಿದೆ ಎಂದು. ಅಲ್ಲಿ ಲೆಕ್ಕ ಪತ್ರಗಳೇ ಇಲ್ಲ ಎಂದು ಹೇಳುತ್ತಿದ್ದಾರೆ.

ಮೊನ್ನೆ ತಾನೇ ಶರಾವತಿ ಯೋಜನೆಗಾಗಿ ಕೊಂಡಿದ್ದ ಸಾವಿರಾರು ಮೂಟೆ ಸಿಮೆಂಟು ಮಾರಾಟವಾದ ಬಗ್ಗೆ ಸುದ್ದಿ ಬಂದಿದೆ. ಹೀಗೆ ಎಷ್ಟೋ ಲಕ್ಷಾಂತರದಷ್ಟು ಹಣ ಅಪವ್ಯಯವಾಗುತ್ತಿದೆ. ಇದನ್ನು ಉಳಿಸುವುದರ ಕಡೆಗೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ಎಂದು ನಾನು ಕೇಳಬೇಕಾಗಿದೆ. ಎಷ್ಟೋ ಕಡೆ ಯಂತ್ರ ಸಾಮಗ್ರಿಗಳನ್ನು ಹಾಗೇ ಕೈಗಾರಿಕೆಗಳಲ್ಲಿ ದುಂದು ವೆಚ್ಚಮಾಡುತ್ತಿರುವವರನ್ನ ಯಾರೂ ಕೇಳುತ್ತಿಲ್ಲ. ಸರಕಾರ ಇದರ ಬಗ್ಗೆ ಏಕೆ ತಕ್ಕ ಕಾರ್ಯಕ್ರಮ ತೆಗೆದುಕೊಂಡಿಲ್ಲ? ಕೇರಳ ರಾಷ್ಟ್ರದಲ್ಲಿ ಈ ರೀತಿ ಹಾಕಿದ್ದಾರೆ ಎಂದರೆ ಅಲ್ಲಿನ ಜನರ ಜೀವನ ಮಟ್ಟ ನೋಡಿಕೊಂಡು ಅದಕ್ಕೆ ತಕ್ಕಂತೆ ಹಾಕಿದ್ದಾರೆ. ಇಲ್ಲಿ ನೂರಕ್ಕೆ ನೂರರಷ್ಟು ಸರ್‌ಚಾರ್ಜ್ ಹಾಕಿರುವಂತೆ ಅಲ್ಲಿಲ್ಲ. ಬೇಸಾಯಗಾರರ ಉತ್ಪತ್ತಿಯಮೇಲೆ ಏಕೆ ಹಾಕಬೇಕು. ಭೂಮಾಲೀಕರು ಹಿಂದೆ ಉತ್ಪತ್ತಿ ಮಾಡುತ್ತಿರುವಷ್ಟು ಈಗ ಉತ್ಪನ್ನ ಮಾಡುತ್ತಿಲ್ಲ. 1951ನೇ ಇಸವಿಯಲ್ಲಿ ಸರಕಾರ ಕೊಟ್ಟಿರುವ ವಿವರಗಳಂತೆ ರಾಷ್ಟ್ರದ ಉತ್ಪನ್ನ ಹಿಂದೆ ಶೇಕಡಾ 56ರಷ್ಟು ಇದ್ದದ್ದು ಈಗ ಸುಮಾರು ಶೇಕಡಾ 46ರಷ್ಟು ಆಗಿ ಹಿಂದೆ ಹೋಗುತ್ತಿದೆ. ಇದರಿಂದ ದೇಶದ ಉತ್ಪನ್ನದ ಸ್ಥಿತಿ ಹಿಂದೆ ಹೋಗುತ್ತಿದೆಯೇ ಹೊರತು ಮುಂದೆ ಹೋಗುತ್ತಿಲ್ಲ. ಈ ವಿಚಾರ ಸರಕಾರ ಗಮನಕ್ಕೆ ತೆಗೆದುಕೊಂಡು ಆದಾಯದ ಉತ್ಪನ್ನ ಜಾಸ್ತಿಯಾಗುತ್ತಿದೆಯೋ ಕಡಿಮೆಯಾಗುತ್ತಿದೆಯೋ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಬೇಸಾಯ ವೃತ್ತಿಯನ್ನು ಕೆಳಮಟ್ಟಕ್ಕೆ ಇಳಿಸುವ ಮನೋವೃತ್ತಿ ಏಕೆ ಮಾಡುತ್ತೀರಿ ಎಂದು ಸರಕಾರವನ್ನು ಕೇಳಬೇಕಾಗಿದೆ. ತಾಂತ್ರಿಕ ಕೈಗಾರಿಕೆಗಳಲ್ಲಿ ದೊಡ್ಡ ದೊಡ್ಡ ಕಂಪನಿಗಳಲ್ಲಿ ಉತ್ಪನ್ನ ಬರುವಂತೆ ಬೇಸಾಯದ ಉತ್ಪನ್ನಗಳು ಬರುವುದಿಲ್ಲ. ಹೀಗಿರುವಾಗ ಸಾಮಾನ್ಯ ರೈತನಮೇಲೇಕೆ ಈ ಹೊರೆಯನ್ನು ಹಾಕಬೇಕು? ಬ್ಯಾಂಕರುಗಳಂತೆ ಬೇಸಾಯಗಾರರು ಸಂಪಾದನೆ ಮಾಡುತ್ತಿಲ್ಲ. ಬೇಸಾಯ ಮಾಡುವ ಜನ ದೊಡ್ಡ ದೊಡ್ಡ ಬ್ಯಾಂಕುಗಳಿಂದ ಸಾಲವನ್ನು ಪಡೆದು ಅದಕ್ಕೆ ಬಡ್ಡಿ ಕೊಟ್ಟು ಬೇಸಾಯ ಮಾಡುತ್ತಿರುವುದು ಸರಕಾರಕ್ಕೆ ತಿಳಿದಿರುವ ವಿಚಾರ. ಅವರ ಮೇಲೇಕೆ ಇಂತಹ ಹೊರೆ ಹೇರುತ್ತೀರಿ ಎಂದು ನಾನು ಕೇಳುತ್ತೇನೆ. ಆದುದರಿಂದ ಈ ಮಸೂದೆಯನ್ನು ಹಿಂತೆಗೆದುಕೊಳ್ಳುವುದು ಒಳ್ಳೆಯದು ಎಂದು ನಾನು ಅಭಿಪ್ರಾಯ ಪಡುತ್ತೇನೆ. ನಾವು ನಮ್ಮ ಕ್ಷೇತ್ರದ ಜನಗಳ ಕಷ್ಟಗಳನ್ನೆಲ್ಲಾ, ಬಡ್ಜೆಟ್ಟಿನ ಸಮಯದಲ್ಲಿ ಜನರಲ್ ಡಿಬೇಟಿನ ಸಂದರ್ಭದಲ್ಲಿ ಸರಕಾರದ ಗಮನಕ್ಕೆ ತರಲು ಹೇಳುತ್ತಲೇ ಬರುತ್ತಿದ್ದೇನೆ. ಆದರೆ ನಾವು ಎಷ್ಟು ಹೇಳಿದರೂ ಅದು ಬಂಡೆಗಲ್ಲಿನಮೇಲೆ ಬಡಿದು ನೀರು ತೆಗೆದಂತೆ ಆಗಿ ನಿರರ್ಥಕವಾಗುತ್ತಿದೆ. ಹಾಗೆ ನಾವು ಏನು ಮಾತನಾಡಿದರೂ ಅದು ಪರಿಣಾಮ ಕಾರಿಯಾಗುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಹೀಗಿರುವಾಗ ಇದರಮೇಲೆ ಮಾತನಾಡುವಾಗ clause by clauseನ ಮೇಲೆ ಹೀಗೇಕೆ ಸುಮ್ಮನೆ ಮಾತನಾಡಿ ಈ ಸಭೆಯ ಕಾಲಾವಕಾಶವನ್ನು ಹಾಳುಮಾಡಬೇಕೆಂದೆನಿಸುತ್ತಿದೆ. ಏನೋ ಜನತೆಯ ಪ್ರತಿನಿಧಿಗಳಾಗಿ ನಾವಿಲ್ಲಿ ಬಂದಿರುವುದರಿಂದ ಸರಕಾರದ ಗಮನವನ್ನು ಅದಷ್ಟು ಜಾಗ್ರತೆ ತರಲು ಹೇಳಲು ಇಲ್ಲಿಗೆ ಬಂದು ನಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೇವೆ. ತಾವು ಏನನ್ನು ಕೇಳುತ್ತೀರಿ, ಏನನ್ನು ಕೇಳುತ್ತಿಲ್ಲ ಎನ್ನುವುದನ್ನು ಜನತೆಯಲ್ಲಾ ನೋಡುತ್ತಿದ್ದಾರೆ. ಚುನಾವಣೆಗೆ ಮುಂಚೆ ತಾವು ಇದನ್ನು ಹೊರಿಸುತ್ತೇವೆ ಎಂದು ಮತದಾರರಲ್ಲಿ ಹೇಳಿದ್ದರೆ ಆಗ ಇದರ ಫಲ ನಿಮಗೆ ಗೊತ್ತಾಗುತ್ತಿತ್ತು. ಅವರೂ ಕೂಡ ನಿಮ್ಮ ಸ್ಥಾನಮಾನಗಳೇನು ಎನ್ನುವುದನ್ನೆಲ್ಲಾ ನೋಡಿಕೊಂಡಿದ್ದಾರೆ. ಇದನ್ನೆಲ್ಲಾ ತಾವು ಗಮನದಲ್ಲಿಟ್ಟುಕೊಂಡು ಈ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಈ ಮಾತುಗಳನ್ನು ಮುಗಿಸುತ್ತೇನೆ.

†SRI V. S. PATIL (Belgaum I).—So far as these amending Bills are concerned, the Minister for Finance, it appears, is more keen about not only increasing the taxes but also he is keen upon collecting them as efficiently as possible. We do not dispute that attempt but at the same time he must also concentrate his attention to the fact that the persons who are to be taxed must be helped to increase their own income. From that point of view, the Finance Minister is practically doing nothing. He is throwing the burden of helping those people to increase their income, on other departments. He is simply seeing that the Agriculture Department raises the crops and makes the profit; then he will come there and pounce upon them for these taxes. At the same time it is the duty not only of the Finance Minister but of the whole Cabinet and the Government to see that in the case of those on whom the burden of taxes is to be thrown, their position is improved. Without doing that, if we go on merely taxing, I think that will be a great hardship. Not only the Government Benches but we also are to be blamed by the public because we are presumed to be a party to it.

MR. SPEAKER.—We will meet at 8-30 A. M. tomorrow. Members have expressed their desire that it should be a morning session.

SRI V. S. PATIL.—Sir, We must make it a rule tomorrow that members should sit here till 12-30 P. M.

(*Laughter*)

MR. SPEAKER.—If anybody leaves the Hall, I will take due note of it. I will say that they are not anxious to take part in the Debate. (*Laughter*) To-day there is half-an-hour debate after 6 P.M.

SRI V. S. PATIL.—So, Sir, my submission is this. So far as this agricultural income-tax Bill is concerned, the best way was to help the agriculturists in several ways to increase their income.

[MR. DEPUTY SPEAKER in the Chair.]

For that purpose, I feel that the Government has done absolutely nothing. They have got many schemes before them like the digging of wells or irrigation. They are investing crores of rupees on the irrigation projects; they supply fertilizers. But, Sir, they are all on paper. Even, if they are executed, they are executed untimely. That is the greatest draw-back so far as help that is rendered by Government is concerned. On paper, all these schemes appear to be very good. For example, fertilizer is a controlled commodity. It has to be distributed in time and for reasonble price. What actually happens is, the work of distribution is given to some of the Co-operative sociaties or some of the persons who are either congressmen or congress minded men. The result is, all this substance which is meant for the agriculturist never reaches the real agriculturist at the proper time. If it is not supplied at the proper time, naturally, the production goes down. So, when we levy tax, we must see that the persons themselves are really prosperous, their family and their maintenance is not affected by this heavy taxation. For that, the Minister for Agriculture must see that the fertiliser that is supplised goes to the real agriculturist and not to

(SRI V. S. PATIL)

the black-market. Sir, I am a small cultivator and I have tried my level best to have Japanese method of paddy cultivation. But, I had to give up the idea because in spite of all efforts to get fertiliser in time, I could not obtain. I had to purchase it in the black-market at double the rate. We do not get the proper weight also. In black-market when we purchase, we cannot ask for a receipt; whatever that is given, we have to use on our land. All this makes it impossible for any one to improve agriculture. I have said this not only here, but when I was in the Bombay Assembly also, I have pointed out this defect. There is absolutely no improvement so far as supply of fertiliser is concerned. Therefore, I request the Minister for Finance to consider whether the agriculturist is able to bear this tax. That is the fundamental principle.

Then, Sir, when the original Bill was moved in this House on agricultural income-tax, I had said on that occasion that the enquiry paper which are done by the taxation officers and the person to be taxed or the assessee, should not be treated as confidential. This confidential matter clause was incorporated in the Income-tax Act (Central Act) because it was done at a time when we were governed by the imperialists. They wanted to see that their incomes or accounts are not atall known to the public. That is why even according to Mr. Thyagi's report, 200 to 300 crores of rupees is not paid to Government as income tax and that much of amount is evaded. This system gives scope for hiding accounts and their income easily. If that clause is removed, if my neighbour gives a false account, I can tell the Government that his income is much more than what he has stated and that the account maintained by him is not correct; now, it cannot be done. I, therefore, request the Hon'ble Minister to see whether this clause could not be removed. There will be certainly improvement in the recovery if this is done.

Regarding other clauses, I need not discuss because several Members have already addressed the House and some other members want to participate in the debate tomorrow. I therefore, conclude.

MR. DEPUTY SPEAKER.—Now, half-an hour discussion.

6-P.M.

Half-an-hour discussion on question No. 669 *re*: Land Revenue Assessment in the Bombay Karnataka area of the State.

SRI V. S. PATIL.—Sir, this discussion relates to a question No. 669 which I asked in this House and to which the Hon'ble Minister was pleased to give a reply. But the most imortant aspects of the question remains to be discussed. We expect not only an equitable levy of assessment but also equal levy in all respects. There should not be any sort of discrimination or distinction between persons residing in the area of the state and another. How this discrimination arises can be easily seen rom the levies or assessments levied and collected in our State. So far as